# ಹೊಸ ಮನುಷ್ಯ

ಸಮಾಜವಾದಿ ಮಾಸಿಕ

ಜನವರಿ, ೨೦೧೪ ಸಂಪಾದಕ : ಡಿ.ಎಸ್.ನಾಗಭೂಷಣ ಸಂಪುಟ: ೩ ಸಂಚಿಕೆ ೬

**ಚಂದಾ :** ವಾರ್ಷಿಕ: ರೂ. ೧೫೦/-(ವ್ಯಕ್ತಿಗಳಿಗೆ) ರೂ.೨೫೦/-(ಸಂಸ್ಥೆ/ಗ್ರಂಥಾಲಯಗಳಿಗೆ) ಬಿಡಿ ಪ್ರತಿ: ರೂ.೧೫/-



**ವಿಳಾಸ:** ಎಚ್.ಐ.ಜಿ-೫, 'ನುಡಿ', ಕಲ್ಲಳ್ಳಿ ಬಡಾವಣೆ, ವಿನೋಬ ನಗರ, ಶಿವಮೊಗ್ಗ-೫೭೭ ೨೦೪

**ದೂ:** ೦೮೧೮೨-೨೪೮೫೭೪ **ಸಂಚಾರಿ:** ೯೪೪೯೨ ೪೨೨೮೪ ***ಈ ಮೇಲ್:*** dsnagabhushana@gmail.com


## ಸಂಪಾದಕರ ಟಿಪ್ಪಣಿಗಳು

ಪ್ರಿಯ ಓದುಗರೇ,

ಕಳೆದ ತಿಂಗಳು ನಾಲ್ಕು ರಾಜ್ಯಗಳ ವಿಧಾನ ಸಭೆಗಳಿಗೆ ನಡೆದ ಚುನಾವಣೆಗಳಲ್ಲಿ ಕಣ್ಣಿಗೆ ಹೊಡೆಯುವ ಮತ್ತು ದೇಶದ ಸಾಮಾನ್ಯ ಪ್ರಜೆಗಳಲ್ಲಿ ಹೊಸ ಆಸೆ ಹುಟ್ಟಿಸಿರುವ ಫಲಿತಾಂಶವೆಂದರೆ, ದೆಹಲಿ ವಿಧಾನಸಭೆಯದ್ದು. ಅಲ್ಲಿ ಎಲ್ಲರ ನಿರೀಕ್ಷೆಗಳನ್ನೂ ಮೀರಿ, ಆಂ ಆದ್ಮಿ ಪಕ್ಷ ಕಾಂಗ್ರೆಸ್ ಮತ್ತು ಬಿಜೆಪಿಯೆಂಬ ಎರಡು ಬಲಿಷ್ಠ ರಾಷ್ಟ್ರೀಯ ಪಕ್ಷಗಳಿಗೂ ಗಂಭೀರ ಸವಾಲೆಸೆದು ೭೦ ಸ್ಥಾನಗಳ ವಿಧಾನಸಭೆಯಲ್ಲಿ ೨೮ ಸ್ಥಾನಗಳನ್ನು ಪಡೆದು ಎರಡನೇ ಅತಿ ದೊಡ್ಡ ಪಕ್ಷವಾಗಿ ಹೊರಹೊಮ್ಮಿದೆ. ಈಗ ಅದು ಅಲ್ಲಿ ಅಧಿಕಾರದ ಚುಕ್ಕಾಣಿ ಕೂಡ ಹಿಡಿದಿದೆ.

ದೇಶದ ಚುನಾವಣಾ ರಾಜಕಾರಣದ ಇತಿಹಾಸದಲ್ಲೇ ಇದೊಂದು ಕ್ರಾಂತಿ ಎಂದೇ ಹೇಳಬೇಕು. ಏಕೆಂದರೆ ಈ ಪಕ್ಷ ಹುಟ್ಟು ಪಡೆದು ಇನ್ನೂ ಒಂದು ವರ್ಷ ಕೂಡಾ ಆಗಿಲ್ಲ. ಹಾಗೇ ಇದು ಜನತೆಯನ್ನಷ್ಟೇ ನಂಬಿ, ಜನತೆಯ ಹಣವನ್ನಷ್ಟೇ ಆಧರಿಸಿ ಜನತೆಯ ನಡುವೆ, ಜನತೆಯಿಂದಲೇ ಬೆಳೆದ ಒಂದು ಪಕ್ಷ. ಇದರ ಅಭ್ಯರ್ಥಿಗಳೆಂದರೆ, ಬೀದಿ ಬದಿಯ ಮಿಠಾಯಿ ವ್ಯಾಪಾರಿ, ಮೊಹಲ್ಲಾದ ಪೈಲ್ವಾನ್, ಸ್ಪರ್ಧಾತ್ಮಕಕ ಪರೀಕ್ಷೆ ಕಟ್ಟಲು ಯಾವುದೇ ರಾಜ್ಯದಿಂದ ದೆಹಲಿಗೆ ಬಂದಿದ್ದ ಯುವಕ ಇತ್ಯಾದಿ. ಇವರ ನಾಯಕ ಕೇಜ್ರಿವಾಲ್, ಸತತ ಮೂರು ಬಾರಿ ಮುಖ್ಯ ಮಂತ್ರಿಯಾಗಿ ಹೆಸರು ಮಾಡಿದ್ದ ಶೀಲಾ ದೀಕ್ಷಿತರನ್ನು ಅವರದೇ ಪ್ರತಿಷ್ಠಿತ ನವದೆಹಲಿ ಕ್ಷೇತ್ರದಲ್ಲಿ ೨೫ ಸಾವಿರ ಮತಗಳ ಭಾರಿ ಅಂತರದಿಂದ ಸೋಲಿಸಿ ಈಗ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ್ದಾರೆ. ಅವರು ತಾವು, ತಮ್ಮ ಮಂತ್ರಿ ಮಂಡಲ ಮತ್ತು ಶಾಸಕಾಂಗ ಪಕ್ಷವು ಯಾವುದೇ ವಿಶೇಷ ಸರ್ಕಾರಿ ಸವಲತ್ತುಗಳಿಲ್ಲದೇ ಕಾರ್ಯ ನಿರ್ವಹಿಸುವುದಾಗಿ ಜನತೆಗೆ ವಚನವಿತ್ತಿದ್ದಾರೆ. ಹಾಗೇ ಕಾಲಬದ್ಧ ಕಾರ್ಯಕ್ರಮವಾಗಿ, ಮುಖ್ಯವಾಗಿ ಸುಲಭ ದರಗಳಲ್ಲಿ ನೀರು, ವಿದ್ಯುತ್ ಪೂರೈಕೆ, ಸರ್ಕಾರಿ ಆಸ್ಪತ್ರೆ ಮತ್ತು ಸರ್ಕಾರಿ ಶಾಲೆಗಳ ಸುಧಾರಣೆಯ ಮತ್ತು ಜನಲೋಕಪಾಲ್ ಕಾನೂನಿನ ಮಾದರಿಯಲ್ಲಿಯೇ ದೆಹಲಿ ರಾಜ್ಯದಲ್ಲಿ ಭ್ರಷ್ಟಾಚಾರ ತಡೆ ಕಾಯಿದೆಯನ್ನು ಜಾರಿಗೆ ತರುವ ಪಕ್ಷದ ಬದ್ಧತೆಯನ್ನು ಪುನರುಚ್ಚರಿಸಿದ್ದಾರೆ.

ಬಹುಮತಕ್ಕೆ ಎಂಟು ಸ್ಥಾನಗಳನ್ನು ಕಡಿಮೆ ಪಡೆದಿರುವ ಕಾರಣದಿಂದಾಗಿ ಕಾಂಗ್ರೆಸ್ ನೀಡಲು ಮುಂದೆ ಬಂದಿರುವ ಬೆಂಬಲದೊಂದಿಗೆ ಸರ್ಕಾರ ರಚಿಸಿರುವ ಆಂ ಆದ್ಮಿ ಪಕ್ಷ, ತನ್ನ ಹದಿನೆಂಟು ಜನಪರ ಕಾರ್ಯಕ್ರಮಗಳ ಜಾರಿಯಲ್ಲಿ ಕಾಂಗ್ರೆಸ್ ಯಾವುದೇ ತಡೆ ಉಂಟು ಮಾಡಿದಲ್ಲಿ-ಈಗಾಗಲೇ ಅದು ಆ ಸೂಚನೆಗಳನ್ನು ನೀಡತೊಡಗಿದೆ- ಅಂದೇ ಸರ್ಕಾರವನ್ನು ವಿಸರ್ಜಿಸಿ ಜನತೆಯ ಮುಂದೆ ಮುಂದಿನ ಆದೇಶಕ್ಕಾಗಿ ಹೋಗುವುದಾಗಿ ಘೋಷಿಸಿದೆ. ಇನ್ನು, ಸರ್ಕಾರ ರಚನೆ ಮಾಡುವುದಿಲ್ಲವೆಂದು ಹೇಳಿ, ನಂತರ ಆಂ ಆದ್ಮಿ ಪಕ್ಷಕ್ಕೆ ಬೆಂಬಲ ನೀಡುವುದಾಗಿ ಘೋಷಿಸಿದ್ದ ಬಿಜೆಪಿ ಈಗ ಹೊಸ ಸರ್ಕಾರ ರಚನೆಯಾದೊಡನೆ ಜನತೆಗೆ ಮೋಸವಾಗಿದೆ ಎಂದು ಕೂಗಾಡತೊಡಗಿದೆ! ಆದರೆ ಜನತೆ ಅದನ್ನು ನಂಬಲು ನಿರಾಕರಿಸಿದೆ. ಏಕೆಂದರೆ ನಿಜವಾದ ಜನತೆಯ ರಾಜಕಾರಣದ ಮಹಾ ಪ್ರಯೋಗವೊಂದನ್ನು ಅವರು ತುಂಬು ಕುತೂಹಲದಿಂದ ನೋಡುತ್ತಿದ್ದಾರೆ. ಉದಾಹರಣೆಗೆ,



ಅಲ್ಪಸಂಖ್ಯಾತವಾಗಿದ್ದೂ ಸರ್ಕಾರ ರಚಿಸುವ ಒತ್ತಡ ತನ್ನ ಮೇಲೆ ಬಿದ್ದಾಗ ಆಂ ಆದ್ಮಿ ಪಕ್ಷ ಅನುಸರಿಸಿದ ಮಾರ್ಗವಾದರೂ ಯಾವುದು? ಅದು ಗಾಂಧೀಜಿಯ 'ಸ್ವರಾಜ್ಯ' ರಾಜಕಾರಣದ ಮಾದರಿಯಲ್ಲಿ ಜನತಾ ಸಭೆಗಳನ್ನು ನಡೆಸಿ ಅಲ್ಲಿ ಜನಾಭಿಪ್ರಾಯ ಸಂಗ್ರಹಿಸಿತು! ಎಲ್ಲ ಪಕ್ಷಗಳೂ, ವೀಕ್ಷಕರೂ ಸೇರಿದಂತಹ ನಮ್ಮ ಸಾಂಪ್ರದಾಯಿಕ ರಾಜಕೀಯ ವ್ಯವಸ್ಥೆ ಇದನ್ನು ಕಂಡು ಗಾಬರಿ ಬಿದ್ದು ಇನ್ನೂ ಸುಧಾರಿಸಿಕೊಳ್ಳುವ ಸ್ಥಿತಿಯಲ್ಲಿದೆ! ಹಾಗಾಗಿಯೇ ಇದು ಗಾತ್ರದಲ್ಲಿ ಪುಟ್ಟದೇ ಆದರೂ, ಗುಣಾತ್ಮಕವಾಗಿ ಒಂದು ದೊಡ್ಡ ಕ್ರಾಂತಿಯ ನಾಂದಿಯೇ ಹೌದು.

ಕೇಜ್ರಿವಾಲರು ಅಣ್ಣಾ ಹಜಾರೆ ಆಂದೋಲನದ ಭಾಗವಾಗಿ, ಅದರ ಮುಖ್ಯ ವಕ್ತಾರನಾಗಿ ಆ ಆಂದೋಲನ ರೂಪಿಸಿ ಕೊಟ್ಟಿದ್ದ ಜನಲೋಕಪಾಲ ಕಾನೂನು ಮಾತ್ರ ಭ್ರಷ್ಟರ ವಿರುದ್ಧ ಪರಿಣಾಮಕಾರಿ ಅಸ್ತ್ರವಾಗಬಲ್ಲುದೆಂಬ ತಮ್ಮ ನಂಬಿಕೆಯನುಸಾರ ಸಂಸತ್ತು ಆ ಕಾನೂನನ್ನೇ ಅಂಗೀಕರಿಸಬೇಕೆಂದು ಪಟ್ಟು ಹಿಡಿದರು. ಆಗ ನಮ್ಮ ರಾಜಕೀಯ ಪಕ್ಷಗಳು ಮತ್ತು ರಾಜಕೀಯ ವೀಕ್ಷಕರೂ, ವ್ಯಾಖ್ಯಾನಕಾರರೂ ಅವರನ್ನು ಒಂದು ಹಿಡಿ ಮಧ್ಯಮ ವರ್ಗದ ವಕ್ತಾರರು ಮಾತ್ರ ಎಂದು ಜರಿದು, ಇಂತಹವರು ಜನತೆಯ ನಿಜ ಪ್ರತಿನಿಧಿಯಾಗಿರುವ ಸಂಸತ್ತಿನ ಮೇಲೆ ಒತ್ತಡ ಹೇರಿ ಹೀಗೆ ಸವಾರಿ ಮಾಡತೊಡಗುವುದು ಅಪ್ರಜಾಸತ್ತಾತ್ಮಕ ಎಂದು ಟೀಕಿಸಿದರು. ಮಾಹಿತಿ ಹಕ್ಕು ಚಳುವಳಿಕಾರರಾಗಿ, ಸ್ವರಾಜ್ಯ ಆಂದೋಲನದ ಕಾರ್ಯಕರ್ತರಾಗಿ ಜನತೆಯ ನಡುವ ಕ್ರಿಯಾಶೀಲರಾಗಿದ್ದ ಕೇಜ್ರಿವಾಲ್ ಜನತೆಯ ನಾಡಿ ಮಿಡಿತ ಅರಿತವರಾಗಿ ತಮ್ಮ ಟೀಕಾಕಾರರ ಈ ಸವಾಲನ್ನು ಸ್ವೀಕರಿಸಿ ತಮ್ಮ 'ಆಂ ಆದ್ಮಿ ಪಕ್ಷ' ಸ್ಥಾಪಿಸಿದರು. ಅವರೀಗ ಅನತಿ ಕಾಲದಲ್ಲೇ ಈ ಸಂಸತ್ತು ಹೇಗೆ ನಮ್ಮ ಪ್ರಜಾಪ್ರಭುತ್ವದ ಅಣಕ ಮಾತ್ರವಾಗಿದೆ ಎಂಬುದನ್ನು ತಮ್ಮ ಈ ಒಂದು ಮಾದರಿ ಯಶಸ್ವಿ ಪ್ರಯೋಗದ ಮೂಲಕ ಸಾಬೀತುಪಡಿಸಿದ್ದಾರೆ. ಅಷ್ಟೇ ಅಲ್ಲ, ತನ್ನ ನಿಜ ಮತ್ತು ವಿಶ್ವಾಸಾರ್ಹವಾದ ಸಂಘಟಿತ ಧ್ವನಿಯಿಲ್ಲದ ಕಾರಣ ಮಾತ್ರ ಜನತೆ ಈ ಸಂಪ್ರಾದಾಯಿಕ ರಾಜಕೀಯ ಪಕ್ಷಗಳ ಭ್ರಷ್ಟ ರಾಜಕಾರಣವನ್ನು ಸಹಿಸುತ್ತಿತ್ತಷ್ಟೆ ಎಂಬುದೂ ಈಗ ಸಾಬೀತಾಗಿದೆ. ಇಲ್ಲಿ ಗಮನಿಸಬೇಕಾದ ಇನ್ನೊಂದು ಮುಖ್ಯ ಸಂಗತಿಯೆಂದರೆ, ಈ ಪಕ್ಷಕ್ಕೆ ಸರ್ವ ಜಾತಿ-ವರ್ಗಗಳ ಬೆಂಬಲವೂ ದೊರೆತಿರುವುದು. ಈ ಪಕ್ಷ ೨೮ ಸ್ಥಾನಗಳಲ್ಲಿ ಗೆದ್ದಿದ್ದರೆ, ೨೨ ಸ್ಥಾನಗಳಲ್ಲಿ ಎರಡನೇ ಸ್ಥಾನದಲ್ಲಿದೆಯಲ್ಲದೆ; ೧೨ ಮೀಸಲು ಕ್ಷೇತ್ರಗಳಲ್ಲಿ ಎಂಟನ್ನು ಗೆದ್ದುಕೊಂಡಿದೆ.

ಈ ಇಡೀ ವಿದ್ಯಮಾನದ ಒಂದು ವಿಷಾದಕರ ಸಂಗತಿಯೆಂದರೆ, ಕೇಜ್ರಿವಾಲರ ಈ ಪ್ರಯೋಗದ ಬಗ್ಗೆ ಅಣ್ಣಾ ಹಜಾರೆ ಅಡ್ಡ ಮಾತುಗಳನ್ನೇ ಆಡುತ್ತಿದ್ದುದು. ಇವರ ಆಂದೋಲನದ ಆರಂಭದಿಂದಲೂ ಕಂಡುಬಂದಂತೆ, ಮೂಲತಃ ಪರಿಮಿತ ವ್ಯಕ್ತಿತ್ವದವರಾದ ಅಣ್ಣಾ ಒಂದು ಎಲ್ಲೆಯವರೆಗಿನ ನಡಿಗೆಯ ಗುರಿ ಇಟ್ಟುಕೊಂಡವರು. ಅದರಾಚೆ ಅವರಿಗೆ ಅಪರಿಚಿತ ಸವಾಲುಗಳು ಎದುರಾಗುವ ಅತಂಕ; ರಾಜಕಾರಣದಲ್ಲಿ ಕಳೆದು ಹೋಗುವ ಭಯ. ಆದರೆ ಇಂದಿನ ಸಂಕೀರ್ಣ ಸಂದರ್ಭದಲ್ಲಿ ಯಾವುದೇ ಸಮಸ್ಯೆ ಒಂದು ರಾಜಕೀಯ ತಾರ್ಕಿಕ ಅಂತ್ಯ ಕಾಣದೆ ಸಂಪೂರ್ಣ ಪರಿಹಾರವಾಗದು ಮತ್ತು ಜನತೆಯ ರಾಜಕಾರಣದ ಮೂಲಕ ಇದನ್ನು ಸಾಧಿಸಬಹುದು ಎಂಬ ಅರಿವಿಗೆ ತೆರೆದುಕೊಂಡ ಮನಸ್ಸು ಕೇಜ್ರಿವಾಲಾರದ್ದು. ಈ ಸಾಹಸದಲ್ಲಿ ಕೇಜ್ರಿವಾಲ್ ತೋರಿದ ದಿಟ್ಟತನ, ದಕ್ಷತೆ ಮತ್ತು ಸಾಧನೆ ಅಣ್ಣಾ ನಿರೀಕ್ಷೆಗೂ ಮೀರಿದ್ದಾಗಿ ಅವರಿಗೆ ಮುಜುಗರವನ್ನುಂಟು ಮಾಡಿತೆಂದೇ ಕಾಣುತ್ತದೆ. ಹಾಗಾಗಿಯೇ ಅವರು ಲೋಕಪಾಲ ಮಸೂದೆಗಾಗಿ ಇದ್ದಕ್ಕಿದ್ದಂತೆ ಉಪವಾಸ ಕೂತು ಆ ಮುಜುಗರವನ್ನು ಮುಚ್ಚಿಕೊಳ್ಳಲು ಯತ್ನಿಸಿದರು. ಆದರೆ ಮುಖ್ಯವಾಗಿ ಕೇಜ್ರಿವಾಲರ ಚುನಾವಣಾ ಸಾಧನೆಯ ಒತ್ತಡದಿಂದಾಗಿಯೇ ಸರ್ಕಾರಿ ಲೋಕಪಾಲ ಮಸೂದೆ ಸಂಸತ್ತಿನಂದ ತರಾತುರಿಯಾಗಿ ಅಂಗೀಕಾರವಾದಾಗ ಅದಕ್ಕಾಗಿ ಅಣ್ಣಾ ಕಾಂಗ್ರೆಸ್ ಮತ್ತು ಬಿಜೆಪಿಗೆ ಕೃತಜ್ಞತೆ ಸಲ್ಲಿಸುವ ಮೂಲಕ ತಾವು ಮುಚ್ಚಿಕೊಂಡ ಈ ಮುಜುಗರವನ್ನು ಕಪಿ ರೂಪದಲ್ಲಿ ಹೊರ ಚೆಲ್ಲಿದರೆಂದೇ ಹೇಳಬೇಕು. ಇದು ಅನಗತ್ಯವಾಗಿತ್ತು.

ಅದೇನೇ ಇರಲಿ, ಕೇಜ್ರಿವಾಲರಿಗೆ ಇದು ಆರಂಭಿಕ ಅಗ್ನಿ ಪರೀಕ್ಷೆಯಷ್ಟೇ. ಸಾಂಪ್ರದಾಯಿಕ ರಾಜಕಾರಣವು ಅವಾಸ್ತವಿಕ ಮತ್ತು ಬೊಗಳೆ ಎಂದು ಕರೆಯುತ್ತಿರುವ ಆದರ್ಶಗಳನ್ನು ನಂಬಿರುವ ಅವರು ಮತ್ತು ಅವರ ಪಕ್ಷ ಮೈಯೆಲ್ಲ ಕಣ್ಣಾಗಿ ಮುಂದಿನ ಹೆಜ್ಜೆಗಳನ್ನಿಡಬೇಕಿದೆ. ಹಾದಿ ದುರ್ಗಮವಾಗಿದೆ! ಒಂದು ಸಣ್ಣ ತಪ್ಪು ಹೆಜ್ಜೆಯೂ ಅವರು ಈವರೆಗೆ ಕ್ರಮಿಸಿರುವ ದಾರಿಯನ್ನೆಲ್ಲ ಅಳಿಸಿ ಹಾಕಬಲ್ಲುದು. ವಿಶೇಷವಾಗಿ ರಾಷ್ಟ್ರ ರಾಜಕಾರಣ ಮಾಡ ಹೊರಟಾಗ ಅದು ರಾಷ್ಟ್ರದ ಸಾಮಾಜಿಕ–ರಾಜಕೀಯ–ಸಾಂಸ್ಕೃತಿಕ ವೈವಿಧ್ಯತೆಗಳನ್ನು ಸೂಕ್ಷ್ಮವಾಗಿ ಗಮನಿಸಿ ತನ್ನ ಆದ್ಯತೆ, ಪರಿಭಾಷೆ ಮತ್ತು ತಂತ್ರಗಳಲ್ಲಿ ಸಣ್ಣಪುಟ್ಟ ಬದಲಾವಣೆಗಳನ್ನು ಮಾಡಿಕೊಳ್ಳಬೇಕು. ಆ ವಿವೇಕ ಯೋಗೇಂದ್ರ ಯಾದವ್‌ರಂತಹ ಸಮರ್ಥ ತಾತ್ವಿಕ ಸಲಹಾಕಾರರನ್ನು ಪಡೆದ ಆಂ ಆದ್ಮಿ ಪಕ್ಷಕ್ಕಿದೆಯೆಂದು ಭಾವಿಸೋಣ. 'ಆಂ ಆದ್ಮಿ'ಗೆ ಶುಭವಾಗಲಿ!

## ಲೈಂಗಿಕ ದೌರ್ಜನ್ಯಗಳೋ, ದುರಂತಗಳೋ?

ಮೊದಲಿಗೇ ಒಂದು ಮಾತು: ನಾನು ಇಲ್ಲಿ ತರುಣ್ ತೇಜ್‌ಪಾಲ್‌ರನ್ನಾಗಲಿ, ನ್ಯಾ. ಗಂಗೂಲಿಯವರನ್ನಾಗಲೀ ಸಮರ್ಥಿಸಲು ಹೊರಟಿಲ್ಲ. ಅವರು ಮಾಡಿರಬಹುದಾದ ತಪ್ಪುಗಳಿಗೆ ಸಂಬಂಧಪಟ್ಟ ಕಾನೂನುಗಳ ಪ್ರಕಾರ ಶಿಕ್ಷೆಯಾಗಲಿ. ಆದರೆ ಈ ಪ್ರಕರಣಗಳು ಕಳೆದ ಒಂದು ತಿಂಗಳಲ್ಲಿ 'ಲೈಂಗಿಕ ದೌರ್ಜನ್ಯ' ಎಂಬ ಹೆಸರಿನಲ್ಲಿ ಪಡೆದಿರುವ ಪ್ರಚಾರದ ಸ್ವರೂಪ ಮತ್ತು ಹಾಗಾಗಿ ಅವು ಹಿಡಿದಿರುವ ದಿಕ್ಕು ದೆಸೆಗಳು ನಮ್ಮ ಸಮಾಜದ ಮಾನವ ಸಂಬಂಧಗಳ ಪಾತಳಿಯಲ್ಲಿ ಒಂದು ನಿರ್ಣಾಯಕ ಪಲ್ಲಟವನ್ನೇ ಉಂಟು ಮಾಡುವ ಆತಂಕವನ್ನು ಸೃಷ್ಟಿ ಮಾಡಿವೆ ಎಂಬುದೇ ನನ್ನ ಆತಂಕ. ಈ ಎರಡೂ ಪ್ರಕರಣಗಳನ್ನು ನಮ್ಮ ಮಾಧ್ಯಮಗಳೂ ಸೇರಿದಂತೆ ಇಂದಿನ ವ್ಯವಸ್ಥೆಯ ಪಟ್ಟಭದ್ರ ಹಿತಾಸಕ್ತಿಗಳು ಈಗಾಗಲೇ ಚರ್ಚಿತವಾಗುತ್ತಿರುವ ತಮ್ಮ ರಾಜಕೀಯ ಉದ್ದೇಶಗಳಿಗಾಗಿಯೋ ಅಥವಾ ಇಂದಿನ ಬದುಕಿನ ಅಗತ್ಯಗಳಲ್ಲಿ ಒಂದಾಗಿಬಿಟ್ಟಿರುವ ರೋಚಕತೆಯ ಸೃಷ್ಟಿಗಾಗಿಯೋ ಔಚಿತ್ಯ ಮೀರಿ ವ್ಯಾಖ್ಯಾನಿಸಿ ಈ ಪ್ರಕರಣಗಳ ಹಿಂದಿರುವ ಬಹು ಆಯಾಮಗಳ ಮೂಲ ಸಮಸ್ಯೆಯನ್ನು ಗಂಡು ಲೈಂಗಿಕತೆಯ ಏಕಾಯಾಮಕ್ಕೆ ಇಳಿಸಿ 'ಮಜಾ' ತೆಗೆದುಕೊಳ್ಳುತ್ತಿರುವಂತಿದೆ. ಈ ರೋಚಕತೆ–ಮಜಾಗಳ ಮಧ್ಯೆ, ಮೊದಲಾಗಿ ಆರೋಪಿಗಳ ಕಡೆಯ ಮಾತು/ವಾದಗಳನ್ನು ಕೇಳಲು ಅವಕಾಶವೇ ಇಲ್ಲದಾಗಿದೆ. ಬರೀ ಉಬ್ಬರದ ಸ್ತ್ರೀವಾದದ ಗಲಾಟೆ ಸುಸ್ತು ಮಾಡಿದೆ.

ನಿಜ, ಈ ದಿನಗಳಲ್ಲಿ ಲೈಂಗಿಕ ದೌರ್ಜನ್ಯ ಮತ್ತು ಅತ್ಯಾಚಾರಗಳ ಸಂಖ್ಯೆ ಮತ್ತು ವೈವಿಧ್ಯ ಗಾಬರಿ ಹುಟ್ಟಿಸುವಷ್ಟು ಹೆಚ್ಚಿದೆ. ಆದರೆ ಇದಕ್ಕೆ ಈಗ ಆಪಾದಿಸಲಾಗುತ್ತಿರುವಂತೆ ಅನಿಯಂತ್ರಿತ ಗಂಡು ಗಂಡು ಲೈಂಗಿಕತೆಯಷ್ಟೇ ಕಾರಣವೇ? ಅಥವಾ ಬೇರೆ ಕಾರಣಗಳೂ ಇವೆಯೆ? ಈ ಬಗ್ಗೆ ಸಾಕಷ್ಟು ಕುತೂಹಲಕಾರಿ ಒಳನೋಟಗಳುಳ್ಳ ಅಧ್ಯಯನಗಳು ನಡೆದಿವೆಯಾದರೂ ಈ ಸುದ್ದಿ ಅಬ್ಬರದಲ್ಲಿ ಅವುಗಳ ಸೂಕ್ಷ್ಮಾವಲೋಕನ ಯಾರಿಗೂ ಬೇಡವಾದಂತಿದೆ. ಗಂಡು–ಹೆಣ್ಣಿನ ನಡುವಣ ಸಮಾನತೆಯ ಪರಿಕಲ್ಪನೆ ಜಾಗತೀಕರಣವೆಂಬ ಹುಚ್ಚು ಹೊಳೆಯಲ್ಲಿ ವಿಕ್ಷಿಪ್ತತೆಯ ತುದಿ ಮುಟ್ಟಿ, ಹೆಣ್ಣೂ ಗಂಡಾಗುವುದರಲ್ಲಿ ತನ್ನ ಸಾರ್ಥಕತೆಯನ್ನು ಕಂಡುಕೊಳ್ಳುತ್ತಿದೆಯಲ್ಲವೇ? ಈಗ ಈ ಎರಡೂ 'ಗಂಡು'ಗಳು ತಮ್ಮ ನಡುವಣ ಮೂಲ ನೈಸರ್ಗಿಕ ಸಮತೋಲನ ಭಂಗಗೊಂಡಿರುವ ಅಶಾಂತಿಯಲ್ಲಿ ನಿಜ ಮತ್ತು ಮೂಲ ಹೆಣ್ಣಾದ ಭೂಮಿಯ ಮೇಲೆ ನಡೆಸುತ್ತಿರುವ ಅತ್ಯಾಚಾರದ ವಿವಿಧ ಆವೃತ್ತಿಗಳಾಗಿ ಈ ಹೆಚ್ಚುತ್ತಿರುವ ಅತ್ಯಾಚಾರಗಳನ್ನು ನೋಡಬಹುದಲ್ಲವೇ? ಜಾಗತೀಕರಣವನ್ನು ಒಂದು ರಾಜಕೀಯ ವಿದ್ಯಮಾನವನ್ನಾಗಿ ನೋಡುವ ಬೌದ್ಧಿಕ ಉತ್ಸಾಹ–ಸಂಭ್ರಮಗಳಲ್ಲಿ ನಾವು ಅದನ್ನು ಮೂಲತಃ ಒಂದು ಅತ್ಯಂತ ಅನಾಹುತಕಾರಿ ಮಾನವ ದುರಂತವಾಗಿ ನೋಡಬೇಕಾದ ಕಣ್ಣನ್ನೇ, ಕ್ಷಮಿಸಿ ಹೃದಯವನ್ನೇ ಕಳೆದುಕೊಂಡಿದ್ದೇವೆಯೇ? ಅದು ಅಕ್ಷರಶಃ ಮನುಷ್ಯನ ದೇಹ ಮತ್ತು ಅದನ್ನು ಕುರಿತ ಅವನ ಪರಿಕಲ್ಪನೆಯ ಮೇಲೆ ಎಂತಹ ರೂಕ್ಷ ದಾಳಿಯನ್ನು ಮಾಡುತ್ತಿದೆ ಎಂಬುದರ ಬಗ್ಗೆ ನಾವು ಅಗತ್ಯ ಗಮನ ಹರಿಸಿದ್ದೇವೆಯೇ? ಅಂದರೆ ಇಂದಿನ ಲೈಂಗಿಕ ಅತ್ಯಾಚಾರಗಳನ್ನು ಜಾಗತೀಕರಣದ ಹೆಸರಿನಲ್ಲಿ ಮನುಷ್ಯನ ಮೈ ಮನಸ್ಸುಗಳ ಮೇಲೆ ನಡೆಯುತ್ತಿರುವ ಅತ್ಯಾಚಾರದ ಭಾಗವಾಗಿ ನೋಡಿದಾಗ ಮಾತ್ರ ನಮಗೆ ಮೂಲ ಸಮಸ್ಯೆಯ ಪರಿಹಾರದ ಹೊಳಹು ಸಿಗುತ್ತದಲ್ಲವೇ?

ಮನುಷ್ಯನ ಹುಚ್ಚು ಗ್ರಾಹಕತನ, ಅದು ಅವನ/ಳಲ್ಲಿ ಕೃತಕವಾಗಿ ಹುಟ್ಟಿಸುವ ಮಹತ್ವಾಕಾಂಕ್ಷೆ ಮತ್ತು ಅದನ್ನು ಪೋಷಿಸಲು ಅದು ಸೃಷ್ಟಿಸುತ್ತಿರುವ ರೂಕ್ಷ ಬೆಡಗು–ಬಿನ್ನಾಣಗಳ ರೂಪಗಳು ಅವನ/ಳ ಮೈ ಮೇಲೆ ಮತ್ತು ಆ ಮೈ ಒಳಗಿರುವ ಕಾಮ ಕೇಂದ್ರದ ಮೇಲೆ ಎಂತಹ ಹೊಸ ಒತ್ತಡಗಳನ್ನು ಹಾಕುತ್ತಿವೆ ಎಂಬುದನ್ನೇ ನಾವು ಗಮನಿಸದೆ; ಹೊಸ 'ಸಂಸ್ಕೃತಿ'ಯ ಮಾನವ ವರ್ತನೆಗಳನ್ನು ಹಳೆಯ ಸಂಸ್ಕೃತಿಯ ನೈತಿಕತೆಯ ಮಾನದಂಡಗಳಿಂದ 'ಮೌಲ್ಯ'ಮಾಪನ ಮಾಡುವ ಆತ್ಮದ್ರೋಹಿತನವನ್ನು ನಾವಿಂದು ಪ್ರದರ್ಶಿಸುತ್ತಿದ್ದೇವಲ್ಲವೇ? ಸದರಿ ಎರಡೂ ಪ್ರಕರಣಗಗಳನ್ನೇ ಗಮನಿಸುವುದಾದರೆ, ಇಬ್ಬರೂ(ನಾಲ್ವರೂ?) ಕುಡಿದ ಅಮಲಿನಲ್ಲಿದ್ದರು ಮತ್ತು ಮೈಮನಸ್ಸುಗಳೆರಡನ್ನೂ ಉನ್ಮಾದಕ್ಕೀಡುಮಾಡುವಂತಹ ಪಂಚತಾರಾ ವಾತಾವರಣದಲ್ಲಿ ಅವರು ಇಬ್ಬಿಬ್ಬರೇ ಇದ್ದರು ಮತ್ತು ಆ ಇರುವಿಕೆ ಅವರದೇ ಆಯ್ಕೆಯಾಗಿತ್ತು ಎಂಬುದನ್ನೂ ನಾವು ಗಮನಿಸಬೇಕಲ್ಲವೇ? ಈ ದೃಷ್ಟಿಯಿಂದ ಈ ಎರಡು ಪ್ರಕರಣಗಳನ್ನೂ ಗಂಡೊಬ್ಬನೇ ನಡೆಸಿದ ಲೈಂಗಿಕ ದೌರ್ಜನ್ಯಗಳಾಗಿರದೆ, ಅವನ್ನು ಲೈಂಗಿಕ ದುರಂತಗಳೆಂದು ಕರೆಯುವುದು ಅವನ್ನು ಬಿಡಿಸಿ ಇತ್ಯರ್ಥಪಡಿಸುವ ದೃಷ್ಟಿಯಿಂದ ಹೆಚ್ಚು ಉಚಿತವೆನಿಸುತ್ತದಲ್ಲವೇ?

ಈ ದೃಷ್ಟಿಯಿಂದ ಈ ಪ್ರಕರಣಗಳನ್ನು ಈಗ ಸಾರ್ವಜನಿಕವಾಗಿ ನಿರ್ವಹಿಸುತ್ತಿರುವ ರೀತಿ ತೀರಾ ಅಗ್ಗ ಮತ್ತು ಜಿಗುಪ್ಸೆಕರ ಎನಿಸುತ್ತಿದೆ. ಇದು ಈ ಜಗತ್ತಿನ ಸೃಷ್ಟಿಶೀಲತೆ, ಮಾಂತ್ರಿಕತೆ ಮತ್ತು ಮಾರ್ದವತೆಗಳಿಗೆ ಮೂಲ ಕಾರಣವಾಗಿರುವ ಗಂಡು–ಹೆಣ್ಣಿನ ಸಂಬಂಧದ ಸಹಜತೆಯನ್ನೇ ಹಾಳುಗೆಡಹಿ ಸಮಾಜವನ್ನು ಲೈಂಗಿಕ ಸೆರೆಮನೆಗಳನ್ನಾಗಿ ಪರಿವರ್ತಿಸಿಬಿಡುವ ಅಪಾಯವಿದೆ. ಗಂಡು ಹೆಣ್ಣಿನ ನಡುವಣ ಸಂಬಂಧ ವೈಯುಕ್ತಿಕ ನೆಲೆಯ ಮತ್ತು ಪರಸ್ಪರ ಜವಾಬ್ದಾರಿಯ ಸಂಬಂಧವನ್ನಾಗಿ ನೋಡಲು ನಿರಾಕರಿಸುವ ಸಮಾಜಕ್ಕೆ ಸಂಸ್ಕೃತಿಯೂ ಇಲ್ಲ, ನಾಗರೀಕತೆ ಎಂಬುದು ಮೊದಲೇ ಇಲ್ಲ ಎಂದು ಹೇಳಬೇಕಾಗುತ್ತದೆ.

ಓದುಗರೆಲ್ಲರಿಗೂ ಹೊಸ ವರ್ಷದ ಶುಭಾಶಯಗಳು!

**–ಸಂಪಾದಕ**

## ನಿಮ್ಮ ಮಾತು

ಪ್ರಿಯ ಸಂಪಾದಕರೇ,

ಡಿಸೆಂಬರ್ ಸಂಚಿಕೆ ಹಿಂದಿನ ಎಲ್ಲ ಸಂಚಿಕೆಗಳಂತೆ ಸೂಕ್ಷ್ಮವಾಗಿದೆ. ಆಶೀಶ್ ನಂದಿ, ಜಿ. ರಾಜಶೇಖರ್ ಮತ್ತು ಇಂದಿರಾ ಕೃಷ್ಣಪ್ಪನವರ ಲೇಖನಗಳು ಇಷ್ಟವಾದವು,

**–ವಿಕ್ರಮ ವಿಸಾಜಿ,** ಗುಲ್ಬರ್ಗ

ಈ ಬಾರಿಯ ಸಂಚಿಕೆ ಈವರೆಗೆ ಬಂದ ಸಂಚಿಕೆಗಳಿಗಿಂತ ಭಿನ್ನ ಅಥವಾ ವಿಶೇಷವಾಗಿದೆ ಎಂದು ನನಗೆ ಅನ್ನಿಸಿಲ್ಲ. ಆದರೂ ನೀವು ಪತ್ರಿಕೆಯ ಪಿಡಿಎಫ್ ಆವೃತ್ತಿಯನ್ನು ಕಳಿಸುವಾಗ ಈ ಸಂಚಿಕೆ ಹೇಗೆನ್ನಿಸಿತು, ತಿಳಿಸಿ ಎಂದು ಏಕೆ ಕೇಳಿರುವಿರೋ ತಿಳಿಯದು. ಅಂಥದ್ದು ಏನಾದರೂ ಇದ್ದರೆ ನೀವೇ ಬಿಡಿಸಿ ಹೇಳುವುದು ಉತ್ತಮ.

**–ರಾಘವೇಂದ್ರ ಉಡುಪ,** ಮೈಸೂರು

ಮಾಧ್ಯಮ ಕುರಿತ ಸಂವಾದ ಚೆನ್ನಾಗಿದೆ. ವಿಶೇಷವಾಗಿ ವಿದ್ಯುನ್ಮಾನ ಮಾಧ್ಯಮ ಕುರಿತು ಸರಳ ನುಡಿಯಲ್ಲಿ ಚಿಕ್ಕ ಚಿಕ್ಕ ಲೇಖನಗಳ ಮೂಲಕ ಓದುಗರ ಮನಸ್ಸಿಗೆ ತಿಳುವಳಿಕೆ ನೀಡುವ ಕೆಲಸ ಆಗಬೇಕಿದೆ. ಅದನ್ನು ಬರಹ ಮಾಧ್ಯಮವೇ ಮಾಡಬೇಕು.

ಮಾಧ್ಯಮ ಅನ್ನುವುದಿಲ್ಲದೆ ನಾವು ಏನನ್ನಾದರೂ ನೋಡಬಲ್ಲೆವೋ? ನಾವು ಎಳೆಯರಾಗಿದ್ದಾಗ ನಮ್ಮ 'ಓದು' ನಮ್ಮ ನೋಟವನ್ನು ಪರಿಣಾಮಿಸಿತ್ತಲ್ಲವೇ? ಮಾಧ್ಯಮದ ಹಂಗಿಲ್ಲದೆ ನೇರವಾಗಿ ನೋಡುವುದು ಬಲು ದೊಡ್ಡ ಸಾಧನೆ. ಭಾಷೆ ಎನ್ನುವ ಮಾಧ್ಯಮವೂ ಅಡಚಣೆಯಲ್ಲವೇ? 'ನಾನು ಒಂದು ಮಾತಾಡಿದಾಗ ಕೇಳುವವರೂ ಲೋಕವನ್ನು ನಾನು ಕಂಡಂತೆಯೇ ಮಾಡಬೇಕು ಎಂಬ ಉದ್ದೇಶವಿರುತ್ತದೆಯಲ್ಲವೇ?' ಎಂಬ ಎಲ್ಲೋ ಓದಿದ ಮಾತು ನನ್ನನ್ನು ಕಾಡುತ್ತಿದೆ. ಯಾವ ಮಾಧ್ಯಮದ ನೆರವೂ ಇಲ್ಲದೆ ನೋಡುವುದು ಎಂದರೆ ಅದೇ ದರ್ಶನ, ಪ್ರತ್ಯಕ್ಷಾನುಭೂತಿ ಎಲ್ಲ ಇದ್ದೀತು.

ಮನಸ್ಸಿಗೆ ಹೀಗೆಲ್ಲ ಬಂದು ಹೋಯಿತು, ಈ ಬಾರಿಯ ಸಂಚಿಕೆಯನ್ನು ಓದುತ್ತಿದ್ದಾಗ.

**–ಓ.ಎಲ್. ನಾಗಭೂಷಣ ಸ್ವಾಮಿ,** ಬೆಂಗಳೂರು

ಸಂಪಾದಲೀಯದಲ್ಲಿ ಸಿದ್ಧರಾಮಯ್ಯನವರ ಆಡಳಿತದ ಬಗ್ಗೆ ಬರೆದಿದ್ದೀರಿ. ಬರುವ ಲೋಕಸಭಾ ಚುನಾವಣೆಗಳಲ್ಲಿ ೨೦ ಸ್ಥಾನಗಳನ್ನು ಗೆದ್ದು ಕೊಡುವ ಗುರಿ ಇರುವ ಅವರು ಸಹಜವಾಗಿಯೇ ಜನಪ್ರಿಯ ಕಾರ್ಯಕ್ರಮಗಳ ಮೇಲೆ ಹಣ ವಿನಿಯೋಗಿಸುತ್ತಿದ್ದಾರೆ. ರಸ್ತೆಗಳು ದುರಸ್ತಿಯಾಗದಿರುವ ಬಗ್ಗೆ ಜನರ ಟೀಕೆಗಳು ಅವರ ಕಿವಿಗಳಿಗೆ ಬೀಳುತ್ತಿಲ್ಲ. ಬೆಂಗಳೂರು ಬುದ್ಧಿಜೀವಿಗಳ('ಬೆಂಬುಜಿ') ವರ್ತುಲದಲ್ಲಿ ಅವರು ಸಿಕ್ಕಿ ಹಾಕಿಕೊಂಡಿದ್ದಾರೆಂದು ಅವರ ಪಕ್ಷದ ಶಾಸಕರ ಟೀಕೆಯಾಗಿದೆ. ತಮ್ಮ ಅಭಿಪ್ರಾಯದಂತೆ ಸಿದ್ಧರಾಮಯ್ಯ ಸಮಾಜದ ಎಲ್ಲ ಜನರ ಹಿತವನ್ನು ಗಮನದಲ್ಲಿಟುಕೊಂಡು ಅಧಿಕಾರವಧಿಯ ಬಗ್ಗೆ ತಲೆ ಕೆಡಿಸಿಕೊಳ್ಳದೆ ಆಡಳಿತ ನಡೆಸುವುದು ಒಳ್ಳೆಯದು ಎಂದು ಅನಿಸುತ್ತಿದೆ.

ಜಿಎಸ್ಸೆಸ್ ಅವರ ಸಲಹೆಯಂತೆ ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಕುವೆಂಪು ಹೆಸರಿಡದಿರುವುದು ಮಾತ್ರ ಖೇದಕರ.

**–ಪಿ.ಎಂ. ಜಗದೀಶ್,** ಬೆಂಗಳೂರು

## ನಮ್ಮ ಸಮಾಜವಾದಿಗಳು: ಸಮಾಜವಾದಕ್ಕಾಗಿ ಜೀವ ಕೆತ್ತ ಸೋಗಾಲ ನಾಗಭೂಷಣ

**ಸೋಗಾಲ ನಾಗಭೂಷಣ ಕರ್ನಾಟಕದ ಸಮಾಜವಾದಿ ಚಳುವಳಿ ಮತ್ತು ಪಕ್ಷ ರಾಜಕಾರಣದ ಇತಿಹಾಸದಲ್ಲಿ ಕಾಣಬರುವ ಮೊದಲ ದುರಂತ ನಾಯಕನೆಂದು ಹೇಳಬಹುದು. ರಾಜ್ಯದಲ್ಲಿ ಪಕ್ಷಕ್ಕೂ ಅದರೊಂದಿಗೆ ಸಮಾಜವಾದಿ ಕಾರ್ಮಿಕ ಸಂಘಟನೆಗೂ ಮೂಲ ಬುನಾದಿ ಹಾಕಿದವರಲ್ಲಿ ಪ್ರಮುಖರಾದ ನಾಗಭೂಷಣ, ಚಳುವಳಿ ಮತ್ತು ಪಕ್ಷ ತಮ್ಮ ದೃಷ್ಟಿಯಿಂದ ಆರಂಭದಲ್ಲೇ ಹಿಡಿದ 'ಅಶಿಸ್ತಿ'ನ ಹಾದಿಯನ್ನು ಕಂಡು ಕನಲಿ ಬುದ್ಧಿಭ್ರಮಣೆಗೆ ಒಳಗಾದವರು. ಅಂದರೆ ಅಷ್ಟು ಪ್ರೀತಿ, ಶ್ರಮ ಮತ್ತು ಶ್ರದ್ಧೆಗಳಿಂದ ಚಳುವಳಿ, ಪಕ್ಷವನ್ನು ಕಟ್ಟಿದವರು ಅವರು. ಆದರೆ ತನ್ನ ಇತಿಹಾಸದ ಬಗೆಗಿನ ಅಪ್ರತಿಮ ಬೇಜವಾಬ್ದಾರಿತನಕ್ಕೆ ಹೆಸರಾದ ಕರ್ನಾಟಕದ ಸಮಾಜವಾದಿ ಆಂದೋಲನ ಯು.ಆರ್.ಅನಂತಮೂರ್ತಿ ಮತ್ತು ಇನ್ನೂ ಒಂದಿಬ್ಬರು ತಮ್ಮ ಬರಹಗಳಲ್ಲಿ ಮಾಡಿರುವ ಸಾಂದರ್ಭಿಕ ಮತ್ತು ಸಂಕ್ಷಿಪ್ತ ಪ್ರಸ್ತಾಪಗಳ ಹೊರತಾಗಿ ಇವರ ಬಗ್ಗೆ ಯಾವ ದಾಖಲೆಯನ್ನೂ, ಸಾಕ್ಷ್ಯವನ್ನೂ ಉಳಿಸಿ ಹೋಗಿಲ್ಲ. ಹಾಗಾಗಿ ನಮ್ಮ ಪತ್ರಿಕೆಯೇ ನೆಪವಾಗಿ ನಮ್ಮ ಸಂಪರ್ಕಕ್ಕೆ ಆಕಸ್ಮಿಕವಾಗಿ ಬಂದ ಸೋಗಾಲರ ಸೋದರ ಎಸ್. ಜಗನ್ನಾಥ್ ತಮ್ಮ ಅಣ್ಣ ಮೇಲಿನ ಪ್ರೀತಿ–ಅಭಿಮಾನಗಳಿಂದಾಗಿ ಅವರ ಅಪರೂಪದ ಮತ್ತು ದುರ್ಲಭ ಚಿತ್ರ ಮತ್ತು ಮಾಹಿತಿಯನ್ನು ಶ್ರಮ ವಹಿಸಿ ಸಂಗ್ರಹಿಸಿ ಇಲ್ಲಿ ನೀಡಿದ್ದಾರೆ. ಜಗನ್ನಾಥರಿಗೆ ಪತ್ರಿಕೆ ಋಣಿಯಾಗಿದೆ–** ಸಂಪಾದಕ.



**ನಾ**ಗಭೂಷಣರು ಸೋಗಾಲದ ಸೀತಾರಾಮಯ್ಯ ಮತ್ತು ಶ್ರೀಮತಿ ಲಕ್ಷ್ಮಿನರಸಮ್ಮನವರ ನಾಲ್ಕನೆಯ ಸಂತಾನ, ಮೂರನೆಯ ಮಗ. ಹುಟ್ಟಿದ್ದು ಸುಮಾರು ೧೯೨೫ರಲ್ಲಿ. ನಾಗಭೂಷಣರ ಪ್ರೌಢ ಶಾಲೆಯ ವ್ಯಾಸಂಗ ಮೈಸೂರು ಮಹಾರಾಜರ ಪ್ರೌಢ ಶಾಲೆಯಲ್ಲಿ ಆಯಿತು. ಪ್ರೌಢ ಶಾಲೆಯ ಹಂತದಿಂದಲೇ ನಾಗಭೂಷಣರು ಸ್ವಾತಂತ್ರ್ಯ ಸಂಗ್ರಾಮದ ಚಳುವಳಿಗಳಲ್ಲಿ ಆಗಿನ ಯೂತ್ ಕಾಂಗ್ರೆಸ್ ಪಕ್ಷದ ಮುಂದಾಳಾಗಿ ಸಕ್ರಿಯರಾಗಿದ್ದವರು.

ನಾಗಭೂಷಣರು ಸ್ವತಃ ಬಹು ಬುದ್ಧಿವಂತರು. ಶಾಲೆಯ ಪಠ್ಯ ಪುಸ್ತಕಗಳಿಗಿಂತ ಕನ್ನಡ, ಇಂಗ್ಲಿಷ್ ಸಾಹಿತ್ಯ ಮತ್ತು ರಾಜಕೀಯ ಸಂಬಂಧಿತ ಪುಸ್ತಕಗಳ ಓದುವಿಕೆಯೇ ಹೆಚ್ಚು. ಇವರ ಜೊತೆ, ಹಿಂದೆ ಮುಂದೆ ವಾಗಲೂ ಜಾತಿಭೇದಗಳ ಪರಿವೆಗಳಿಲ್ಲದ ಗೆಳೆಯರ ತಂಡವಿರುತ್ತಿತ್ತು. ಅವರು ೧೯೪೨ರ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಭಾಗಿಯಾದ ಪರಿಣಾಮವಾಗಿ ಸುಮಾರು ಎರಡು ವರುಷಗಳ ಕಾಲ ಮೈಸೂರು, ಶ್ರೀರಂಗಪಟ್ಟಣ ಮತ್ತು ಬೆಂಗಳೂರು ಜೈಲುಗಳಲ್ಲಿರಬೇಕಾಯಿತು. ಇಂಡಿಯನ್ ಸ್ಟೂಡೆಂಟ್ ಕಾಂಗ್ರೆಸ್ಸಿನ ಕರ್ನಾಟಕ ಪ್ರದೇಶದ ಸೆಕ್ರೆಟರಿ, ಸೆಂಟ್ರಲ್ ಕಾಲೇಜಿನ ಸ್ಟೂಡೆಂಟ್ಸ್ ಯೂನಿಯನ್‌ನ ಸೆಕ್ರೆಟರಿ, ಕರ್ನಾಟಕ ಪ್ರದೇಶ ಕಾಂಗ್ರೆಸ್ ಸೋಷ್ಯಲಿಸ್ಟ್ ಪಾರ್ಟಿಯ ಸೆಕ್ರೆಟರಿ, ನಂತರ ಕರ್ನಾಟಕ ಪ್ರದೇಶ ಪ್ರಜಾ ಸೋಷಿಲಿಸ್ಟ್ ಪಾರ್ಟಿಯ ಸೆಕ್ರೆಟರಿಯಾಗಿ ಕೆಲಸ ಮಾಡಿ ತಮ್ಮ ನಾಯಕತ್ವ ಗುಣಗಳನ್ನು ಸಾಬೀತು ಪಡಿಸಿದ ನಾಗಭೂಷಣರು ಸಹಜವಾಗಿಯೇ ಶಿವಮೊಗ್ಗೆಯಲ್ಲಿ ನಡೆದ ಪಾರ್ಟಿಯ ಅಧಿವೇಶನದಲ್ಲಿ ಮತ್ತೊಮ್ಮೆ ಪಾರ್ಟಿಯ ಸೆಕ್ರೆಟರಿ ಆಗಿ ಚುನಾಯಿತರಾದರು. ನಂತರ ಬೆಂಗಳೂರಿನಲ್ಲಿ ಯ ಜಯಪ್ರಕಾಶ್ ನಾರಾಯಣರನ್ನು ಕರೆಸಿ ಒಂದು ಬೃಹತ್ ಸಭೆ ಆಯೋಜಿಸಿದ ಕೀರ್ತಿ ಅವರದ್ದು.

ಸೋಗಾಲರು ಹೀಗೆ ಸಮಾಜವಾದಿ ಚಳುವಳಿ ಮತ್ತು ಪಕ್ಷಗಳನ್ನು ಕಟ್ಟಿ ಬೆಳೆಸಿದ್ದೇ ಅಲ್ಲದೆ, ರಾಜ್ಯದಲ್ಲಿ ಕಾರ್ಮಿಕ ಸಂಘಟನೆಯನ್ನು ಬೆಳೆಸುವಲ್ಲಿಯೂ ಸಕ್ರಿಯ ಪಾತ್ರ ವಹಿಸಿದರು. ಮುಂದೆ ಸಮಾಜವಾದಿ ಚಳುವಳಿಯ ಕಾರ್ಮಿಕ ಶಾಖೆಯಾಗಿ ಬೆಳೆದ *ಹಿಂದ್ ಮಜ಼್ದೂರ್ ಸಭಾ*ದ ಸ್ಥಾಪನಾ ಅಧಿವೇಶನ ನಡೆದದ್ದು, ನಾಗಭೂಷಣರ ಮುಂದಾಳತ್ವದಲ್ಲಿಯೇ. ಇದರ ಉದ್ಘಾಟನೆ ಅಶೋಕ್ ಮೆಹತರಿಂದ ಆಯಿತು. ಬೊಂಬಾಯಿನ ಹಡಗುಕಟ್ಟೆ ಕಾರ್ಮಿಕರ ಧುರೀಣ ದ' ಮೆಲ್ಲೋ ಅತಿಥಿಯಾಗಿ ಈ ಸಭೆಗೆ ಆಗಮಿಸಿದ್ದರು. ನಂತರ

ನಾಗಭೂಷಣರು ಅದರ ಜನರಲ್ ಸೆಕ್ರೆಟರಿಗಳಲ್ಲಿ ಒಬ್ಬರಾದರು. ಇದರ ಪರಿಣಾಮವಾಗಿ ಅಖಿಲ ಭಾರತ ಟ್ರೇಡ್ ಯೂನಿಯನ್‌ನ ಬೃಹತ್ ಸಮಾವೇಶ ಕರ್ನಾಟಕದ ಪ್ರಜಾ ಸೋಷಿಲಿಸ್ಟ್ ಪಾರ್ಟಿ ವತಿಯಿಂದ ನಂಜನಗೂಡಿನಲ್ಲಿ ನಡೆಯಿತು. ಈ ಸಮಾವೇಶವನ್ನು ಉದ್ದೇಶಿಸಿ ಅಶೋಕ ಮೆಹತ, ಅಚ್ಯುತ ಪಟವರ್ಧನ್ ಮುಂತಾದವರು ಮಾತನಾಡಿದರು.

ಆಗಿನ ಬೆಂಗಳೂರಿನಲ್ಲಿ ಹಾಗೂ ಕರ್ನಾಟಕದ ಇತರೆ ಪ್ರದೇಶಗಳಲ್ಲಿ ಸಾಕಷ್ಟು ಕೈಗಾರಿಕೋದ್ಯಮಗಳು ಇದ್ದವು. ಜೊತೆಗೆ ಹೋಟೆಲ್ ಉದ್ಯಮ, ವರ್ಕ್‌ಶಾಪುಗಳು ಮುಂತಾದ ಸಣಪುಟ್ಟ ಉದ್ದಿಮೆಗಳೂ ಇದ್ದುವು. ಇಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕರಿಗೆ ತಮ್ಮ ಕಾನೂನುಬದ್ಧವಾದ ಹಕ್ಕುಬಾಧ್ಯತೆಗಳ ಅರಿವು ಇರಲಿಲ್ಲ. ಅದನ್ನು ತಿಳಿಸುವ, ಬೆಳೆಸುವ ನಿಟ್ಟಿನಲ್ಲಿ ಯಾವ ಸಂಘಟನೆಗಳೂ ಇತ್ತಿಲ್ಲ. ಇದನ್ನು ಮನಗಂಡ ನಾಗಭೂಷಣರು, ಬೆಂಗಳೂರಿನ ಸುತ್ತಮುತ್ತಲ ಸುಮಾರು ೨೦-೨೫ ಸಂಘಗಳ ಮುಖಂಡರನ್ನು ಪ್ರತಿ ದಿನ ಸಂಜೆ ಬಳೇಪೇಟೆಯಲ್ಲಿದ್ದ ತಮ್ಮ ಪಾರ್ಟಿ ಸ್ಥಳದಲ್ಲಿ ಸೇರಿಸಿ ಅವರುಗಳಿಗೆ ಸಮಾಜವಾದದ ತತ್ವಗಳನ್ನೂ, ಹಾಗೆಯೇ ಕಾರ್ಮಿಕರ ಹಕ್ಕು ಬಾಧ್ಯತೆ, ಜವಾಬ್ದಾರಿಗಳ ಬಗ್ಗೆ ತಿಳುವಳಿಕ ನೀಡುತ್ತಾ, ಕ್ರಮೇಣ ಕರ್ನಾಟಕದಲ್ಲಿ ಕಾರ್ಮಿಕರ ಒಂದು ಬಹು ದೊಡ್ಡ ಸಂಘಟನೆಯನ್ನು ಕಟ್ಟಿದರು.

ಹೀಗೆ, ಬೆಂಗಳೂರಿನ ಬಹು ದೊಡ್ಡ ಬಟ್ಟೆ ಗಿರಣಿಯಾಗಿದ್ದ ಮಿನರ್ವ ಮಿಲ್ಲಿನ ಕಾರ್ಮಿಕರ ಸಂಘದ ಜನರಲ್ ಸೆಕ್ರೆಟರಿಯಾಗಿದ್ದಾಗ ಅಲ್ಲಿನ ಕಾರ್ಮಿಕರ ಹಕ್ಕು ಬಾಧ್ಯತೆಗಳನ್ನು ಕುರಿತು ಅದರ ಮಾಲಿಕರೊಂದಿಗೆ ನಡೆಸಿದ ಮಾತುಕೆಗಳು ಮುರಿದುಬಿದ್ದಾಗ, ಮುಷ್ಕರ ಹೂಡಿಸಿದರು. ಈ ಮುಷ್ಕರವು ಸುಮಾರು ಮೂರು ತಿಂಗಳು ನಡೆಯಿತು. ವಿವಾದ ಹೈಕೋರ್ಟಿನ ಮೆಟ್ಟಲೂ ಹತ್ತಿತು. ನಂತರ ಹೈಕೋರ್ಟು ಕೂಡ ಕಾರ್ಮಿಕರ ವಾದವನ್ನೇ ಎತ್ತಿ ಹಿಡಿಯಿತು. ಇದು ಇತರೆ ಕಾರ್ಮಿಕ ಸಂಘಟನೆಗಳಿಗೂ ಹೋರಾಟದ ಒಂದು ಮಾದರಿಯಾಯಿತು.

ಪಾರ್ಟಿ ಮತ್ತು ಕಾರ್ಮಿಕ ಸಂಘಟನೆಯ ಹತ್ತು ಹದಿನಾರು ದೈನಂದಿನ ಚಟುವಟಿಕೆಗಳ ಮಧ್ಯವೂ ನಾಗಭೂಷಣರು ಭಿತ್ತಿಪತ್ರಗಳ, ಹಸ್ತ ಪತ್ರಗಳ, ಲೇಖನಗಳ ಮೂಲಕ ಸಮಾಜವಾದಿ ತತ್ವಗಳ ಪ್ರಚಾರದ ಜೊತೆಗೆ ಪಾರ್ಟಿಗೆ ಸದಸ್ಯತ್ವದ ನೋಂದಾವಣೆ, ಕಾರ್ಯಕರ್ತರ ತಯಾರಿಯಲಿಯೂ ಬಹಳಷ್ಟು ಶ್ರಮಿಸಿದರು. ಬೆಂಗಳೂರಿನ ಬಳೆಪೇಟೆಯ ಉಡುಪಿ ಕೃಷ್ಣ ಭವನದ ಎದುರು 'ರಾಮಪ್ರಸಾದ್' ಎಂಬ ಹೆಸರಿನ ಕಟ್ಟಡದಲ್ಲಿ ಒಂದು ಸಣ್ಣ ಕೊಠಡಿಯನ್ನು ಬಾಡಿಗೆಗೆ ಹಿಡಿದು, ಅದನ್ನು ತಮ್ಮ ಚಟುವಟಿಕೆಗಳ ಕೇಂದ್ರವಾಗಿಸಿಕೊಂಡರು. ಹಾಗೇ ಅವರು ಮೈಸೂರು ಜವಾಬ್ದಾರಿ ಸರಕಾರದ ಪರ ಹೋರಾಟದಲ್ಲಿಯೂ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡರು.

ಇವರ ಪಕ್ಷ ಹಣವಂತರ ಪಕ್ಷವಾಗಿರಲಿಲ್ಲ. ಬಳೆ ಪೇಟೆ ಆಫೀಸಿನ ತಿಂಗಳ ಬಾಡಿಗೆ, ಪಾರ್ಟಿಯಪ್ರಚಾರ, ಸಮಾವೇಶಗಳು, ಅವಕ್ಕಾಗಿ ಬರುತ್ತಿದ್ದ ಅತಿಥಿಗಳ ವಸತಿ-ಊಟೋಪಚಾರಗಳು, ಪಾರ್ಟಿ ಕಾರ್ಯಕರ್ತರ ಮತ್ತು ತಮ್ಮ ಉದರ ಪೋಷಣೆ ಹೀಗೆ ಬಹುಮುಖ ಖರ್ಚಿನ ಬಾಬತ್ತುಗಳು ಇರುತ್ತಿದ್ದುವು. ಇದನ್ನೆಲ್ಲ ನಿರ್ವಹಿಸಲು ಬಹಳ ಕಷ್ಟವಾಗುತ್ತಿತ್ತು. ಆಗ ಕಮಲಾದೇವಿ ಚಟ್ಟೋಪಾಧ್ಯಾಯರು ಸಂಪಾದಿಸಿ ಧಾರವಾಡದಿಂದ ಕಳುಹಿಸುತ್ತಿದ್ದ 'ಜಾಗೃತಿ' ಪತ್ರಿಕೆಯ ೫೦-೧೦೦ ಪ್ರತಿಗಳ ಒಂದು ಕಟ್ಟು ಬರುತ್ತಿತ್ತು. ನಾಗಭೂಷಣ ಬಾಡಿಗೆ ಸೈಕಲ್ ಹತ್ತಿ ತತ್ಕ್ಷಣವೇ ಮಾರಿ ಬಂದು ಒಂದಿಷ್ಟು ಹಣ ಕೂಡಿಡುತ್ತಿದ್ದರು. ಇದರ ಜೊತೆಗೆ ಅಭಿಮಾನಿಗಳಿಂದ ಆಗಾಗ್ಯೆ ಅವರು ಕೊಟ್ಟಷ್ಟು ಚಂದಾ, ಬೀದಿಗಳಲ್ಲಿ ಗೋಲಕದ ಡಬ್ಬ ಹಿಡಿದು ಹಣ ಸಂಗ್ರಹ.ಇದರಲ್ಲಿ ಇತರೆ ಖರ್ಚುಗಳನ್ನು ನಿಭಾಯಿಸಿ, ಏನಾದರು ಹಣ ಉಳಿದರೆ ಇವರಿಗೆ ಮತ್ತು ಸಹವರ್ತಿಗಳಿಗೆ ಹೊಟ್ಟೆಗೆ ವ್ಯವಸ್ಥೆ. ಇಲ್ಲದಿದ್ದರೆ ಉಪವಾಸ.

ನಾಗಭೂಷಣರು ಬಡಬಗ್ಗರ ವಸತಿ ಪ್ರದೇಶವೆನಿಸಿದ್ದ ಈಗಿನ ಶ್ರೀರಾಂಪುರದ ನಾಗಪ್ಪ ಬ್ಲಾಕ್‌ನಲ್ಲಿ ತಮ್ಮ ಸ್ನೇಹಿತ ಎಚ್.ಎ. ರಾಮಸ್ವಾಮಿಯವರೊಡನೆ, ಒಂದು ರೂಮಿನಲ್ಲಿ ವಾಸವಾಗಿದ್ದರು. ಅವರ ಅಕ್ಕ ಕಮಲಮ್ಮನವರು ಸ್ವಲ್ಪ ಕಾಲ ನಾಗಪ್ಪ ಬ್ಲಾಕ್ ಪ್ರದೇಶದಲ್ಲಿ ವಾಸವಾಗಿದ್ದರು. ಅಷ್ಟು ಸಮಯ ನಾಗಭೂಷಣರ ಊಟ ತಿಂಡಿಯ ವ್ಯವಸ್ಥೆ ಸ್ವಲ್ಪ ಸಮಾಧಾನಕರವಾಗಿತ್ತು, ಎಷ್ಟೇ ಹೊತ್ತಾದರೂ.

೧೯೪೯ರಲ್ಲಿ ದಾವಣಗೆರೆಯಲ್ಲಿ ನಡೆದ ಪಾರ್ಟಿಯ ಅಧಿವೇಶನದ ಪೂರ್ವಭಾಗಿಯಾಗಿ ಬೆಂಗಳೂರು ವಾಸವಿ ಧರ್ಮಶಾಲಯಲ್ಲಿ ನಡೆದ ೩ ದಿನಗಳ ಜನರಲ್ ಕೌನ್ಸಿಲ್ ಸಭೆ ಮತ್ತು ೧೦ ದಿನಗಳ ಸ್ಟೇಟ್ ಎಕ್ಸಿಕ್ಯುಟಿವ್ ಸಭೆ. ಪಕ್ಷದ ಸಂವಿಧಾನದಲ್ಲಿ ಬದಲಾವಣೆಗಳನ್ನು ತರಲು ನಡೆಸಿದ ಈ ಸಭೆಗಳಲ್ಲಿ ಜಯಪ್ರಕಾಶ್ ನಾರಾಯಣ್, ಪೀಟರ್ ಅಲ್ವರೆಸ್, ಪುರುಷೋತ್ತಮ್ ದಾಸ್ ತ್ರಿಕಂದಾಸ್ ಮುಂತಾದ ಪಕ್ಷದ ಹಿರಿಯ ಧುರೀಣರು ಉಪಸ್ಥಿತರಿದ್ದರು. ಈ ಅಧಿವೇಶನದ ಏರ್ಪಾಡು ಮತ್ತು ನಿರ್ವಹಣೆ ನಾಗಭೂಷಣರದ್ದಾಗಿತ್ತು. ಅವರು ರಾಷ್ಟ್ರ ಮಟ್ಟದ ಪಾರ್ಟಿಯ ಜನರಲ್ ಕೌನ್ಸಿಲ್‌ನ ಚುನಾಯಿತ ಸದಸ್ಯರೂ ಆಗಿದ್ದುದದರಿಂದ ಈ ಎಲ್ಲ ಸಭೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದರು.

೧೯೪೮-೪೯ರ ಹೊತ್ತಿಗೆ ಪ್ರಜಾ ಸೋಷಿಲಿಸ್ಟ್ ಪಾರ್ಟಿಯು ಒಂದು ಶಕಿಯುತ ರಾಜಕೀಯ ಪಕ್ಷವಾಗಿ ಕರ್ನಾಟಕದಲ್ಲಿ ಬೆಳೆದಿತ್ತು. ನಾಗಭೂಷಣರೂ ಇಷ್ಟರ ಹೊತ್ತಿಗೆ ಸೋಷಿಲಿಸ್ಟ್ ಪಾರ್ಟಿಯ ರಾಷ್ಟ್ರ ನಾಯಕರ ಎತ್ತರಕ್ಕೆ ಬೆಳೆದಿದ್ದರು. ರಾಷ್ಟ್ರ ಮಟ್ಟದಲ್ಲಿ ಆಚಾರ್ಯ ನರೇಂದ್ರ ದೇವ್, ಡಾ.ರಾಮ ಮನೋಹರ ಲೋಹಿಯಾ, ಅಚ್ಯುತ್ ಪಟವರ್ಧನ್, ಅಶೋಕ್ ಮೆಹತ, ಜಯಪ್ರಕಾಶ್ ನಾರಾಯಣ್ ಮುಂತಾದವರ ಸಖ್ಯವಿತ್ತು. ರಾಜ್ಯ ಮಟ್ಟದಲ್ಲಿ ಶಾಂತವೇರಿ ಗೋಪಾಲ ಗೌಡ, ಮುಲ್ಕಾ ಗೋವಿಂದ ರೆಡ್ಡಿ, ಸದಾಶಿವ ರಾವ್ ಖಾದ್ರಿ ಶಾಮಣ್ಣ ಭ.ಸು .ಕೃಷ್ಣಮೂರ್ತಿ.ಸೇರಿದಂತೆ ಆ ಕಾಲದ ಎಲ್ಲ ಸಮಾಜವಾದಿ ನಾಯಕರೂ ಅವರ ಗೆಳೆಯರೇ.

ನಾಗಭೂಷಣರ ವರ್ಷಗಟ್ಟಲೆಯ ಮುಂದಾಳತ್ವ, ಶ್ರಮ. ತ್ಯಾಗಗಳಿಂದ ರಾಜ್ಯದಲ್ಲಿ ಕರ್ನಾಟಕ ಪ್ರದೇಶ ಸೋಷಿಲಿಸ್ಟ್ ಪಕ್ಷ ತನ್ನ ತತ್ವಗಳ, ಸಿದ್ಧಾಂತಗಳ ಬುನಾದಿಯಲ್ಲಿ ಒಂದು ಶಕ್ತಿಯುತ ಪಕ್ಷವಾಗಿ ಬೆಳೆದು ನಿಂತಿತ್ತು. ಆದರೆ ನಾಗಭೂಷಣರ ದೃಷ್ಟಿಯಲ್ಲಿ ಬಹುಬೇಗ ಅದರ ಅವನತಿಯೂ ಆರಂಭವಾದಂತಿತ್ತು. ೧೯೪೮ರಲ್ಲಿ ಬೆಂಗಳೂರು ನಗರದಲ್ಲಿ ನಡೆದ ಸೋಷಿಲಿಸ್ಟ್ ಪಕ್ಷದ ಬೃಹತ್ ಅಧಿವೇಶನದಲ್ಲಿ ಜಯಪ್ರಕಾಶ್ ನಾರಾಯಣರ ನೇತೃತ್ವದಲ್ಲಿ ಪಕ್ಷ 'ಮಾಸ್ ಬೇಸ್ಡ್ ' ಪಕ್ಷವಾಗಬೇಕೆಂದು ತೀರ್ಮಾನವಾಯಿತು. ಇಲ್ಲಿಂದ ಆರಂಭವಾದಂತೆ, ನಂತರ ಯಾರೆಂದರೆ ಅವರು ಪಕ್ಷ ಸೇರುಂತಾಗಿ ಸಮಾಜವಾದಿ ತತ್ವ ಸಿದ್ಧಾಂತಗಳು ಬಡವಾಗತೊಡಗಿದವು. ಇವುಗಳ ಬದಲಿಗೆ ಬಂದದ್ದು ಅಧಿಕಾರ ರಾಜಕಾರಣ ಹಾಗೂ ಅದರ ಕಾಮನೆಗಳು, ಅತಿರೇಕಕ್ಕೆ ಹತ್ತಿದ ಜಾತೀಯ ವೈಷಮ್ಯಗಳು. ಇವುಗಳಿಂದ, ತತ್ವನಿಷ್ಟರಾಗಿದ್ದ ನಾಗಭೂಷಣರಿಗೆ ತಾವು ತಮ್ಮ ನೇತೃತ್ವದಲ್ಲಿ ಸ್ಥಾಪಿಸಿ ಬೆಳೆಸಿದ ಪಾರ್ಟಿಯ ಅವನತಿ ಶುರುವಾದ್ದನ್ನು ಕಂಡು ಮಾನಸಿಕವಾಗಿ ತೀವ್ರ ಆಘಾತವಾಗಿರಬೇಕು.

ಪಾರ್ಟಿಯ ಬಳೇಪೇಟೆ ಕಚೇರಿಯ ತಿಂಗಳ ಬಾಡಿಗೆ ಕಟ್ಟಲು ಬೀದಿ ಬೀದಿಗಳಲ್ಲಿ ಚಂದಾ ಎತ್ತಬೇಕಾಗಿದ್ದ ಸಂಕಷ್ಟದಲ್ಲಿ ಇನ್ನೂ ಇದ್ದ ಪಾರ್ಟಿಯ ಸ್ಥಿತಿಯಲ್ಲಿ, ಈ ಹೊಸ ಕಷ್ಟಗಳನ್ನೂ ನಿವಾರಿಸಿಕೊಳ್ಳಲು ಬೇಕಾದ ಸಾಹಸಕ್ಕೆ ನಾಗಭೂಷಣರ ಮನಸ್ಸು ಒಪ್ಪದಿಲ್ಲದಿರಬಹುದು. ಈ ಸ್ಥಿತಿಯಲ್ಲಿ, ೧೯೪೯ರಲ್ಲಿ ದಾವಣಗೆರೆಯಲ್ಲಿ ನಡೆದ ಪಾರ್ಟಿಯ ಸಮಾವೇಶದಲ್ಲಿ ಜನರಲ್ ಸೆಕ್ರೆಟರಿಯ ಸ್ಥಾನಕ್ಕೆ ಚುನಾವಣೆಗೆ ನಿಲ್ಲದೆ ೨೩-೨೪ ಹರೆಯದ ನಾಗಭೂಷಣರು ಪಾರ್ಟಿಯನ್ನು ತ್ಯಜಿಸಿದರು. ಆದರೆ ಅವರು ನಿರ್ದಿಷ್ಟವಾಗಿ ಏಕೆ ಪಕ್ಷ ತೊರೆದರು? ಮತ್ತು ಏಕೆ ಅವರ ಮಾನಸಿಕ ಸ್ಥಿತಿಯಲ್ಲಿ ವ್ಯತ್ಯಾಸವಾಯಿತು? ಅವರ ಬುದ್ಧಿ ಭ್ರಮಣೆಗೆ ಕಾರಣವೇನು? ಎನ್ನುವುದು ಈಗಲೂ ನಿಗೂಢವಾಗಿಯೇ ಇದೆ. ನಾಗಭೂಷಣರ ದೇಹಾಂತ್ಯ ೧೯೬೫ರ ಸರಿಸುಮಾರಿನಲ್ಲಿ ಆಯಿತೆಂದು ಜ್ಞಾಪಕ.

ಸೋಗಾಲ ನಾಗಭೂಷಣರ ಆತ್ಮಕ್ಕೆ ಶಾಂತಿಯಿರಲಿ.

**-ಎಸ್. ಜಗನ್ನಾಥ್**

# ಪ್ರೊ. ಬಿ. ಕೃಷ್ಣಪ್ಪ ನೆನಪಿನ ಮಾಲೆ

–ಇಂದಿರಾ ಬಿ. ಕೃಷ್ಣಪ್ಪ

## ಚಳುವಳಿಗಳಿಗೆ ಸಕ್ರಿಯ ಸಾಕ್ಷಿಯಾಗಿ...

ಗಂಡನ ಸಹಕಾರವಿಲ್ಲದೆ ಯಾವುದೇ ಮಹಿಳೆ ಸಮಚಿತ್ತದಿಂದ ಸರ್ಕಾರಿ ನೌಕರಿ ಮಾಡಲು ಸಾಧ್ಯವಿಲ್ಲ. ಅಂಥಹ ಕೌಟುಂಬಿಕ ನೆಮ್ಮದಿಯನ್ನು ಕೃಷ್ಣಪ್ಪ ನನಗೊದಗಿಸಿದ್ದರು. ಆದರೆ ಹೀಗೆ ಸರ್ಕಾರಿ ನೌಕರಿ–ಕೌಟುಂಬಿಕ ವ್ಯವಸ್ಥೆ ಹೊಂದಾಣಿಕೆ ಮಾಡಿಕೊಳ್ಳುತ್ತಿದ್ದ ತಿಂಗಳೊಪ್ಪತ್ತಿನಲ್ಲಿಯೇ ನಾನು ಕೆಲಸ ಮಾಡುತ್ತಿದ್ದ ತಾಲ್ಲೂಕು ಮಟ್ಟದ ನಗರ ಭೂ ತೆರಿಗೆ ಕಚೇರಿಗಳನ್ನು ಮುಚ್ಚುವ ಆದೇಶ ಸರ್ಕಾರದಿಂದ ಹೊರಬಿತ್ತು. ಇದರ ಫಲವಾಗಿ ನಾನು ಚಿಕ್ಕಮಕ್ಕಳಿಬ್ಬರ ಪಾಲನೆಯನ್ನು ನಿರ್ಲಕ್ಷಿಸಿ ಶಿವಮೊಗ್ಗ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಕೆಲಸಕ್ಕೆ ಹಾಜರಾಗಬೇಕಾದ ಪರಿಸ್ಥಿತಿ ಉಂಟಾಯಿತು. ಇದರಿಂದ ವಿಚಲಿತರಾದ ನಾವಿಬ್ಬರೂ ನಮ್ಮ ಪರಿಸ್ಥಿತಿಯನ್ನು ಅರುಹಿ ನನಗೆ ಭದ್ರಾವತಿಯಲ್ಲಿನ ಯಾವುದಾದರೊಂದು ಕಚೇರಿಗೆ ವರ್ಗಾವಣೆ ಮಾಡಿಕೊಡಬೇಕೆಂದು ಮನವಿ ಪತ್ರವೊಂದನ್ನು ಜಿಲ್ಲಾಧಿಕಾರಿಗಳಿಗೆ ಸಲ್ಲಿಸಿದೆವು. ಇದರಿಂದಾಗಿ ಸುಮಾರು ನಾಲ್ಕು ತಿಂಗಳು ನಾನು ಮನೆಯಲ್ಲಿಯೇ ಉಳಿಯಬೇಕಾಯಿತು. ಅದು ಮಕ್ಕಳ ಪಾಲನೆ ದೃಷ್ಟಿಯಿಂದ ಒಳ್ಳೆಯದೇ ಆಗಿತ್ತು. ಅಷ್ಟರಲ್ಲಿ ಭದ್ರಾವತಿಯ ಕ್ಷೇತ್ರಾಭಿವೃದ್ಧಿ ಕಚೇರಿಯ ಸಿಬ್ಬಂದಿಯೊಬ್ಬರ ಅಕಾಲಿಕ ಮರಣದಿಂದ ತೆರವಾದ ಜಾಗಕ್ಕೆ ನನ್ನನ್ನು ವರ್ಗಾವಣೆ ಮಾಡಿದ ಆದೇಶ ಬಂತು! ಮೊದಲಿನ ಕಚೇರಿಯಷ್ಟು ದೂರವಿಲ್ಲದ ಈ ಕಚೇರಿಯಿಂದ ಮಧ್ಯಾಹ್ನವೂ ಮನೆಗೆ ಬಂದು ಹೋಗುವುದು ನನಗೆ ತ್ರಾಸದಾಯಕವಾಗಿರಲಿಲ್ಲ. ಶಾಲಿನಿಯನ್ನು ಮನೆ ಬಳಿಯಿದ್ದ ಶಿಶುವಿಹಾರಕ್ಕೆ ಸೇರಿಸಿದ್ದೆವು.

ಇವುಗಳ ಮಧ್ಯದಲ್ಲಿಯೇ ಕರ್ನಾಟಕ ದಲಿತ ಸಂಘರ್ಷ ಸಮಿತಿಯು ಪೂರ್ಣ ಸ್ವರೂಪದ ಸಂಘಟನೆಯಾಗಿ ಬೆಳೆಯುತ್ತಿತ್ತು. ಸಮಿತಿಯ ವತಿಯಿಂದ ೧೯೭೬ರ ಡಿಸೆಂಬರ್ ೧೮ ಹಾಗೂ ೧೯ರಂದು ಭದ್ರಾವತಿಯ ನ್ಯೂಟೌನ್‌ನ ವಿಜಯ ಕಲ್ಯಾಣ ಮಂದಿರದಲ್ಲಿ ಅಖಿಲ ಕರ್ನಾಟಕ ದಲಿತ ಲೇಖಕರ ಕಲಾವಿದರ ಒಕ್ಕೂಟದ ಹೆಸರಿನಲ್ಲಿ ಸಾಹಿತ್ಯ ಸಮ್ಮೇಳನವೊಂದನ್ನು ಕೃಷ್ಣಪ್ಪ ಆಯೋಜಿಸಿದರು. ಈ ಸಮ್ಮೇಳನವೇ ದಲಿತ ಸಾಹಿತಿಗಳು, ಕವಿಗಳು, ಚಿಂತಕರು ಮತ್ತು ಪತ್ರಕರ್ತರನ್ನು ಒಗ್ಗೂಡಿಸಿದ ಪ್ರಧಾನ ವೇದಿಕೆಯಾಯಿತು. ಎರಡು ದಿನಗಳ ಈ ಸಮ್ಮೇಳನದಲ್ಲಿ ಸಮ್ಮೇಳನಾಧ್ಯಕ್ಷರಾದ ಮಾಜಿ ಪೌರಾಡಳಿತ ಸಚಿವ ಬಿ. ಬಸವಲಿಂಗಪ್ಪನವರು ಮತ್ತು ಉದ್ಘಾಟಕರಾದ ಇಂಡಿಯನ್ ಎಕ್ಸಪ್ರೆಸ್ ಪತ್ರಿಕೆಯ ವರದಿಗಾರರಾಗಿದ್ದ ರಾಜಶೇಖರ ಶೆಟ್ಟಿಯವರು ಮಾಡಿದ ಭಾಷಣಗಳು ದಲಿತ ಚಳುವಳಿಯ ಮುನ್ನೋಟವನ್ನು ಬಿಂಬಿಸುತ್ತಿತ್ತು. ನನ್ನ ಎಲ್ಲಾ ಕೌಟುಂಬಿಕ ತೊಂದರೆಗಳನ್ನು ಬದಿಗೊತ್ತಿ, ಒಂದೂವರೆ ವರ್ಷದ ಮಗಳು ಶಾಲಿನಿ, ಮೂರು ತಿಂಗಳ ಮಗು ಸೀಮಾ, ನಾದಿನಿ ರೇಣುಕಾಳೊಡಗೂಡಿ ನಾನು ಆ ಸಮ್ಮೇಳನದಲ್ಲಿ ಭಾಗವಹಿಸಿದ್ದೆ. ಕೃಷ್ಣಪ್ಪ ಸಮ್ಮೇಳನಕ್ಕೆ 'ನೀನು ಬಾ ಅಥವ ಬರಬೇಡ'– ಎಂಬ ಯಾವ ಮಾತನ್ನೂ ಹೇಳಿರಲಿಲ್ಲ!

ಮೊದಲ ಗೋಷ್ಠಿಯ ಅಧ್ಯಕ್ಷತೆಯನ್ನು ದೇವನೂರು ಮಹಾದೇವರವರು ವಹಿಸಿದ್ದು, ಸುಮಾರು ಆರು ವಿಷಯಗಳ ಮೇಲೆ ಕೃಷ್ಣಪ್ಪ ಆದಿಯಾಗಿ, ಮುಂದೆ ದಲಿತ ಸಾಹಿತ್ಯದ ಅಧ್ವರ್ಯುರು ಎಂದು ಹೆಸರಾದ ಸಿದ್ಧಲಿಂಗಯ್ಯ, ಕೆ. ನಾರಾಯಣಸ್ವಾಮಿ, ಲಕ್ಷ್ಮಣ ತೆಲಗಾವಿ, ಶಿವಾಜಿ ಗಣೇಶನ್‌ರವರಿಂದ ವಿಚಾರಗಳು ಮಂಡಿಸಲ್ಪಟ್ಟವು. ಮರುದಿನ ಬೆಳಗಿನ ಕವಿ ಸಮ್ಮೇಳನದಲ್ಲಿ ಈಗ ಸುಪ್ರಸಿದ್ಧ ಕವಿಗಳಾಗಿರುವ ಕೆ.ಬಿ. ಸಿದ್ಧಯ್ಯ, ಜಂಬಣ್ಣ ಅಮರಚಿಂತ, ಸಿದ್ಧಲಿಂಗಯ್ಯ, ಕೆ. ರಾಮಯ್ಯ, ಎಚ್. ಗೋವಿಂದಯ್ಯ, ರುದ್ರಪ್ಪ ಹನಗವಾಡಿ, ಬಾನಂದೂರು ಕೆಂಪಯ್ಯ, ರಾಮದೇವ ರಾಕೆ, ಗುರುರಾಜ ಬೀಡಿಕರ್, ಶ್ರೀಧರ ಕಲಿವೀರ, ಪರಶುರಾಮ, ದೇವನೂರು ಶಿವಮಲ್ಲು ಮುಂತಾದ ಯುವ ಕವಿಗಳು



**ಗೆಳೆಯರಾದ ಶಿವಲಿಂಗಪ್ಪ, ಚೆನ್ನಿ, ರುದ್ರಪ್ಪ ಹನಗವಾಡಿ ಹಾಗೂ ಎಂ.ಬಿ. ನಟರಾಜ್‌ರೊಂದಿಗೆ ೮೦ರ ದಶಕದಲ್ಲಿ ಸಂತಸದ ಕ್ಷಣವೊಂದರಲ್ಲಿ ಬಿ.ಕೆ.**

ಭಾಗವಹಿಸಿದ್ದರು. ಅಕ್ಷರ ಜಗತ್ತಿನ ಕವಿಲೋಕಕ್ಕೆ ದಮನಿತ ಲೋಕದ ಧ್ವನಿ ಸೇರಿಸಿದ ಬಹುಶಃ ಮೊದಲ ಕವಿ ಸಮ್ಮೇಳನ ಇದಾಗಿತ್ತು. ಅಧ್ಯಕ್ಷತೆ ವಹಿಸಬೇಕಾದ ಚೆನ್ನಣ್ಣ ವಾಲೀಕಾರ್ ಬಾರದ ಕಾರಣ ಕೆ. ಎನ್. ಶಿವತೀರ್ಥನ್ ಕವಿಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದರು. ಆಗಲೇ ನನಗೆ ದೇವನೂರು ಮಹಾದೇವ ಮತ್ತಿತರರೆಲ್ಲ ಪರಿಚಯವಾದದ್ದು.

ಈ ಮಧ್ಯೆ ಕೃಷ್ಣಪ್ಪನವರಿಗೆ ಭದ್ರಾವತಿಯ ಕಾಗದ ನಗರದಲ್ಲಿ ಒಂದು ವಸತಿಗೃಹ ಮಂಜೂರಾಯಿತು. ನಾವು ಹೊಸಮನೆ ಬಡಾವಣೆಯಿಂದ ಕಾಗದ ನಗರಕ್ಕೆ ಮನೆ ಸ್ಥಳಾಂತರಿಸಿದೆವು. ಆ ಮನೆ ಬಿಡುವಾಗ ನಮಗೆ ಆಪತ್ಬಾಂಧವರೆನಿಸಿದ್ದ ನಮ್ಮ ಎದುರು ಮನೆಯ ಮುಸ್ಲಿಂ ಒಡನಾಡಿಗಳು ಬಹು ದುಃಖಪಟ್ಟರು. ಅವರೂ – ನಾವು ಆಗಾಗ್ಗೆ ಬಂದು ಹೋಗುವ ಸಂಪರ್ಕ ಬೆಳೆಸಿಕೊಂಡೆವು.

ನಮ್ಮ ಕಚೇರಿಯ ಪಕ್ಕದಲ್ಲೇ ತಾಲ್ಲೂಕು ಕಚೇರಿ ಇದ್ದಿತು. ತಾಲ್ಲೂಕು ಕಚೇರಿ ಎದುರು ಒಂದಿಲ್ಲೊಂದು ಧರಣಿ–ಪ್ರತಿಭಟನೆಗಳು ನಡೆಯುತ್ತಲೇ ಇದ್ದವು. ಆದರೆ ಅವುಗಳನ್ನು ಗಮನಿಸುತ್ತಲೇ ಕಚೇರಿಗೆ ಓಡಾಡುತ್ತಿದ್ದ ನನ್ನಲ್ಲಿ ಇದೇ ಜಾಗದಲ್ಲಿ ಕೃಷ್ಣಪ್ಪನವರು ಸಂಘಟಿಸಿದ ಸಿದ್ಲೀಪುರ ಭೂ ಹೋರಾಟದ, ಅನಿರ್ದಿಷ್ಟಾವದಿ ಸರದಿ ಉಪವಾಸ ಸತ್ಯಾಗ್ರಹ ಹಲವು ತಲ್ಲಣಗಳನ್ನು ಉಂಟುಮಾಡಿತು. ಧರಣಿ ಮಾಡುತ್ತಿರುವವರೆಲ್ಲ ದಸಂಸದ ನಮ್ಮ ಒಡನಾಡಿಗಳೇ. ಸರ್ಕಾರಿ ನೌಕರಳಾದ ನಾನು ಅವರನ್ನು ಮಾತನಾಡಿಸಿದರೆ ಎಲ್ಲಿ ತಪ್ಪಾದಿತೋ ಎಂಬ ಭಯ ಮತ್ತು ಕಚೇರಿಯಲ್ಲಿ, 'ನಿಮ್ಮ ಮನೆಯವರೇನ್ರಿ ಈ ತರಹ ಸರ್ಕಾರದ ವಿರುದ್ಧವೇ ಜನರನ್ನು ಎತ್ತಿ ಕಟ್ಟುತ್ತಾರಲ್ರೀ?' ಎಂದರೇ ಏನು ಹೇಳುವುದು? ಎಂಬ ಆತಂಕಗಳು ಮನದಲ್ಲಿ ತುಂಬಿಕೊಂಡಿತು. ಆದರೂ ಮಧ್ಯಾಹ್ನದ ಬಿಡುವಿನ ವೇಳೆಯಲ್ಲಿ ಸತ್ಯಾಗ್ರಹದಲ್ಲಿದ್ದ ಒಬ್ಬಿಬ್ಬರನ್ನು ಕರೆದು ಮಾತನಾಡಿಸುತ್ತಿದ್ದೆ. ಬ್ಯಾನರ್–ಕರಪತ್ರಗಳನ್ನೋದುವುದು, ಕುಡಿಯುವುದಕ್ಕೆ ನೀರು ಕಳುಹಿಸುವುದು ಮಾಡುತ್ತಿದ್ದೆ. ಆದರೆ ಸತ್ಯಾಗ್ರಹದ ಟೆಂಟ್‌ನಲ್ಲಿ ಹೋಗಿ ಕುಳಿತುಕೊಳ್ಳುವ ಧೈರ್ಯ ಮಾತ್ರ ಬರಲಿಲ್ಲ.

ನನ್ನ ಮನದಲ್ಲಿನ ತಲ್ಲಣಗಳ ಮಧ್ಯೆ, ಮುಂದಿನ ದಿನಗಳಲ್ಲಿ ನನ್ನನ್ನು ಅಲ್ಲಿಂದ ಎತ್ತಂಗಡಿ ಮಾಡುವ ಹುನ್ನಾರ ನಡೆಯುತ್ತಿತೆಂಬುದು ಆಗ ಅರಿವಿಗೆ ಬರಲೇ ಇಲ್ಲ. ಸುಮಾರು ಒಂದು ವರ್ಷದವರೆಗೆ ಈ ಧರಣಿ ಸತ್ಯಾಗ್ರಹ ನಡೆಯಿತು. ಈ ಸಂಬಂಧವಾಗಿ ಭದ್ರಾವತಿಯಿಂದ ಶಿವಮೊಗ್ಗ ಜಿಲ್ಲಾಧಿಕಾರಿಗಳವರ ಕಚೇರಿಗೆ ಸೈಕಲ್ ಜಾಥ, ಕಾಲ್ನಡಿಗೆ ಜಾಥಾಗಳು ನಡೆದವು. ಕೊನೆಗೂ ಬಡ ದಲಿತ ರೈತರ ಕೂಗು ಸರ್ಕಾರದ ಕಣ್ಣು ತೆರೆಯಿಸಿತು. ಆಗಿನ ಕಂದಾಯ ಮಂತ್ರಿಗಳಾದ ಬಿ. ಬಸವಲಿಂಗಪ್ಪನವರು "Prohibition of Transfer of Certain Lands Act" ಕಾಯ್ದೆಯನ್ನು(PTCL) ವಿಧಾನಸಭೆಯಲ್ಲಿ ಮಂಡಿಸಿದರು. ದೀರ್ಘ ಚರ್ಚೆಯ ನಂತರ ಅದು ಕಾನೂನಾಗಿ

ಜಾರಿಗೆ ಬಂದಿತು. ಇದು ದಲಿತರ ಭೂ ಹೋರಾಟಕ್ಕೆ ಸಿಕ್ಕ ಪ್ರಥಮ ಯಶಸ್ಸಾಗಿತ್ತು. ಈ ಹೋರಾಟದಿಂದ ಗಿರಿಯಪ್ಪ, ಈರಯ್ಯ, ಜೆ.ಜೆ. ಶಿವಲಿಂಗಪ್ಪ, ಎಂ.ಎಲ್. ನಾಗಭೂಷಣ, ಟಿ. ರಾಜಣ್ಣ ಮುಂತಾದವರು ಸಕ್ರಿಯ ಕಾರ್ಯಕರ್ತರಾಗಿ ಚಳುವಳಿಯ ನೊಗವನ್ನು ಹೊತ್ತುಕೊಂಡರು. ಸ್ವಾತಂತ್ರ್ಯಾನಂತರದಲ್ಲಿ ಕರ್ನಾಟಕದಲ್ಲಿ ನಡೆದ ದಲಿತರ ಪ್ರಥಮ ಭೂಚಳುವಳಿ ಇದಾಗಿತ್ತು. ಇದರಿಂದ ಕೃಷ್ಣಪ್ಪನವರಿಗೆ ಈ ಸ್ವಾಭಿಮಾನಿ ಹೋರಾಟವನ್ನು ಕರ್ನಾಟಕದ ಉದ್ದಗಲಕ್ಕೂ ತೆಗೆದುಕೊಂಡು ಹೋಗುವ ನೈತಿಕ ಸ್ಥೈರ್ಯ ಬಂದಿತು.

ಭದ್ರಾವತಿಯಲ್ಲಿ ತಾಲ್ಲೂಕು ಕಚೇರಿ ಸರ್ಕಲ್ ಎಂದರೆ ಬಹಳ ಪ್ರಸಿದ್ಧವಾದ ದೊಡ್ಡ ವೃತ್ತ. ಒಂದು ದಿನ ಸಂಜೆ ೬ ಗಂಟೆ ಸಮಯದಲ್ಲಿ ನಾನು ಕಚೇರಿ ಮುಗಿಸಿಕೊಂಡು ಬಸ್ಸಿಗೆ ಹೋಗಲು ಆ ವೃತ್ತದ ಬಳಿ ಬರುತ್ತಿರುವಾಗ ದಟ್ಟ ಜನಸಂದಣಿ ಕಂಡು ಬಂದಿತು. ನಾನು ರಸ್ತೆ ಬಾಜುವಿನಲ್ಲೇ ನಡೆದು ಹೋಗಿಬಿಡೋಣ ಎಂದು ನಿರ್ಧರಿಸಿ ಹೆಜ್ಜೆ ಹಾಕಿದ್ದೆ. ಸುತ್ತುವರಿದ ಜನಸಂದಣಿ ಮಧ್ಯದಿಂದ ಕೃಷ್ಣಪ್ಪ ಮೈಕಿನಲ್ಲಿ ಮಾತನಾಡುತ್ತಿದ್ದುದು ಕೇಳಿಸಲಾರಂಭಿಸಿತು. ಅಲ್ಲೇ ಪಕ್ಕದಲ್ಲಿ ನಿಂತೆ. ಇವರು ಕಾಣಿಸಲಿಲ್ಲ. ನನ್ನ ಮುಂದೆ ಹಾದುಹೋದ ಒಂದು ಗುಂಪು "ಈಯಮ್ಮನ ಗಂಡಾನೇ ಅಲ್ಲಿ ಮಾತಾಡ್ತಾ ಇರೋದು. ಇವರು ಬಿಡಿಓ ಆಫೀಸ್‌ನಲ್ಲಿದ್ದಾರೆ" ಎಂದುಕೊಳ್ಳುತ್ತಾ ಮುಂದೆ ಹೋದರು. ನಾನು ಪಕ್ಕದ ಅಂಗಡಿ ಸಾಲಿನ ಕಟ್ಟೆಯನ್ನೇರಿ ವೀಕ್ಷಿಸಲಾರಂಭಿಸಿದೆ. ಕೃಷ್ಣಪ್ಪ ಆಗ ಬಳಕೆಯಲ್ಲಿದ್ದ ಲೌಡ್ ಸ್ಪೀಕರ್ ಹಿಡಿದುಕೊಂಡು, "ಸಂಗಪ್ಪನನ್ನು ಜೀತಕ್ಕಿಟ್ಟುಕೊಂಡಿದ್ದೆ ಅಲ್ದೆ ದುಡಿಸಿಕೊಂಡು ಕೊಲೆ ಮಾಡಿದ್ದಾರೆ. ದುಡಿದುಣ್ಣಲು ಜಮೀನು ಕೇಳಿದ್ದೇ ದುರಹಂಕಾರವೆಂದು ಜೀತಗಾರ ಸಂಗಪ್ಪನನ್ನು ಕೊಲೆ ಮಾಡಿ ನೇತು ಹಾಕಿದ್ದಾರೆ. ಭೂಮಾಲಿಕ ತಾಲ್ಲೂಕು ಅಭಿವೃದ್ಧಿ ಮಂಡಳಿ ಅಧ್ಯಕ್ಷ ಲೋಕೇಶಪ್ಪನನ್ನು ಬಂಧಿಸಿ, ಪತ್ರೆ ಸಂಗಪ್ಪನಿಗೆ ನ್ಯಾಯ ದೊರಕಿಸಿ!" ಎಂದು ಘರ್ಜಿಸುತ್ತಿದ್ದರು.

ನನ್ನ ಎದೆಯಲ್ಲಿ ಢವಢವ ಶುರುವಾಗಿಯೇ ಬಿಟ್ಟಿತ್ತು. ಅವರು ಆರೋಪಿಸುತ್ತಿದ್ದ ಆ ಲೋಕೇಶಪ್ಪ ಮತ್ಯಾರು ಅಲ್ಲ – ಆತ ನಮ್ಮ ಕಚೇರಿಯ ಸುಪರ್ದಿಯಾಗಿದ್ದ ತಾಲ್ಲೂಕು ಅಭಿವೃದ್ಧಿ ಮಂಡಳಿಯ ಅಧ್ಯಕ್ಷನಾಗಿದ್ದ. ಮರುದಿನದಿಂದ ಕಚೇರಿಯಲ್ಲಿ ನಾನು ಹೇಗೆ ಎಲ್ಲರನ್ನು ಎದುರಿಸೋದು ಎಂಬ ತಳಮಳಗಳು ನನ್ನಲ್ಲಿ ಭುಗಿಲೆದ್ದವು. ಆಗಲೇ ಕತ್ತಲಾಗಿದೆ, ಮಕ್ಕಳು ಮನೆಯಲ್ಲೆರಡೇ ಇವೆ. ಬೇಗ ಹೋಗಿ ಬಿಡೋಣವೆಂದು ಬಸ್ಸನ್ನೇರಿದೆ. ಮುಂದಿನ ಆಗು ಹೋಗುಗಳ ಬಗ್ಗೆ ಮನ ಲೆಕ್ಕಾಚಾರ ಹಾಕುತ್ತಿತ್ತು. ಸಿದ್ಲೀಪುರ ಭೂ ಹೋರಾಟ ಒಂದು ಕಡೆ ಭೂಹೀನ ದಲಿತರ ಸಮಸ್ಯೆಯಾದರೆ, ಇನ್ನೊಂದು ಕಡೆಅದು ಆ ಜಮೀನನ್ನು ಒತ್ತುವರಿ ಮಾಡಿದ ಭೂಮಾಲೀಕ ಭೂಪಾಲಂ ಚಂದ್ರಶೇಖರಯ್ಯನವರ ವಿರುದ್ಧವೂ ಆಗಿತ್ತು. ನಾನಿದ್ದ ತಾಲ್ಲೂಕು ಅಭಿವೃದ್ಧಿ ಮಂಡಳಿಯ ಬಹುತೇಕ ಸದಸ್ಯರು ಭೂಮಾಲೀಕರೇ ಆಗಿದ್ದರು.

ಪಿ.ಟಿ.ಸಿ.ಎಲ್ ಕಾಯ್ದೆ ಬಂದು ಮತ್ತು ಸಿದ್ಲೀಪುರ ಹೋರಾಟ ಮುಕ್ತಾಯವಾಗಿ, ಪತ್ರೆ ಸಂಗಪ್ಪನ ಕೊಲೆ ಪ್ರಕರಣ ಆರಂಭವಾದ ನಂತರ ನಮ್ಮ ಮಂಡಳಿಯ ಸದಸ್ಯರು, ನನ್ನನ್ನು ನೋಡುವ ದೃಷ್ಟಿಯೇ ಬದಲಾಯಿತು. ಯೋಜನೆಗಳು, ಸಭೆಗಳು ಇತ್ಯಾದಿಗಳಿಗೆ ಸಂಬಂಧಿಸಿದ ಶಾಖೆಯನ್ನು ನಾನು ಕಚೇರಿಯಲ್ಲಿ ನಿರ್ವಹಿಸದೇ ಇದ್ದುದರಿಂದ, ಅಧ್ಯಕ್ಷರು – ಸದಸ್ಯರುಗಳ ಮುಂದೆ ಹೋಗಿ ನಿಂತುಕೊಳ್ಳುವ ಪ್ರಮೇಯ ನನಗೆ ಬರಲಿಲ್ಲ. ಅದಾಗ್ಯೂ ವರ್ಗಾವಣೆ ಪಟ್ಟಿಯಲ್ಲಿ ನನ್ನನ್ನು ಶಿವಮೊಗ್ಗಕ್ಕೆ ವರ್ಗಾವಣೆ ಮಾಡಿದ ಆದೇಶ ಹೊರಬಿತ್ತು. ಮನೆಯಲ್ಲಿ ಚಿಕ್ಕಮಕ್ಕಳು. ನಾನು ಶಿವಮೊಗ್ಗ – ಭದ್ರಾವತಿ ಓಡಾಟ ಮಾಡಲಾಗದ ಸ್ಥಿತಿ. ಇದನ್ನು ವಿವರಿಸಿ, ಮತ್ತೆ ಜಿಲ್ಲಾಧಿಕಾರಿಗಳಿಗೆ ಒಂದು ಮನವಿ ಸಲಿಸದೆ ಗತ್ಯಂತರವಿರಲಿಲ್ಲ. ಕೃಷ್ಣಪ್ಪ ಜಿಲ್ಲಾಧಿಕಾರಿಗಳವರೊಂದಿಗೆ ಈ ಬಗ್ಗೆ ಮಾತನಾಡಿ ಬಂದರು.

(ಮುಂದುವರೆಯುವುದು)

## ಇನ್ನಿಲ್ಲ ನಮ್ಮ ಗೆಳೆಯ ಬಿ. ರಾಜಣ್ಣ...

**ಭ**ದ್ರಾವತಿ–ಶಿವಮೊಗ್ಗೆ ಸೀಮೆಯ ಎಲ್ಲ ಸಮಾಜವಾದಿಗಳ ಆಪ್ತ ಗೆಳೆಯರಾಗಿದ್ದ ಕಥೆಗಾರ, ಕವಿ. ಬಿ. ರಾಜಣ್ಣ ಇನ್ನಿಲ್ಲವಾಗಿದ್ದಾರೆ. ಅವರು ಬೆಂಗಳೂರಿನ ತಮ್ಮ ಮಕ್ಕಳ ಮನೆಯಲ್ಲಿ ೬೭ನೇ ವಯಸ್ಸಿನಲ್ಲಿ ಹೃದಯಾಘಾತಕ್ಕೆ ಒಳಗಾಗಿ ಕೊನೆಯುಸಿರೆಳದಿದ್ದಾರೆ. ಅವರ ದೇಹವೀಗ ಅವರ ತವರೂರಾದ ಮೈಸೂರು ಜಿಲ್ಲೆಯ ಸಾಲಿಗ್ರಾಮದ ಬಳಿಯ ರಾಂಪುರದ ಅವರ ಜಮೀನನಲ್ಲಿ ಮಲಗಿದೆ.

ಭದ್ರಾವತಿಯ ಕಬ್ಬಿಣ ಕಾರ್ಖಾನೆಗೆ ಫೋರ್‌ಮನ್ ಆಗಿ ಸೇರಿ ಎಂಜಿನಿಯರ್ ಆಗಿ ಸ್ವಯಂ ನಿವೃತ್ತಿ ಪಡೆದು ಹಸಿರ ಮಧ್ಯೆ ಮಣ್ಣ ಬದುಕು ನಡೆಸಲು ತೊಂಭತ್ತರ ದಶಕದಲ್ಲಿ ತಮ್ಮ ಹಳ್ಳಿಗೆ ವಾಪಸಾದ ರಾಜಣ್ಣ ಅಲ್ಲಿಯೂ ಶಾಂತಿ ಕಾಣದೆ ಬೆಂಗಳೂರು ಸೇರಿದರು. ಬಾಯಿಯಲ್ಲಿ ಬೀಡಿಯನ್ನೋ ಸಿಗರೇಟನ್ನೋ ಕಚ್ಚಿಕೊಂಡು ಅದರ ಪುಡಿಯನ್ನು ಎಲ್ಲೆಂದರಲ್ಲಿ ಉದುರಿಸುತ್ತಲೋ ಕೆಮ್ಮಿ ಕ್ಯಾಕರಿಸಿ ಉಗುಳಿ ಗಂಟಲು ಸರಿ ಮಾಡಿಕೊಳ್ಳುತ್ತಲೋ ಸದಾ ಅಶಾಂತರಾಗಿ ಓಡಾಡುತ್ತಿದ್ದ ನೇರ ನಡೆ ನಡಿಯ ರಾಜಣ್ಣ ನೋಡಲು ಮಾತ್ರ ಚಿರ ಯೌವ್ವನಿಗ!

ತಮ್ಮ ಬದುಕಿನ ಬಹು ಭಾಗವನ್ನು ಭದ್ರಾವತಿಯಲ್ಲಿ ಕಾರ್ಮಿಕರು ಮತ್ತು ಸಮಾಜವಾದಿಗಳ ಮಧ್ಯೆ ಕಳೆದ ರಾಜಣ್ಣ ಆ ಊರಿನಲ್ಲಿ ಸಮಾಜವಾದಿ ನೆಲೆಯೊಂದನ್ನು, ನಂತರ ದಲಿತ ಚಳುವಳಿಯ ಭದ್ರಕೋಟೆಯನ್ನು ಸ್ಥಾಪಿಸಲು ಶ್ರಮಿಸಿದವರು. ಆಗ ನಾಗೇಂದ್ರ ರಾವ್, ಬಿ. ಕೃಷ್ಣಪ್ಪ ಗಿರಿಯಪ್ಪ ಮುನೀರ್, ನಿಸಾರ್ ಅಹ್ಮದ್ ಎಂ. ಚಂದ್ರಶೇಖರಯ್ಯ, ಟಿ.ಎನ್. ರಂಗೇಗೌಡ ಮುಂತಾದವರು ಅವರ ಒಡನಾಡಿಗಳು

ಎಲ್ಲ ಸಮಾಜವಾದಿಗಳಂತೆಯೇ, ತೀವ್ರ ಸಾಹಿತ್ಯಿಕ–ಸಾಂಸ್ಕೃತಿಕ ಆಸಕ್ತಿಯಿದ್ದ ರಾಜಣ್ಣ ತಲಾ ಮೂರು ಕವನ ಸಂಕಲನಗಳು ಮತ್ತು ಕಥಾ ಸಂಕಲನಗಳನ್ನು ಪ್ರಕಟಿಸಿದ್ದಾರೆ. ಮೈಸೂರು ಸೀಮೆಯ ದಟ್ಟ ಗ್ರಾಮೀಣ ಸೊಗಡಿನೊಂದಿಗೆ ಮಾತನಾಡುತ್ತಾ, ಬರೆಯುತ್ತಿದ್ದ ಅವರಿಗೆ ತಮ್ಮ ಸಾಹಿತ್ಯ ಗಂಭೀರ ವಿಮರ್ಶೆಗೆ ಒಳಗಾಗಲಿಲ್ಲ ಎಂಬ ನೋವಿತ್ತು. ಅವರ ಕೊನೆಯ ದಿನಗಳಲ್ಲಿ ಜಾನಪದ ವಿಶ್ವವಿದ್ಯಾನಿಲಯವು ಅವರಲ್ಲಿದ್ದ ಸಮೃದ್ಧ ನುಡಿ ಸಂಪತ್ತನ್ನು ಗುರುತಿಸಿ ಅವರ ಸೇವೆಯನ್ನು ಬಳಸಿಕೊಳ್ಳಲಾರಂಭಿಸಿತ್ತು ಎಂಬುದೊಂದು ಸಮಾಧಾನದ ಸಂಗತಿ.

ಅವರನ್ನು ಇದ್ದಕ್ಕಿದಂತೆ ಕಳೆದುಕೊಂಡು ದಿಗ್ಭ್ರಾಂತವಾಗಿರುವ ಅವರ ಗೆಳೆಯರ ಬಳಗ ಅವರ ಆತ್ಮಕ್ಕೆ ಶಾಂತಿ ಕೋರುತ್ತದೆ **–ಡಿಎಸ್ನೆಸ್**



### ಮಣ್ಣ ಜೀವ

(ಗೆಳೆಯ ಬಿ. ರಾಜಣ್ಣನ ನೆನಪಿಗೆ–)

ಕಾಲು ಬಿಗಿದು ತಳಲಾಗಿ ಕೂತಿದ್ದಾನೆ
ನೆತ್ತಿ ಮೇಲೆ ಗರಿ ಒಡೆಯಬೇಕಷ್ಟೇ

ಹುಯ್ದು ಕೊಡ ನೀರು
ಮೀಯಿಸಿ ಗುದ್ದಿನೊಳಗಿರಿಸಿ
ಮಣ್ಣು ಸರಿಸಿಬಿಡಿ

ಅವನೊಂದು ಸಸಿಯಾಗುವನು ಅವನ
ಕನಸಿನ ತೋಟದಲ್ಲಿ

*

ಮತ್ತು
ಹರಕು ಮೋಡವ ಸೆಳೆದು
ಒಡಕು ಗುಡುಗಿನ ಸದ್ದು
ಸೀಳಿ ಫಳಿರೆನುವ ನಗು
ಹನಯಾಗಿ ಸುರಿಯುವುದು ಅವನೇ

ಅವನ ಮಣ್ಣಿನೆದೆ ಮೇಲೆ!

**–ಎಸ್ ಮಂಜುನಾಥ್**

# ಮತೀಯ ಭಯೋತ್ಪಾದನೆ : ಒಂದು ವಿಶ್ಲೇಷಣಾತ್ಮಕ ಹಿನ್ನೋಟ



**ಮು**ಜಫರ್ ನಗರ ಗಲಭೆ ಪೀಡಿತ ಮುಸ್ಲಿಮರ ಮಧ್ಯೆ ಪಾಕಿಸ್ಥಾನದ ಐ.ಎಸ್.ಐ. ತನ್ನ ಹೊಸ ಸಿಪಾಯಿಗಳನ್ನು ಹುಡುಕುತ್ತಿದೆ ಎಂಬ ರಾಹುಲ್ ಗಾಂಧಿಯವರ ಹೇಳಿಕೆಗೆ ಅಷ್ಟೊಂದು ವಿರೋಧ ಮತ್ತು ತಿರಸ್ಕಾರ ಎದುರಾಗುವುದು ನಮ್ಮ ಕಾಲದ ಸಿನಿಕ ರಾಜಕೀಯವೇ ಸರಿ. ರಾಹುಲ್ ಗಾಂಧಿಯವರ ಸಹಾನುಭೂತಿಗೆ ಭಾಜನರಾದ ಮುಸ್ಲಿಮರಿಂದಲೂ ಸಹ ಈ ಬಗ್ಗೆ ಭಾವೋದ್ವೇಗದ ಮಾತುಗಳು ಕೇಳಿಬಂದದ್ದು ಒಂದು ವ್ಯಂಗ್ಯ. ತಮ್ಮ ಹೇಳಿಕೆಯನ್ನು ನಾಜೂಕಿಲ್ಲದ ರೀತಿಯಲ್ಲಿ ಅಥವಾ ಅಪರಿಪೂರ್ಣವಾಗಿ ವಿನ್ಯಾಸಗೊಳಿಸಿದ್ದಕ್ಕೆ. ಭಯೋತ್ಪಾದನೆಯ ಸರ್ವಭಕ್ಷಕ ಭಯಾನಕತೆಯ ಬಗ್ಗೆ ಮಾತನಾಡದಿದ್ದುದ್ದಕ್ಕೆ. ಬೆಂದ ಮನೆಯಲ್ಲಿ ಗಳ ಹಿರಿಯುವ ಕೆಲಸ ಮಾಡಬಾರದೆಂದು ಪಾಕಿಸ್ಥಾನಕ್ಕೆ ಎಚ್ಚರಿಕೆ ನೀಡದೆ ಇದ್ದುದ್ದಕ್ಕೆ, ಹೀಗೆ ಹಲವು ಕಾರಣಗಳಿಗಾಗಿ ರಾಹುಲ್ ಗಾಂಧಿಯವರನ್ನು ಟೀಕಿಸಬಹುದು. ಆದರೆ ಮತೀಯ ಹಿಂಸೆಯ ಇತಿಹಾಸದ ರಹಸ್ಯವನ್ನು ಕುರಿತ ರಾಹುಲ್ ಗಾಂಧಿಯವರ ಗ್ರಹಿಕೆಯೇ ತಪ್ಪೇ? ಎಂಬುದು ನಿಜವಾದ ಪ್ರಶ್ನೆ.

ಉಗ್ರವಾದಕ್ಕೆ ತಮ್ಮದೇ ವಿಶಿಷ್ಟ ಕಾರಣಗಳಿರುವ ಕಾಶ್ಮೀರ ಮತ್ತು ಈಶಾನ್ಯ ರಾಜ್ಯಗಳನ್ನು ಹೊರತುಪಡಿಸಿ ಭಾರತದಲ್ಲಿ ಭಯೋತ್ಪಾದನೆಯ ಇತಿಹಾಸವೆಂದರೆ ಅದು ಸ್ಪರ್ಧಾತ್ಮಕ ಮತೀಯವಾದದ ಇತಿಹಾಸವೇ ಆಗಿದೆ. ಹಲವಾರು ಮುಸ್ಲಿಂ ಯುವಕರು ಮೂಲಭೂತವಾದಿಗಳಾಗುವುದಕ್ಕೆ ಏಕೈಕ ಪ್ರಮುಖ ಕಾರಣ ಸಂಘ ಪರಿವಾರದ ಸಂಘಟಿತ ಗುಂಪು ಹಿಂಸೆಯೇ ಆಗಿದೆ. ಹಿಂದು ಮತ್ತು ಮುಸ್ಲಿಂ ಮೂಲಭೂತವಾದಕ್ಕೆ, ಹಿಂಸೆಯು ಪ್ರತಿ ಹಿಂಸೆಯನ್ನು ಹುಟ್ಟುಹಾಕುವ ಒಂದು ಪಾರಸ್ಪರಿಕ ಪ್ರಚೋದನೆಯ ದೀರ್ಘ ಇತಿಹಾಸವಿದೆ. ಆದರೆ ಎರಡು ಘಟನೆಗಳು– ಬಾಬ್ರಿ ಮಸೀದಿಯ ಧ್ವಂಸದಲ್ಲಿ ಪರ್ಯಾವಸನಗೊಂಡ ರಾಮಜನ್ಮ ಭೂಮಿ ಚಳುವಳಿ ಮತ್ತು ಗೋಧ್ರಾ ನಂತರದ ಗುಜರಾತ್ ಗಲಭೆಗಳು ಈ ಇತಿಹಾಸದ ಸಂಧಿಕಾಲಗಳೆನಿಸಿವೆ. ಪ್ರತೀಕಾರಾತ್ಮಕ ನ್ಯಾಯವೆಂಬ ಅಪಕಲ್ಪನೆಯಿಂದ ಪ್ರಚೋದಿತರಾದ ಕೆಲವು ಮುಸ್ಲಿಂ ಯುವಕರು ಜಾಗತಿಕ ಇಸ್ಲಾಮಿಕ್ ಜಿಹಾದ್‌ಗೆ ತಮ್ಮನ್ನು ತಾವು ತೆತ್ತುಕೊಂಡುಬಿಟ್ಟಿದ್ದಾರೆ.

ಮುಖ್ಯವಾಹಿನಿ ರಾಜಕಾರಣಿಗಳಿಗೆ ಮತ್ತು ಪಕ್ಷಗಳಿಗೆ ಭಯೋತ್ಪಾದನೆಯ ಹುಟ್ಟಿನ ವಿಚಾರವನ್ನು ಇಡಿಯಾಗಿ ಎದುರುಗೊಳ್ಳುವುದು ಎಂದರೆ ಬರೀ ಹಳಸಲು ವಿವರಣೆಗಳನ್ನು ನೀಡುವುದಾಗಿದ್ದು ಅದರಾಚೆಗೆ ಅವರು ಹೋಗಲಾರರು. ಹೀಗಾಗಿ ರಾಹುಲ್ ಗಾಂಧಿಯವರ ಹೇಳಿಕೆಯು ಇಡೀ ರಾಜಕೀಯ ವರ್ಗಕ್ಕೆ ಮಾತ್ರವಲ್ಲದೆ ಮಾನವ ಹಕ್ಕುಗಳ ಹೋರಾಟಗಾರರು ಮತ್ತು ಕೆಲವು ಪ್ರಮುಖ ಮುಸ್ಲಿಂ ಗುರುಗಳಿಗೂ ಸಹ ಸಿಟ್ಟು ತರಿಸಿದ್ದು ಆಶ್ಚರ್ಯವೇನಲ್ಲ. ಕೆಲವು ತಿಂಗಳ ಹಿಂದೆ ಕಾಂಗ್ರೆಸ್‌ನ ಪ್ರಧಾನ ಕಾರ್ಯದರ್ಶಿ ಶಕೀಲ್ ಅಹಮದ್ ರಾಷ್ಟ್ರೀಯ ತನಿಖಾ ಸಂಸ್ಥೆ(NIA)ಯ ಕಡತವೊಂದರಿಂದ ಉದ್ಧರಿಸುತ್ತಾ ೨೦೦೨ರ ಗುಜರಾತ್ ಗಲಭೆಗಳಿಗೆ ಪ್ರತಿಯಾಗಿ ಇಂಡಿಯನ್ ಮುಜಾಹಿದೀನ್ (IM), ಸಂಘಟನೆಯು ಹುಟ್ಟಿಕೊಂಡಿತು ಎಂದಾಗ ಅವರು ಎಲ್ಲಾ ವರ್ಗಗಳಿಂದಲೂ ಖಂಡನೆಗೆ ಒಳಗಾದರು. ಆದರೆ ಅನುದ್ದಿಶ್ಯವಾಗಿಯೇ ಆದರೂ, ರಾಹುಲ್ ಗಾಂಧಿ ಚಾಲನೆ ನೀಡಿದ ಹೇಳಿಕೆಯಲ್ಲಿ ಅಡಗಿರುವ ಭಯೋತ್ಪಾದನೆಯ ಮೂಲ ಕುರಿತ ಚರ್ಚೆಯೂ ಹಾಗೆಯೇ ನಶಿಸಿ ಹೋಗುವುದಾದರೆ ಅದು ನಿಜವಾಗಿಯೂ ವಿಷಾದನೀಯ ಸಂಗತಿ. ಹಿಂದುತ್ವದ ಮೂಲಭೂತವಾದ ಮತ್ತು ದೇಶೀಯ ಹುಟ್ಟಿನ ಇಸ್ಲಾಂ ಭಯೋತ್ಪಾದನೆ, ನಾಗರೀಕ ಸಮಾಜ ಮತ್ತು ರಾಜಕೀಯ ವರ್ಗ ಇವುಗಳ ನಡುವಿನ ಪರಸ್ಪರ ಪ್ರತಿಕ್ರಿಯೆಗಳಿಗೆ ಕೇವಲ ಬಾಯಿ ಮಾತಿನ ಉಪಚಾರ ನೀಡುವ ಬದಲು ಅವನ್ನು ವಿವರವಾದ ಮತ್ತು ಆಳವಾದ ಪರಿಶೀಲನೆಗೆ ಒಳಪಡಿಸಬೇಕಾದ ಅಗತ್ಯವಿದೆ.

ಕಳೆದ ನಾಲ್ಕು ವರ್ಷಗಳಲ್ಲಿ ನಮ್ಮ ತನಿಖಾ ಸಂಸ್ಥೆಗಳು ೧೦೦ಕ್ಕೂ ಹೆಚ್ಚು ಇಂಡಿಯನ್ ಮುಜಾಹಿದೀನ್ ಉಗ್ರವಾದಿಗಳನ್ನು ಬಂಧಿಸಿವೆ. ಅಷ್ಟಾದರೂ ಅವರ ಪಡೆಗಳಿಗೆ ಸೇರಬಯಸುವವರ ಪ್ರವಾಹ ನಿಂತಿಲ್ಲ. ಹೈದರಾಬಾದ್ ಬೋಧ್‌ಗಯಾ ಮತ್ತು ಪಾಟ್ನಾದ ಸ್ಫೋಟಗಳು ಈ ದೇಶೀಯ ಭಯೋತ್ಪಾದನೆಯು ಸಂಕ್ರಾಮಿಕ ರೋಗದಂತೆ ಹರಡುತ್ತಿರುವ ಪ್ರಮಾಣವನ್ನು ಸೂಚಿಸುತ್ತದೆ. ಇವುಗಳಲ್ಲಿ ಹಲವಾರು ಪ್ರಕರಣಗಳು ವಿಚಾರಣಾ ಹಂತದಲ್ಲಿರುವುದರಿಂದ ನಾವು ಈಗಲೇ ಯಾವ ತೀರ್ಮಾನಕ್ಕೂ ಬರುವಂತಿಲ್ಲವಾದರೂ, ಭಯೋತ್ಪಾದಕ ಬಾಂಬ್ ಸ್ಫೋಟಗಳು ಬಹುತೇಕ ದೈನಂದಿನ ಘಟನೆಗಳಾಗಿರುವುದನ್ನು ನಾವು ಅಲ್ಲಗೆಳೆಯಲಾಗುವುದಿಲ್ಲ.

ಈ ದಾಳಿಗಳನ್ನು ಯೋಜಿಸುತ್ತಿರುವವರು ಯಾರು? ಸ್ಫೋಟಕ ವಸ್ತುಗಳನ್ನು ಸಂಗ್ರಹಿಸುತ್ತಿರುವವರು, ಬಾಂಬ್ ಮಾಡುವವವರು, ಅವನ್ನು ಹೂಳುವವರು ಯಾರು? ಇದರಿಂದ ಅವರು ಸಾಧಿಸುತ್ತಿರುವುದಾದರೂ ಏನು? ಇವರಿಗಿರುವ ಪ್ರೇರಣೆಯಾದರೂ ಏನು? ಈ ಪ್ರಶ್ನೆಗಳನ್ನು ನ್ಯಾಯಾಲಯಗಳು ಮಾತ್ರವೇ ತೀರ್ಮಾನಿಸಲಿ ಎಂದು ಬಿಟ್ಟು ಬಿಡಲಾಗದಷ್ಟು ನಮ್ಮ ಪ್ರಜಾಪ್ರಭುತ್ವದ ಭವಿಷ್ಯಕ್ಕೆ ಮುಖ್ಯವಾದವು. ಒಟ್ಟಾರೆ ನಮ್ಮ ಸಮಾಜ, ನಿರ್ದಿಷ್ಟವಾಗಿ ನಮ್ಮ ರಾಜಕೀಯ ಸಮುದಾಯ ಈ ಪ್ರಶ್ನೆಗಳನ್ನು ಎದುರಿಸಿ ಇದಕ್ಕೆ ಉತ್ತರಗಳನ್ನು ಕಂಡುಕೊಳ್ಳಬೇಕಾಗಿದೆ.

ಯಾಸಿನ್ ಭಟ್ಕಳ ಎಂಬ ಹೆಸರಿನಿಂದ ಪರಿಚಿತನಾಗಿರುವ ಅಹಮದ್ ಜಹರ್ ಎಂಬ IM ಉಗ್ರವಾದಿಯನ್ನು ಬಂಧಿಸಿದ್ದನ್ನೂ ಅವನು ಹೊರಗೆಡಹಿದ ಮಾಹಿತಿಯನ್ನೂ ಕುರಿತು ಇತ್ತೀಚಿಗೆ ಮಾಧ್ಯಮಗಳು ಬಹು ವ್ಯಾಪಕವಾಗಿ ಪ್ರಚಾರ ಮಾಡಿದವು. ಆದರೆ ಈ ಕುರಿತ ಮುಖ್ಯವಾದ ವಿವರವೊಂದು ಪ್ರಚಾರಕ್ಕೆ ಬರಲೇ ಇಲ್ಲ. ಅದು ಸುಮಾರು ೧೬೦ ಪುಟಗಳಷ್ಟಿರುವ ಅವನ ವಿಚಾರಣಾ ದಾಖಲೆ. (ಇದರ ಒಂದು ಪ್ರತಿ ಲೇಖಕರ ಬಳಿ ಇದೆ) ಈ ದಾಖಲೆಯಲ್ಲಿ ಪುನರಾವರ್ತನೆಗೊಳ್ಳುವ ವಿಷಯ: ಕೋಮುಗಲಭೆಗಳ ಭೀತಿ ಮತ್ತು ಹಿಂದುತ್ವದ ಸಂಘಟನೆಗಳ ಉನ್ಮತ್ತ ಕ್ರೋಧದ ಅತಿರೇಕಗಳು.

ಸ್ಲಿಂಗ್ ಶಾಟ್‌ಗಳೆಂದು ಕರೆಯಲಾಗುವ ಮಿನಿ ಬಾಂಬುಗಳಿಗೆಗೆ ಕುತೂಹಲಕರ ರೀತಿಯಲ್ಲಿ ಸಂಬಂಧವುಳ್ಳ ಈ NIA ವರದಿಯ ಯಥಾವತ್ ತುಣುಕನ್ನು ನೋಡಿ.

“ ೨೦೦೭ರ ಪ್ರಾರಭ ಅಥವಾ ಮದ್ಯಭಾಗದಲ್ಲಿ ಮತೀಯ ಗಲಭೆಗಳ ಸಂದರ್ಭದಲ್ಲಿ ಉಡುಪಿಯಲ್ಲಿ ಅತ್ಯಂತ ಕ್ರಿಯಾಶೀಲವೂ ಆಕ್ರಮಣಕಾರಿಯೂ ಆಗಿದ್ದ ಶ್ರೀರಾಮಸೇನೆ. ಭಜರಂಗದಳ ಮುಂತಾದ ವಿವಿಧ ಹಿಂದು ಸಂಘಟನೆಗಳಿಗೆ ಮುಸ್ಲಿಮರು ಬಲಿಪಶುಗಳಾದರು.

ನಾನು ಭಾರತಕ್ಕೆ ಹಿಂದಿರುಗಿದಾಗ (ದುಬೈನಿಂದ) ಹಿಂಸಾಚಾರದ, ದಂಗೆಯ ಸಂದರ್ಭಗಳಲ್ಲಿ ಮುಸ್ಲಿಮರನ್ನು ರಕ್ಷಿಸಬೇಕೆಂದು ನಿರ್ಧರಿಸಿದೆ. ನಾನು ದುಬೈನಿಂದ ಗುಲ್ಬೆಲ್‌ನ (Sling shot) ಕೆಲವು ಮಾದರಿಗಳನ್ನು

ತೆಗೆದುಕೊಂಡು ಬಂದಿದ್ದೆ. ಆತ್ಮ ರಕ್ಷಣೆಗಾಗಿ ೧೦೦೦ ಗುಲ್ಲೈಲ್‌ಗಳನ್ನು ಮುಸ್ಲಿಮರಿಗೆ ಹಂಚಬೇಕೆಂದು ಬಯಸಿದೆ. ಈ ಯೋಜನೆಯನ್ನು ಕಾರ್ಯಗತಗೊಳಿಸುವುದಕ್ಕಾಗಿ ನಾನು ಮುಂಬೈಗೆ ಹೋಗಿ ಅರಬ್ ತಜೀಲಾದ ಆಸುಪಾಸು ಗುಲ್ಲೈಲ್‌ಗಾಗಿ ಎರಕಗಳನ್ನು ತಯಾರಿಸುವವರನ್ನು ವಿಚಾರಿಸಿದೆ. ಅವರಲ್ಲಿ ಕೆಲವರು ವಿಪರೀತ ಹಣ ಕೇಳಿದರು. ಅಂತಿಮವಾಗಿ ರಾಜು ಭಾಯ್ ಎಂಬಾತ ೧೮೦೦೦ ರೂ.ಗಳಿಗೆ ೧೦೦೦ ಅಚ್ಚುಗಳನ್ನು ತಯಾರಿಸಿಕೊಡಲು ಒಪ್ಪಿದ. ಪ್ರಾರಂಭದಲ್ಲಿ ಪ್ರೊಪಲೀನ್‌ನಿಂದ ಎರಕ ಹುಯ್ಯಲಾಯಿತು. ಆದರೆ ಪರೀಕ್ಷೆಗೆ ಒಳಪಡಿಸಿದಾಗ ಅವು ಸದೃಢವಾಗಿರಲಿಲ್ಲ. ನಂತರ ನೈಲಾನ್‌ನಿಂದ ಅಚ್ಚುಗಳನ್ನು ತಯಾರಿಸಲಾಯಿತು. ಅವನ್ನು ರಟ್ಟಿನ ಪೆಟ್ಟಿಗೆಗಳಲ್ಲಿ ತುಂಬಲಾಯಿತು. ಜೋಡಿಸಲಾಯಿತು. ವಿತರಿಸುವುದಕ್ಕಾಗಿ ಅಬು ಬಾವಾನಿಗೆ (ಆತನ ಸ್ನೇಹಿತ) ತಲುಪಿಸಲಾಯಿತು. ಆದರೆ ಅವನ್ನು ಸಮರ್ಪಕವಾಗಿ ವಿತರಿಸಲು ಸಾಧ್ಯವಾಗದ್ದರಿಂದ ಗುಲ್ಲೈಲ್‌ನಿಂದ ನಮ್ಮನ್ನು ರಕ್ಷಿಸಿಕೊಳ್ಳುವ ಯೋಜನೆ ಯಶಸ್ವಿಯಾಗಲಿಲ್ಲ."

ಶೀಘ್ರದಲ್ಲೇ ಸ್ಲಿಂಗ್ ಶಾಟ್‌ಗಳ ಸ್ಥಳದಲ್ಲಿ ಬಾಂಬ್‌ಗಳು ಬಂದವು. NIA ಮತ್ತು ಇತರೆ ಭಯೋತ್ಪಾದನಾ ವಿರೋಧಿ ಸಂಘಟನೆಗಳನ್ನು ನಂಬುವುದಾದರೆ, ೨೦೦೭ ಮತ್ತು ೨೦೧೩ರ ನಡುವೆ ಯಾಸಿನ್ ಅರ್ಧ ಡಜನ್ ಸ್ಫೋಟಗಳಲ್ಲಿ ಪಾಲ್ಗೊಂಡಿದ್ದ. ೨೦೦೨ರ ನರಮೇಧದ ಪ್ರತೀಕಾರಾರ್ಥ ಸೂರತ್ ಮತ್ತು ಅಹಮದಾಬಾದ್‌ಗಳಲ್ಲಿ ಬಾಂಬ್ ಸ್ಫೋಟಿಸುವ ವಿಸ್ತೃತವಾದ ಯೋಜನೆಯನ್ನು IM ತಯಾರಿಸಿತ್ತು ಎಂಬುದಾಗಿ ತನಿಖಾ ಸಂಸ್ಥೆಗಳು ನಂಬುತ್ತವೆ. (ಕಾನೂನಾತ್ಮಕ ಎಚ್ಚರಿಕೆ: ಈ ಮೊಕದ್ದಮೆಗಳ ವಿಚಾರಣೆ ನಡೆಯುತ್ತಿದ್ದು ಯಾರೊಬ್ಬರ ಅಪರಾಧಿತ್ವದ ಪೂರ್ವ ತೀರ್ಮಾನವು ತಪ್ಪಾಗುತ್ತದೆ).

ಆದರೆ ನಂತರದ ಸರ್ಕಾರಗಳು ಅಂದರೆ ಬಿ.ಜೆ.ಪಿ ಮತ್ತು ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರಗಳೆರಡೂ ಈ ಸ್ಫೋಟಗಳ ಹಿಂದಿನ ಜಾಲದ ರಹಸ್ಯವನ್ನು ಭೇಧಿಸುವಲ್ಲಿ ಸೋತವು. ಆಂತರಿಕ ಭದ್ರತೆಯ ಸೀಮಿತ ಚೌಕಟ್ಟಿನೊಳಗೇ ಅವು ಭಯೋತ್ಪಾದನೆಯ ಬಗ್ಗೆ ವ್ಯವಹರಿಸಿದವು: ಹೆಚ್ಚಿನ ಕಾನೂನುಗಳು, ಹೆಚ್ಚಿನ ಶಸ್ತ್ರಾಸ್ತ್ರಗಳು, ಹೆಚ್ಚಿನ ಹಣಕಾಸು, ತನಿಖಾ ಸಂಸ್ಥೆಗಳಿಗೆ ಹೆಚ್ಚಿನ ಅಧಿಕಾರ ಹೀಗೆ. ಎಲ್ಲಕ್ಕೂ ಪಾಕಿಸ್ಥಾನವನ್ನು ದೂಷಿಸುವುದು ಬೀಜಮಂತ್ರವಾಗಿತ್ತು.

ಭಾರತದಲ್ಲಿ ಭಯೋತ್ಪಾದನೆಯ ಪ್ರಮುಖ ಪ್ರಾಯೋಜಕ ಪಾಕಿಸ್ಥಾನ ಎಂಬುದರಲ್ಲಿ ಅನುಮಾನವಿಲ್ಲ. ಆದರೆ ಸಂಝೋತಾ ಎಕ್ಸ್‌ಪ್ರೆಸ್ ಸ್ಫೋಟಗಳಿಗೂ ಕೂಡ–ಅವು ಹಿಂದುತ್ವವಾದಿಗಳ ಕೈಚಳಕ ಎಂಬುದು ಆನಂತರ ತಿಳಿದುಬಂತು–ಮೊದಲು ಪಾಕಿಸ್ಥಾನವನ್ನೇ ದೂಷಿಸಲಾಯಿತು. ಅಷ್ಟೊಂದು ಜನ ಯುವಕರು – ಮಹಾರಾಷ್ಟ್ರ ಉತ್ತರ ಪ್ರದೇಶ, ಬಿಹಾರ, ಕರ್ನಾಟಕ ಮತ್ತು ಇತರ ರಾಜ್ಯಗಳಿಂದ – ಭಯೋತ್ಪಾದಕ ಸಂಘಟನೆಗಳನ್ನು ಸೇರುತ್ತಿರುವ ಮುಜುಗರವುಂಟುಮಾಡುವ ಸಂಗತಿಯನ್ನು ಮಾತ್ರ ನಾವು ಗಮನಕ್ಕೆ ತೆಗೆದುಕೊಳ್ಳುತ್ತಲೇ ಇಲ್ಲ.

೨೦೦೪ ಮತ್ತು ೨೦೦೮ರ ನಡುವೆ IM ಅನ್ನು ಭೇದಿಸುವವರೆಗೆ ಪ್ರತಿಯೊಂದು ಸ್ಫೋಟಕ್ಕೂ ಸಾಮಾನ್ಯ ಮುಸ್ಲಿಮರನ್ನೇ ದೂಷಿಸಲಾಗುತ್ತಿತ್ತು. ಈ ಕೋಮಿನ ಹಲವಾರು ಯುವಕರನ್ನು ಬಂಧಿಸಲಾಗುತ್ತಿತ್ತು. ಅವರನ್ನು ಹಿಂಸಿಸಿ ಜೈಲಗಟ್ಟಲಾಗುತ್ತಿತ್ತು. ಈ ಹುಡುಗರಿಗೂ IMಗೂ ಯಾವುದೇ ಸಂಬಂಧವಿರಲಿಲ್ಲ, ಅವರು ಸ್ಫೋಟಗಳನ್ನು ನಡೆಸಿರಲಿಲ್ಲ ಎಂಬುದನ್ನು ಮುಂದೆ ತನಿಖಾ ಸಂಸ್ಥೆಗಳೇ ಒಪ್ಪಿಕೊಂಡವು. ಈ ರೀತಿಯ ತಪ್ಪು ಬಂಧನಗಳ ಮತ್ತು ಸುಳ್ಳು ದಾವೆಗಳ ವಿಚಾರದಲ್ಲಿ ಅಪರಾಧಿಗಳು ಎಂದರೆ, ದೆಹಲಿ ಪೋಲೀಸ್‌ನ ವಿಶೇಷ ಸೆಲ್, ಹೈದರಾಬಾದ್ ಪೋಲೀಸ್, ಮಹಾರಾಷ್ಟ್ರದ ಭಯೋತ್ಪಾದನಾ ವಿರೋಧಿ ದಳ. ಅಮಾಯಕ ಮುಸ್ಲಿಮರನ್ನು ವ್ಯೂಹಗಳೊಳಗೆ ಸಿಲುಕಿಸುತ್ತಿರುವಾಗ ಇಸ್ಲಾಮಿಕ್ ಭಯೋತ್ಪಾದನೆಯೆಂಬುದು ಕಠಿಣ ಮತ್ತು ವರ್ತಮಾನದ ವಾಸ್ತವವಾಗಿಯೇ ಉಳಿದಿದೆ.

ಭಾರತದಲ್ಲಿ ಭಯೋತ್ಪಾದನೆಯು ಯಾವಾಗಲೂ ಮತೀಯ ಹಿಂಸೆಯ ಜೊತೆ ಬೆಸೆದುಕೊಂಡೇ ಇತ್ತು. ಪಾಟ್ನಾದಲ್ಲಿನ ಸ್ಫೋಟಗಳು ಮತ್ತು ಬಿ.ಜೆ.ಪಿ ನಾಯಕ ನರೇಂದ್ರ ಮೋದಿಯವರ ಚುನಾವಣಾ ರ್‍ಯಾಲಿ ಹಿಂದುತ್ವದ ಪಟಾಲಂಗಳ ರಾಜಕೀಯ ಮತ್ತು ಇಸ್ಲಾಮಿಕ್ ಜಿಹಾದ್ ಗುಂಪು ಇವುಗಳ ನಡುವೆ ನೇರ ಸಂಬಂಧ ಇರುವುದನ್ನು ತೋರಿಸುವ ಇತ್ತೀಚಿನ ನಿದರ್ಶನ. ರ್‍ಯಾಲಿಯ ಸಂಬಂರ್ಭದಲ್ಲಿ ನಡೆದ ಸ್ಫೋಟಗಳು IMನ ತಹಸಿನ್ ಅಖ್ತರನ ಕೃತ್ಯವಾಗಿದ್ದು, ಮುಜಫರ್ ನಗರದಲ್ಲಿ ಮುಸ್ಲಿಮರನ್ನು ಕೊಂದದ್ದರ ಪ್ರತೀಕಾರಾರ್ಥ ಮೋದಿಯ ಅನುಮೋದಕರನ್ನು ಅಂದರೆ ಸ್ಥೂಲವಾಗಿ ಕೇಸರಿಪರ ಹಿಂದೂಗಳನ್ನು ಕೊಲ್ಲುವುದು ಅವನ ಉದ್ದೇಶವಾಗಿತ್ತು. ವಾರಣಾಸಿಯ ಸಂಕಟ ಮೋಚನ ಮಂದಿರದ ಸ್ಫೋಟ, ಮುಂಬೈನ ಝವೇರಿ ಬಜಾರ್ ಮತ್ತು ಅಪೇರಾ ಹೌಸ್‌ನ ಸ್ಫೋಟ, ದೆಹಲಿಯ ಸರೋಜಿನಿ ನಗರ್ ಮಾರ್ಕೆಟ್ ಸ್ಫೋಟ. ಜೈಪುರದ ದೇವಾಲಯಗಳಲ್ಲಿನ, ಹೈದರಾಬಾದ್‌ನ ಲುಂಬಿನಿ ಉದ್ಯಾನ ಮತ್ತು ದಿಲ್‌ಖುಷ್ ನಗರದ ಸ್ಫೋಟಗಳು, ಅಹಮದಾಬಾದ್‌ನ ರಸ್ತೆಗಳ ಮೇಲಿನ ಸ್ಫೋಟಗಳು, ಸ್ಥೂಲವಾಗಿ ಹಿಂದೂಗಳನ್ನು ಗುರಿಯಾಗಿಸುವ ವಿಚಾರದಲ್ಲಿ ಏಕರೀತಿಯವಾಗಿದ್ದವು. ಇದಕ್ಕೆ ಪ್ರತಿಯಾಗಿ ಸಂಝೋತಾ ಎಕ್ಸ್‌ಪ್ರೆಸ್‌ನಲ್ಲಿ ಇಡಲಾದ ಬಾಂಬ್‌ಗಳು ಹೈದರಾಬಾದ್‌ನ ಮಕ್ಕಾ ಮಸೀದಿಯ ಬಳಿ ಇರಿಸಲಾದ ಬಾಂಬ್‌ಗಳು ಮಲೆಗಾಂವ್ ಮತ್ತು ಪರ್ಬಾನಿ ಮಸೀದಿಯ ಹೊರಗೆ ಇರಿಸಲಾದ ಬಾಂಬ್‌ಗಳು ಮುಸ್ಲಿಮರನ್ನು ಕೊಲ್ಲುವ ಉದ್ದೇಶ ಹೊಂದಿದ್ದವು. ಏಟಿಗೆ ಏಟು ಎಂಬ ಭಯೋತ್ಪಾದನೆಯು ಕೋಮು ಹಿಂಸೆಯ ಮುಂದುವರಿಕೆಯಲ್ಲದೆ ಬೇರೇನೂ ಅಲ್ಲ.

೨೦೦೭ರ ಡಿಸೆಂಬರ್‌ನಲ್ಲಿ ಉತ್ತರ ಪ್ರದೇಶದ ಮೂರು ಪ್ರಮುಖ ನಗರಗಳ ನ್ಯಾಯಾಲಯಗಳಲ್ಲಿ ಸರಣಿ ಬಾಂಬ್‌ಗಳು ಸ್ಫೋಟಿಸುವ ಕೆಲವು ನಿಮಿಷಗಳಿಗೆ ಮೊದಲು IM ನಮ್ಮ ಮಾಧ್ಯನಗಳಿಗೆ e-mail ಸಂದೇಶ ಕಳುಹಿಸಿತು. (ನಂತರದ ಮುಂದಿನ ಕೆಲವು ವರ್ಷಗಳ ಕಾಲ ಪ್ರತಿಯೊಂದು ಪ್ರಮುಖ ದಾಳಿಗೆ ಮೊದಲು ಅದು ಈ ರೀತಿಯ e-mailಗಳನ್ನು ಕಳುಹಿಸುತ್ತಾ ಬಂದಿದೆ) ಈ ಮೂರು ಪುಟಗಳ e-mailನ ಒಂದು ಭಾಗವನ್ನು ಇಲ್ಲಿ ಅಕ್ಷರಶಃ ಉಲ್ಲೇಖಿಸಲಾಗಿದೆ:

"೧೯೯೨ರ ಗುಜರಾತ್ ನರಮೇಧದ ಬಗ್ಗೆ ನಾನು ನಿಮ್ಮ ಗಮನವನ್ನು ಸೆಳೆಯಬಯಸುತ್ತೇನೆ. ಆ ವರ್ಷ ಅವರ ಘೋಷಣೆಗಳ ಕುರಿತ ವಾಸ್ತವಾಂಶವನ್ನು ನಾನು ಅರ್ಥಮಾಡಿಕೊಂಡೆ. ಆ ವರ್ಷ ಅವರು ನಮ್ಮ ಬಾಬ್ರಿ ಮಸೀದಿಯನ್ನು ನೆಲಸಮಗೊಳಿಸಿದರು. ನಮ್ಮ ಅಣ್ಣ ತಮ್ಮಂದಿರನ್ನು ಮಕ್ಕಳನ್ನು ಕೊಂದರು, ನಮ್ಮ ಸಹೋದರಿಯರ ಮೇಲೆ ಅತ್ಯಾಚಾರವೆಸಗಿದರು. ಈ ರೀತಿಯ ನರಮೇಧಗಳಲ್ಲಿ ಭಾರತೀಯ ಪೋಲೀಸರು ಯಾವಾಗಲೂ ಪ್ರಮುಖ ಪಾತ್ರ ವಹಿಸುತ್ತಾರೆ. ಅವರು RSS, VHP ಮುಂತಾದವರಿಗೆ ಶಸ್ತ್ರಾಸ್ತ್ರಗಳನ್ನು ಪೂರೈಸಿ ಪೂರ್ಣ ರಕ್ಷಣೆ ಒದಗಿಸಿದರು. ಈ ಅನ್ಯಾಯವು ಇಲ್ಲಿಗೇ ನಿಲ್ಲುವಿದಿಲ್ಲ. ೧೯೯೨ರ ಹತ್ಯೆಗಳ ಸಂದರ್ಭದಲ್ಲಿ ಖಳರ ಪಾತ್ರ ವಹಿಸಿದರೆಂದು ಶ್ರೀಕೃಷ್ಣ ಸಮಿತಿಯು ಗುರುತಿಸಿದ ಪೋಲೀಸ್ ಅಧಿಕಾರಿಗಳಿಗೆ ಭಡ್ತಿ ನೀಡಲಾಯಿತು... ಮುಂಬೈ ಗಲಭೆಗಳಲ್ಲಿ ಬರೀ ೨೫೭ ಜನರನ್ನು ಕೊಂದವರಿಗೆ(ಪ್ರತೀಕಾರಕ್ಕಾಗಿ) ಜೀವಾವಧಿ ಶಿಕ್ಷೆ ಮತ್ತು ಮರಣ ದಂಡನೆಗಳನ್ನು ವಿಧಿಸಲಾಯಿತು. ಆದರೆ ಇತ್ತೀಚಿನ ನರಮೇಧ ಬರೀ ಭಾರತವನ್ನಷ್ಟೇ ಅಲ್ಲ ಇಡೀ ಪ್ರಪಂಚವನ್ನೇ ನಡುಗಿಸಿದೆ. ಈ ರೀತಿಯ ಅನ್ಯಾಯದ ವಿರುದ್ಧ ಕಠಿಣವಾದ ನಿಲುವನ್ನು ತಳಯಲು ಈ ಗುಜರಾತ್ ನರಮೇಧವು ನಮ್ಮನ್ನು ಪ್ರಚೋದಿಸಿತು. ಈ ರೀತಿಯ ಅನ್ಯಾಯಗಳು ಭಾರತದಲ್ಲಿ ಮುಸ್ಲಿಮರ ದಯನೀಯ ಸ್ಥಿತಿಯನ್ನು ಬಯಲುಮಾಡುತ್ತಿವೆ. ಅವರು ನಮ್ಮ ಸಹೋದರ, ಸಹೋದರಿಯರನ್ನು, ಮಕ್ಕಳನ್ನು ಕೊಲ್ಲಬಹುದು. ಯಾವ ಸಮಯದಲ್ಲಿ ಯಾವ ಸ್ಥಳದಲ್ಲಾದರೂ ಅವರು ನಮ್ಮ ಸಹೋದರಿಯರ ಮಾನಭಂಗ ಮಾಡಬಹುದು. ಆದರೂ ನಾವದನ್ನು ವಿರೋಧಿಸಲಾಗದು"

೨೦೦೪–೦೮ರ ನಡುವೆ ಹಿಡಿಯಷ್ಟು ಇಸ್ಲಾಮಿಕ್ ಮೂಲಭೂತವಾದಿಗಳೂ ಸಣ್ಣ ಸಂಖ್ಯೆಯ ಹಿಂದುತ್ವದ ಮೂಲಭೂತವಾದಿಗಳೂ ಏಟಿಗೆ ಏಟು ಎಂಬ ಭಯೋತ್ಪಾದನೆಯಲ್ಲಿ ತೊಡಗಿದ್ದರೆಂಬುದು ನಮ್ಮ ತನಿಖಾ ಸಂಸ್ಥೆಗಳ ಕಡತಗಳಿಂದ ತಿಳಿದು ಬರುತ್ತದೆ. ಒಂದು ಅತಿವಾದದ ಪ್ರತಿಪಾದಕರ ತಮ್ಮ ಹಿಂಸೆಯು ಮತ್ತೊಂದು ಅತಿವಾದಿಗಳ ಹಿಂಸೆಗೆ ಪ್ರತಿಕ್ರಿಯೆ ಮಾತ್ರ ಎಂದು ತಮ್ಮ ಕೃತ್ಯವನ್ನು ತರ್ಕಸಮ್ಮತಗೊಳಿಸುವ ಪ್ರಯತ್ನ ಮಾಡುತ್ತಾರೆ. ಹಿಂದೂ ಉಗ್ರವಾದಿಗಳು ಮೆಕ್ಕಾ ಮಸೀದಿಯ ಸ್ಫೋಟ ನಡೆಸಿದರೆಂದು (ಇದು ನಿಜವೆಂದು ಮುಂದೆ NIA ಮತ್ತು CBI ತನಿಖೆಗಳಿಂದ ಸಾಬೀತಾಯಿತು) ಮತ್ತು ಇದಕ್ಕಾಗಿ ಹಿಂದೂಗಳಿಗೆ ಶಾಸ್ತಿಯಾಗಬೇಕೆಂದು ಮುಸ್ಲಿಂ ಉಗ್ರವಾದಿಗಳು ೨೦೭ರ ಆಗಸ್ಟ್‌ನ ಹೈದರಾಬಾದ್ ಸ್ಫೋಟಗಳನ್ನು ನಡೆಸಿದರು. ಇದಕ್ಕೆ ಪ್ರತಿಯಾಗಿ, NIA ಆರೋಪ ಪಟ್ಟಿ ಮತ್ತು ಇತರೆ ದಾಖಲೆಗಳ ಪ್ರಕಾರ, ಮಾಲೆಗಾಂವ್ ಸ್ಫೋಟದ ಶಂಕಿತರು ಕಾಶ್ಮೀರ ಮತ್ತು ಇತರೆಡೆಗಳಲ್ಲಿ ಮುಸ್ಲಿಂ ಭಯೋತ್ಪಾದಕರು ನಡೆಸಿದ ಕೃತ್ಯಗಳಿಂದ ಕ್ಷೋಭೆಗೊಂಡು ಪ್ರತೀಕಾರ ಮಾಡಲು ನಿರ್ಧರಿಸಿದ್ದಾಗಿ ಹೇಳಿರುವುದಾಗಿ ತಿಳಿದು ಬರುತ್ತದೆ. ಮುಸ್ಲಿಮರ ವಿರುದ್ಧ ಭಯೋತ್ಪಾದಕ ದಾಳಿ ನಡೆಸುವ ಪಿತೂರಿ ಮಾಡಿದ್ದನ್ನು ಒಪ್ಪಿಕೊಂಡು ಸ್ವಾಮಿ ಅಸೀಮಾನಂದ ದೆಹಲಿಯ ಮ್ಯಾಜಿಸ್ಟ್ರೇಟರ್ ಮುಂದೆ ನೀಡಿದ ಹೇಳಿಕೆ ಹೀಗಿದೆ:

"ಮುಸ್ಲಿಂ ಭಯೋತ್ಪಾದಕರು ೨೦೦೨ರಲ್ಲಿ ಹಿಂದೂ ದೇವಾಲಯಗಳ ಮೇಲೆ ದಾಳಿ ನಡೆಸತೊಡಗಿದರು. ಇದರಿಂದ ನನ್ನಲ್ಲಿ ಕೋಪವೂ ಆತಂಕವೂ ಉಂಟಾಯಿತು. ಹೆಚ್ಚುತ್ತಿರುವ ಇಸ್ಲಾಮಿಕ್ ಭಯೋತ್ಪಾದನೆಯ ಪೀಡೆಯ ಬಗೆಗಿನ ನನ್ನ ಆತಂಕವನ್ನು ವಲ್ಸಾದ್‌ನ ಭರತ್–ರಿತೇಶ್ವರ್ ಅವರೊಡನೆ ಹಂಚಿಕೊಳ್ಳುತ್ತಿದ್ದೆ. ೨೦೦೬ರ ಮಾರ್ಚ್ ತಿಂಗಳು ಪ್ರಜ್ಞಾ ಠಾಕೂರ್, ಸುನಿಲ್ ಜೋಷಿ, ಭರತ್ ರಿತೇಶ್ವರ್ ಮತ್ತು ನಾನು ಸೇರಿ ಸಂಕಟಮೋಚನಾ ಸ್ಫೋಟಕ್ಕೆ ತಕ್ಕ ಉತ್ತರ ನೀಡಬೇಕೆಂದು ನಿರ್ಧರಿಸಿದೆವು. ಬಾಂಬಿಗೆ ಬಾಂಬಿನ ಮೂಲಕವೇ ಉತ್ತರ ನೀಡಬೇಕೆಂದು ತೀರ್ಮಾನಿಸಿದೆವು".

ಸ್ವಾಮಿ ಅಸೀಮಾನಂದನ ಬಂಧನಕ್ಕೆ ೨೦ ವರ್ಷಗಳಷ್ಟು ಪೂರ್ವದಲ್ಲಿಯೇ ಮತೀಯ ದ್ವೇಷದ ಇದೇ ಕಥೆಯನ್ನು ಯಥಾವತ್ತಾಗಿ ಮಹಮದ್ ಜಲೀಸ್ ಅನ್ಸಾರಿಯು CBIನ ಮುಂದೆ ಹೇಳಿದ್ದ. ಆದರೆ ಅದು ಹಿಂದೂಗಳ ವಿರುದ್ಧವಾಗಿತ್ತಷ್ಟೇ. ಕೆಡುಕನ್ನು ಕೆಡುಕಿನಂದಲೇ ಎದುರಿಸಬೇಕೆಂಬ, ಹಿಂಸೆಗೆ ಹಿಂಸೆಯಿಂದಲೇ ಉತ್ತರ ಕೊಡಬೇಕೆನ್ನುವ ಹಸಿಹಸಿಯಾದ ಪ್ರೇರಣೆ ತನ್ನನ್ನು ಭಯೋತ್ಪಾದನೆಯತ್ತ ಕೊಂಡೊಯ್ದಿದ್ದನ್ನು ಆತ ವಿವರಿಸಿದ್ದ. ಬಂಧನಕ್ಕೊಳಗಾಗುವವರೆಗೆ ಆತ ಮಹಾರಾಷ್ಟ್ರ, ಉತ್ತರ ಪ್ರದೇಶ, ರಾಜಸ್ಥಾನ ಮತ್ತು ಆಂಧ್ರ ಪ್ರದೇಶಗಳಲ್ಲಿ ಒಟ್ಟು ೫೩ರಷ್ಟು ಭಯೋತ್ಪಾದಕ ದಾಳಿಗಳನ್ನು ಯೋಜಿಸಿ ಕಾರ್ಯಗತಗೊಳಿಸಿದ್ದ. ಬಹು ವಿಧದ ಮೊಕದ್ದಮೆಗಳಲ್ಲಿ ಶಿಕ್ಷೆ ವಿಧಿಸಲ್ಪಟ್ಟು ಆತ ಜೈಪುರದ ಕೇಂದ್ರ ಕಾರಾಗೃಹದಲ್ಲಿ ಏಕಕಾಲಕ್ಕೆ ಬಹುವಿಧದ ಶಿಕ್ಷೆಗಳನ್ನು ಅನುಭವಿಸಿತ್ತಿದ್ದಾನೆ. ಆತನಿಗೆ ೪೧ ವರ್ಷ ವಯಸ್ಸಾಗಿದ್ದಾಗ ೧೯೯೩ರಲ್ಲಿ ಬಂಧಿಸಲ್ಪಟ್ಟಾಗ CBI ಪತ್ತೇದಾರರ ಎದುರಿಗೆ ನೀಡಿದ ಹೇಳಿಕೆ ಹೀಗಿದೆ.

"ಮುಂಬೈನ ಸಿಯೋಂನಲ್ಲಿರುವ ಲೋಕಮಾನ್ಯ ತಿಲಕ್ ವೈದ್ಯಕೀಯ ಕಾಲೇಜಿನಂದ ನಾನು ೧೯೮೧ರಲ್ಲಿ ನನ್ನ MBBS ಪದವಿಯನ್ನು ಪಡೆದೆ. ಇದೇ ಕಾಲೇಜಿನಲ್ಲಿ ನಾನು ಇಂಟೆರ್ನ್‌ಶಿಪ್ ಮಾಡುತ್ತಿದ್ದಾಗ ಅಸ್ಸಾಂನ (೧೯೮೨) ಮೀರತ್ (೧೯೮೨/೮೩) ಭಿವಂಡಿ (೧೯೮೪) ಮುಂತಾದೆಡೆಯ ಮತೀಯ ಗಲಭೆಗಳ ಬಗ್ಗೆ ಪತ್ರಿಕೆಗಳಲ್ಲಿ ಓದಿದೆ. ಪೋಲೀಸರು ಮತ್ತು ಸರ್ಕಾರಗಳ ಪಕ್ಷಪಾತ ನೀತಿಯಿಂದಾಗಿ ಮುಸ್ಲಿಮರು ಅಪಾರ ಕಷ್ಟ ನಷ್ಟ ಅನುಭವಿಸಿತ್ತಿದ್ದಾರೆಂದು ನನಗನ್ನಿಸತೊಡಗಿತು. ಅದು ನನ್ನ ಬದುಕಿನ ಮೇಲೆ ಅಪಾರವಾದ ಪ್ರಭಾವವನ್ನು ಬೀರಿತು. ಮೊರಾದಾಬಾದ್‌ನ ಮುಸ್ಲಿಂ ಗುಂಪಿನ ಮೇಲೆ ನಡೆದ ಗೋಲಿಬಾರ್ ಸಹ ಪಕ್ಷಪಾತಿಯಾಗಿತ್ತೆಂದು ನಾನು ಕೇಳಿದ್ದೆ. ಮುಂಬೈನ ದೈನಂದಿನ ಜೀವನದಲ್ಲೂ ಸಹ ಶಿವಸೇನೆ ಕಾರ್ಯಕರ್ತರು ಮುಸ್ಲಿಮರನ್ನು ಗೋಳಾಡಿಸುವುದನ್ನು, ಮುಸ್ಲಿಮರ ಬಗ್ಗೆ ದ್ವೇಷ ಭಾವನೆಯನ್ನು ಹರಡುವುದನ್ನು ನಾನು ನೋಡುತ್ತಿದ್ದೆ. ಸರ್ಕಾರದ ಅದರಲ್ಲೂ ಪೋಲೀಸರ ವರ್ತನೆಯನ್ನು ನೋಡಿದಾಗ ನನಗೆ ಬಹಳ ನೋವಾಗುತ್ತಿತ್ತು. ಅವರು ಪುಂಡರ ಬಗ್ಗೆ ಉದಾರ ಭಾವನೆಯುಳ್ಳವರಾಗಿದ್ದರು. ಶಿವಸೇನೆಯ ಬಾಳ್ ಠಾಕ್ರೆಯವರು ಮಾಡುತ್ತಿದ್ದ ಪ್ರಚೋದಕ ಭಾಷಣಗಳು ಮುಂಬೈಯಲ್ಲಿ ಮುಸ್ಲಿಮರನ್ನು ಎರಡನೆ ದರ್ಜೆಯ ಪ್ರಜೆಗಳ ಮಟ್ಟಕ್ಕೆ ಇಳಿಸುತ್ತವೆಂದು ನನಗೆ ಅನ್ನಿಸುತ್ತಿತ್ತು. ಅಡ್ವಾಣಿಯವರ ರಥಯಾತ್ರೆ ಮತ್ತು VHPಯ ಕರಸೇವೆಗಳು, ಮುಸ್ಲಿಮರ ಅಸ್ಮಿತೆ ಅಪಾಯದಲ್ಲಿದ್ದು ನಾನು ತಕ್ಷಣ ಕಾರ್ಯಪ್ರವೃತ್ತನಾಗಬೇಕು ಎನ್ನಿಸುವಂತೆ ಮಾಡಿದವು. ಈ ದೇಶದಲ್ಲಿ ಮುಸ್ಲಿಮರಿಗೆ ಸುರಕ್ಷತೆಯಿಲ್ಲ. ಆದ್ದರಿಂದ ಬಿಜೆಪಿ–ಶಿವಸೇನೆಯನ್ನು ವಿರೋಧಿಸುವ ಒಂದು ಭೂಗತ ಸಂಘಟನೆಯನ್ನು ಕಟ್ಟಿ ಶಿವಸೈನಿಕರನ್ನು ನಿಯಂತ್ರಿಸುವಂತೆ ಸರ್ಕಾರದ ಮೇಲೆ ಒತ್ತಡ ತಂದು ಮುಸ್ಲಿಮರನ್ನು ರಕ್ಷಿಸಬೇಕು ಎಂದು ನಾನು ಭಾವಿಸಿದೆ".

ನಾನು ಹೇಳಿದ ಅಂತಃಸಂಬಂಧದ ವಿಚಾರಕ್ಕೆ ಇದಕ್ಕಿಂತಲೂ ಹೆಚ್ಚಿನ ಪುರಾವೆ ಬೇಕೆ? ಎಂಭತ್ತರ ದಶಕದ ಮೊದಲರ್ಧದದ ನಂತರದ ರಾಮಜನ್ಮಭೂಮಿ ಚಳುವಳಿಯು ನಮ್ಮ ಸಾಮಾಜಿಕ ನೇಯ್ಗೆಯನ್ನು ಛಿದ್ರಗೊಳಿಸುವ ಅಪಾಯವನ್ನು ಒಡ್ಡಿತು. ರಥಯಾತ್ರೆಯು ತನ್ನ ಹಾದಿಯುದ್ದಕ್ಕೂ ಕೋಮು ಗಲಭೆಗಳ ಮತ್ತು ರಕ್ತಪಾತದ ಕುರುಹುಗಳನ್ನು ಬಿಟ್ಟುಹೋಗಿದೆ. ೧೯೯೨–೯೩ರ ಮುಂಬೈ ಗಲಭೆಗಳ ಹಿಂದಿದ್ದ ಮುಖ್ಯ ಪಾತ್ರಧಾರಿಗಳು ಕಾನೂನಿನ ಅಂಕೆಗೆ ಒಳಗಾಗಲಿಲ್ಲ. ಬಾಬ್ರಿ ಮಸೀದಿ ಧ್ವಂಸದ CBI ಮೊಕದ್ದಮೆಗಳು ಕಳೆದ ೨೦ ವರ್ಷಗಳಿಂದಲೂ ಕಾನೂನಿನ ತಂತ್ರಗಾರಿಕೆಯ ಹುದುಲಿಲ್ಲ ಸಿಕ್ಕುಹಾಕಿಕೊಂಡಿವೆ. ೨೦೦೨ರ ಗುಜರಾತ್ ಗಲಭೆಗಳ ಮತ್ತು ತದನಂತರದಲ್ಲಿ ನಡೆದ ಹಿಂದೆಂದೂ ಕಂಡಿರದಂತಹ ನ್ಯಾಯದಾನ ಪ್ರಕ್ರಿಯೆಯನನ್ನು ಬುಡಮೇಲುಗೊಳಿಸಿರುವ ಕೃತ್ಯ ಒಂದು ಸೋರುವ ಹುಣ್ಣು ಉಳಿಸಿಬಿಟ್ಟಿದೆ. ಈ ಹಿನ್ನೆಲೆಯಲ್ಲಿಯೇ IMಗೆ ತನ್ನ ಸಿಪಾಯಿಗಳನ್ನು ಹುಡುಕಿಕೊಳ್ಳಲು ಸಾಧ್ಯವಾಗಿದ್ದು ಸ್ಪಷ್ಟವಾಗಿದೆ. ನಮ್ಮ ದೇಶದ ಸ್ಥಾಪನಾ ಮೌಲ್ಯಗಳನ್ನು–ನಿಷ್ಪಕ್ಷಪಾತ ನಡವಳಿಕೆ. ಸಮಾನ ನ್ಯಾಯ, ಜಾತ್ಯತೀತತೆಗೆ ಬದ್ಧತೆ, ಅಲ್ಪಸಂಖ್ಯಾತರ ರಕ್ಷಣೆ–ಹಿಂದೆ ಸರಿಯಲು ಬಿಟ್ಟರೆ ಅಸಹ್ಯ ಮನೋವಿಕಾರಗಳು ವರ್ಧಿಸುತ್ತವೆ ಎಂಬುದನ್ನು ನಾವು ಅರಿಯಬೇಕಿದೆ.

ಇತ್ತೀಚಿನ ತಮ್ಮ ಹೇಳಿಕೆಗಳಿಂದ ರಾಹುಲ್ ಗಾಂಧಿ ತಮ್ಮ ವಿರುದ್ಧ ತಾವೇ ಗೋಲು ಹೊಡೆದು ಕೊಂಡಿದ್ದಾರೆಂದು ರಾಜಕೀಯ ವ್ಯಾಖ್ಯಾನಕಾರರು ನಂಬುತ್ತಾರೆ. ಆದರೆ ಸದುದ್ದೇಶದಿಂದ ಅಂದರೆ ದೇಶವನ್ನು ಅಳಿಸುವ ಅಥವಾ ಉಳಿಸುವಂತಹ ನಿರ್ಣಾಯಕ ಸಂಗತಿಗಳ ಬಗ್ಗೆ ವ್ಯವಹರಿಸಬಯಸುವ ಉದ್ದೇಶವುಳ್ಳ ಒಬ್ಬ ರಾಜಕಾರಣಿಯ ತಪ್ಪು ಹೆಜ್ಜೆಗಳು ತಪ್ಪೇ ಮಾಡದಿರುವಿಕೆಯ ಬಗೆಗಿನ ಹುಸಿ ಹಾತೊರಿಕೆಗಿಂತ ಮೇಲಲ್ಲವೇ? ಅಲ್ಪಸಂಖ್ಯಾತ ಸಂತ್ರಸ್ತರೊಡನೆ ಆಪ್ತವಾಗಿ ಮಾತನಾಡುವುದರಲ್ಲಿ ನಂಬಿಕೆಯಿರುವ ರಾಜಕಾರಣಿಯ ಮಾತನ್ನು, ಅಂದರೆ ರಾಹುಲ್‌ಗಾಂಧಿ ತಮ್ಮ ಭಾಷಣದಲ್ಲಿ ಹೇಳಿದ ಹಾಗೆ, ಬಹುಸಂಖ್ಯಾತರಲ್ಲಿನ ದುರ್ಬಲ ಮನಸ್ಸಿನವರನ್ನು ಮೂಲಭೂತವಾದಿ ಸಂಘಟನೆಗಳು ಸೆಳೆಯುವ ಅಪಾಯದ ಬಗೆಗಿನ ಮಾತನ್ನು ಮತ್ತೆ ಕೇಳಿಸಿಕೊಳ್ಳುವುದು ಲೇಸಲ್ಲವೇ? ಅವರನ್ನು ಮೊದಲ ಸಂಶಯದಲ್ಲೇ ಸೆರೆಮನೆಗೆ ದೂಡುವುದರಲ್ಲಿ–ISI ನಿಂದ ಸಂಪರ್ಕಿಸಲ್ಪಡುತ್ತಿರುವವರ ಹೆಸರನ್ನು ಬಹಿರಂಗಗೊಳಿಸಬೇಕೆಂದು ರಾಹುಲ್ ಗಾಂಧಿಗೆ ಮೋದಿ ಒತ್ತಾಯಿಸಿದಂತೆ–ನಂಬಿಕೆಯಿಟ್ಟವರಿಗಿಂತ ಇವರೇ ಲೇಸಲ್ಲವೇ?

**(ಕೃಪೆ: 'ಔಟ್‌ಲುಕ್')**

**ಮೂಲ: ಆಶೀಶ್ ಖೇತಾನ್**
**ಕನ್ನಡಕ್ಕೆ: ಎಂ. ರಾಜು**

**ಸಮಕಾಲೀನ**

# ಸೆಕ್ಯುಲರಿಸಂ ಎಂದರೇನು?: ಒಂದು ಚರ್ಚೆ



**ಭಾರತದಲ್ಲಿನ ಸೆಕ್ಯುಲರಿಸಂನ ಸುತ್ತಮುತ್ತ ಕಟ್ಟಲ್ಪಡುತ್ತಿರುವ ಸಂಕಥನವನ್ನು ಕುರಿತ ಆಶೀಶ್ ನಂದಿಯವರ ಪ್ರಮೇಯವೊಂದನ್ನು ಪತ್ರಿಕೆಯ ಕಳೆದ ಸಂಚಿಕೆಯಲ್ಲಿ ಪ್ರಕಟಿಸಿದ್ದೆವು. ಅವರ ವಿಚಾರಗಳು ಸೆಕ್ಯುಲರಿಸಂ ಕುರಿತ ಸ್ಥಾಪಿತ ವ್ಯಾಖ್ಯಾನಗಳ ಬಗೆಗಿನ ಟೀಕೆ ಟಿಪ್ಪಣಿಗಳೂ ಆಗಿದ್ದುದರಿಂದ, ಆ ಬಗ್ಗೆ ನಮ್ಮ ಪ್ರಜ್ಞಾವಂತ ಓದುಗರ ಪ್ರತಿಕ್ರಿಯೆಗಳನ್ನು ನಾವು ಆಹ್ವಾನಿಸಿದ್ದೆವು. ಈ ಸಂಚಿಕೆಯಲ್ಲಿ ಅವನ್ನು ಪ್ರಕಟಿಸುತ್ತ, ಚರ್ಚೆಯನ್ನು ಮತ್ತಷ್ಟು ಪ್ರತಿಕ್ರಿಯೆಗಳಿಗಾಗಿ ತೆರೆದಿಡುತ್ತಿದ್ದೇವೆ.**

**ಇಲ್ಲಿನ ಕೆಲವು ಪ್ರತಿಕ್ರಿಯೆಗಳು, ಸೆಕ್ಯುಲರಿಸಂ ಎಂದರೆ ನಾವು ಏನೆಲ್ಲ ಅರ್ಥೈಸಿಕೊಂಡಿದ್ದೇವೆ ಎಂಬುದನ್ನು ಅರಿಯುವ ದೃಷ್ಟಿಯಿಂದೆ ಕುತೂಹಲಕಾರಿಯಾಗಿವೆ. ಹಾಗೇ ಕೆಲವು, ಸೆಕ್ಯುಲರಿಸಂನ ಅಧಿಕೃತವೆಂದು ಹೇಳಲಾಗುವ ಅರ್ಥದಲ್ಲಿನ ಗೊಂದಲಗಳನ್ನೂ ಪ್ರಸ್ತುತಪಡಿಸುತ್ತಿರುವಂತಿವೆ. ಜೊತೆಗೇ ಅಥವಾ ಅದರ ಭಾಗವಾಗಿಯೇ, ಆಶೀಶ್ ನಂದಿಯವರ ವಿಚಾರಗಳಲ್ಲಿನ ಸಂದಿಗ್ಧತೆ ಮತ್ತು ಅಸ್ಪಷ್ಟತೆಗಳನ್ನು ಸೂಚಿಸುತ್ತಾ ಅಲ್ಲಿ ಎದ್ದು ಕಾಣುವ ಅವರ ಬುದ್ಧಿಜೀವತ್ವದ ಮಿತಿಗಳನ್ನೂ ಗುರುತಿಸಲು ಯತ್ನಿಸಿವೆ. ಇಲ್ಲಿನ ಮುಖ್ಯ ಸಂಗತಿ ಎಂದರೆ, ಬಹಳಷ್ಟು ಪ್ರತಿಕ್ರಿಯೆಗಳು ಧರ್ಮ ಅಥವಾ ಮತ ಸಂಬಂಧಿಯಾದ ಸೆಕ್ಯುಲರಿಸಂ ಪರಿಕಲ್ಪನೆಯನ್ನು ಭಾರತದ ಜಾತಿ ವ್ಯವಸ್ಥೆಯ ಪರಿಪ್ರೇಕ್ಷ್ಯದಲ್ಲಿಟ್ಟು ಪರಿಶೀಲಿಸಬಯಸುವುದು. ಈ ದೃಷ್ಟಿಯಿಂದ ಈ ಕೆಲವು ಪ್ರತಿಕ್ರಿಯೆಗಳು ಧರ್ಮ ಅಥವಾ ಮತ ಕುರಿತ ಭಾರತದಲ್ಲಿನ ಪರಿಕಲ್ಪನೆಯ ಮೇಲೂ ಬೆಳಕು ಚೆಲ್ಲುವಂತಿದೆ ಎನ್ನಬಹುದು. ನಿಜ, ಅದನ್ನು ಇವು ಮಾಡುವುದು, ನಂದಿಯವರು ನಗರಗಳಿಗೆ ಹಳ್ಳಿಗಳನ್ನು ಹೋಲಿಸುತ್ತಾ ಪಶ್ಚಿಮದ ಆಧುನಿಕತೆಯ ಮೌಲ್ಯಗಳಿಂದ ಇನ್ನೂ ಅಷ್ಟಾಗಿ ಬಾಧಿತವಾಗಿಲ್ಲವೆಂದು ಅವರು ನಂಬಿರುವ ನಮ್ಮ ಹಳ್ಳಿಗಳು ಧರ್ಮ ಸಂಬಂಧಿಯಾಗಿ ಪರಂಪರಾಗತವಾಗಿ ರೂಢಿಸಿಕೊಂಡಿರುವ ಸಹಬಾಳ್ವೆಯ ಒಂದು ವಿಶಿಷ್ಟ ನಿಲುವು ಮತ್ತು ಬದುಕಿನ ಮಾದರಿ ಅಥವಾ ಕ್ರಮಗಳನ್ನು ಕುರಿತು ಮಾಡುವ ಪ್ರಸ್ತಾಪಕ್ಕೆ ಪ್ರತಿಕ್ರಿಯೆಯಾಗಿ. ಆದರೆ ಇಲ್ಲಿ ಮುಖ್ಯವಾಗಿ ಗಮನಸಬೇಕಾದದ್ದು, ಆಶೀಶ್ ಹಳ್ಳಿಗಳನ್ನು ಇಲ್ಲಿ ಪ್ರಸ್ತಾಪಿಸುವಾಗ ನಮ್ಮ ಜಾತಿ ವ್ಯವಸ್ಥೆಯ ಆಚರಣೆಗಳು ಸರಿ ಎಂದೇನೂ ಸೂಚಿಸುತ್ತಿಲ್ಲ ಎಂಬುದನ್ನು. ಆ ಕುರಿತು ತಮ್ಮ ವಿಚಾರಗಳನ್ನು ಅವರು ಬೇರೆಡೆ ವಿವರಿಸಿದ್ದಾರೆ. ಬಹುಶಃ ನಂದಿಯವರ ಈ ಕುರಿತ ವಾದದ ಬಗೆಗಿನ ಗೊಂದಲಕ್ಕೆ ಕಾರಣ, ನಾವು ಸೆಕ್ಯುಲರಿಸಂನ್ನು ಕನ್ನಡದಲ್ಲಿ 'ಜಾತ್ಯತೀತತೆ' ಎಂದು ಒರಟಾಗಿ ಅನುವಾದಿಸಿಕೊಂಡಿರುವುದೂ ಇರಬಹುದು. (ಹಲವು ಬಾರಿ ಆಧುನಿಕತೆಯ ಸಮಸ್ಯೆ ಅನುವಾದದ ಸಮಸ್ಯೆಯೇ ಆಗಿರುವುದೆಂದು ನನಗೆ ಅನೇಕ ಬಾರಿ ಅನ್ನಿಸಿದೆ) ಅಥವಾ ಧರ್ಮಗಳನ್ನು ನಾವು ಜಾತಿ ಎಂದೇ ಗುರುತಿಸುವ ಪರಿಪಾಠ ಬೆಳೆಸಿಕೊಂಡಿರುವುದೂ ಕಾರಣವಿರಬಹುದು.**

**ಅದೇನೇ ಇರಲಿ, ಭಾರತದ ಸಂವಿಧಾನದಲ್ಲಿ ಸುಷುಪ್ತಿಯಲ್ಲಿ ಮಲಗಿಂತಿದ್ದ ಸೆಕ್ಯುಲರಿಸಂ ಎಂಬ ತತ್ವ ಗಾಬರಿಯಿಂದ ಕಣ್ಣುಜ್ಜಿಕೊಂಡು ಎದ್ದದ್ದು ಎಂಭತ್ತರ ದಶಕದ ಉತ್ತರಾರ್ಧದಲ್ಲಿ ಆರಂಭವಾದ ಶ್ರೀರಾಮ ರಥಯಾತ್ರೆ ತನ್ನ ಹಾದಿಯುದ್ದಕ್ಕೂ ಕೋಮುಗಲಭೆಗಳನ್ನು ಸೃಷ್ಟಿಸುತ್ತಾ ೧೯೯೨ರಲ್ಲಿ ತನ್ನ ತಾರ್ಕಿಕ ಅಂತ್ಯವಾಗಿ ಬಾಬ್ರಿ ಮಸೀದಿಯನ್ನು ಉರುಳಿಸಿ ದೇಶಾದ್ಯಂತ ಭೂ ಕಂಪನಗಳನ್ನು ಉಂಟು ಮಾಡಿದಾಗ. ಆದುದರಿಂದ ಇದನ್ನು ಗಮನಿಸದೆ ಸೆಕ್ಯುಲರಿಸಂ ಕುರಿತ ಯಾವುದೇ ಚರ್ಚೆ ಪ್ರಸ್ತುತವಾಗಲಾರದು. ಆದರೆ ಇಲ್ಲಿನ ಬಹಳಷ್ಟು ಪ್ರತಿಕ್ರಿಯೆಗಳು ಈ ರಾಜಕೀಯ ಪರಿಪ್ರೇಕ್ಷ್ಯವನ್ನು ಗಣನೆಗೇ ತೆಗೆದುಕೊಳ್ಳದೆ ಆಶೀಶ್ ನಂದಿಯವರ ವಿಚಾರಗಳಿಗೆ ಪ್ರತಿಕ್ರಿಯಿಸಿರುವುದು ಆಶ್ಚರ್ಯಕರ. ಹಾಗಾಗಿ, ಸೆಕ್ಯುಲರಿಸಂ ಕುರಿತ ಮುಖ್ಯ ಚರ್ಚೆ ಆಗಬೇಕಾಗಿರುವುದು ಆ ಪರಿಕಲ್ಪನೆಯ ಮೂಲದಲ್ಲಿರುವ ಧರ್ಮ ಅಥವಾ ಮತಾಚಾರಗಳನ್ನು ಬಹು ಧರ್ಮಗಳ ನಮ್ಮ ದೇಶದಲ್ಲಿ ಸಾರ್ವಜನಿಕ ಜೀವನದಿಂದ ಬೇರ್ಪಡಿಸಬೇಕಾದುದರ ಅಗತ್ಯ, ಸಾಧುತ್ವ, ಸಾಧ್ಯತೆ, ವಿಧಾನ ಮತ್ತು ಅದರ ಪರಿಣಾಮಗಳ ಬಗೆಗೆ ಎನಿಸುತ್ತದೆ. ಚರ್ಚೆ ಈ ಎಲ್ಲೆಗಳಿಗೆ ವಿಸ್ತರಿಸುತ್ತದೆಂದು ಆಶಿಸುತ್ತೇವೆ–**ಸಂಪಾದಕ

## ಮರು ನಿರೂಪಣೆಗಳ ದಿಟ್ಟ ಹೆಜ್ಜೆಗಳ ಹಾದಿಯಲ್ಲಿ...

ಆಶೀಶ್ ನಂದಿ ಭಾರತದ ಪ್ರಮುಖ ಸಂಸ್ಕೃತಿ ಚಿಂತಕರಲ್ಲಿ ಒಬ್ಬರು. ಅವರು ತಮ್ಮ ಮೊನಚಾದ ಬರವಣಿಗೆಯ ಮೂಲಕ ನಾವು ಇಂದು ಸಾರ್ವಜನಿಕ ವಲಯದಲ್ಲಿ ಲೋಕಾಭಿರಾಮವಾಗಿ ಸಮಂಜಸವಾದದ್ದು ಎಂದು ನಂಬಿಕೊಂಡು ಬಂದ ಅನೇಕ ವಿಚಾರಗಳ ನೆಲೆ ಹಾಗೂ ಬೆಲೆಗಳನ್ನು ಪ್ರಶ್ನಿಸುತ್ತಾ ಬಂದಿದ್ದಾರೆ. ಆಧುನಿಕತೆ, ರಾಷ್ಟ್ರೀಯವಾದ ಮತ್ತು ಸೆಕ್ಯುಲರ್‌ವಾದಗಳ ಬಗೆಗಿನ ಅವರ ಮಾರ್ಮಿಕವಾದ ವಿಮರ್ಶೆಗಳು ಈಗ ಎಲ್ಲರಿಗೂ ತಿಳಿದಿರುವ; ಆದರೆ ಒಂದೊಮ್ಮೆ ನಮ್ಮನ್ನು ಬೆಚ್ಚಿ ಬೀಳಿಸಿದ ಸಂಗತಿಗಳಾಗಿವೆ.

ಇರಲಿ, ಸೆಕ್ಯುಲರಿಸಂ ಕುರಿತ ಅವರ ವಿಚಾರಗಳ ಬಗೆಗಿನ ನನ್ನ ಅಭಿಪ್ರಾಯಗಳನ್ನು ಹೀಗೆ ಸಂಗ್ರಹಿಸಬಹುದು:

೧. ಸೆಕ್ಯುಲರ್‌ವಾದದ ಬಗೆಗಿನ ನಂದಿಯವರ ವಿಮರ್ಶೆ ಕೇವಲ ಸೆಕ್ಯುಲರ್‌ವಾದಕ್ಕೆ ಮಾತ್ರ ಸಿಮೀತವಲ್ಲ. ಅವರು ಸೆಕ್ಯುಲರ್‌ವಾದವನ್ನು ಆಧುನಿಕತೆ ಹಾಗೂ ರಾಷ್ಟ್ರೀಯವಾದದ ಜೊತೆಗೂಡಿ ಬಂದ ತಾತ್ವಿಕ ವಿದ್ಯಮಾನವೆಂದು ಪರಿಗಣಿಸುತ್ತಾರೆ. ಹಾಗಾಗಿ, ಆಧುನಿಕತೆ ಮತ್ತು ರಾಷ್ಟ್ರೀಯವಾದಗಳ ಕುರಿತು ಅವರು ಮಾಡಿರುವ ಟೀಕೆಗಳು ಅವರ ಸೆಕ್ಯುಲರ್‌ವಾದದ ವಿಮರ್ಶೆಯಲ್ಲಿಯೂ ಪ್ರತಿಫಲನಗೊಂಡಿದೆ.



೨. ಬಹುಶ: ನಂದಿಯುವರಿಗೆ ಆಧುನಿಕತೆ, ರಾಷ್ಟ್ರೀಯವಾದ ಹಾಗೂ ಸೆಕ್ಯುಲರ್‌ವಾದಗಳಲ್ಲಿ ಒಂದು ನಿರ್ದಿಷ್ಟ ಬಗೆಯ ಸಾಂಸ್ಕೃತಿಕ ಹಿಂಸೆ ಮತ್ತು ಬೌದ್ಧಿಕ ಜಬರ್‌ದಸ್ತಿ ಎದ್ದು ಕಾಣಿಸುತ್ತದೆ. ಮೂಲತ: ಪಾಶ್ಚಿಮಾತ್ಯ ಚಿಂತನೆಯ ಉತ್ಪನ್ನಗಳಾದ ಇವೆಲ್ಲವೂ ಐರೋಪ್ಯೇತರ ಸಮಾಜಗಳ ಮೇಲೆ ಹೇರಲ್ಪಟ್ಟ ವಿದ್ಯಮಾನಗಳಾಗಿವೆ. ಹಾಗಾಗಿ, ಅವೆಲ್ಲವುಗಳಲ್ಲಿ ಅವರು ಹಿಂಸೆಯುನ್ನು ಕಾಣುತ್ತಾರೆ. ಪಾಶ್ಚಿವಾತ್ಯ ಸವಾಜಗಳಿಗಿಂತ ಮೂಲಭೂತವಾಗಿ ಭಿನ್ನವಾದ ಆದರೆ ವಸಾಹತುಶಾಹಿಯಿಂದಾಗಿ ಪಶ್ಚಿಮದ ಅಧೀನಕ್ಕೆ ಒಳಪಟ್ಟು ತಮ್ಮ ಸಾಂಸ್ಕೃತಿಕ ಹಾಗೂ ಸಾಮಾಜಿಕ ಅನನ್ಯತೆಯನ್ನು ಗುರುತಿಸಿಕೊಳ್ಳಲಾರದ ಸಮಾಜಗಳ ಮೇಲೆ ಒಂದು ನಿರ್ದಿಷ್ಟ ಬಗೆಯ ಆಧುನಿಕತೆಯ ಪ್ರತಿಫಲವಾಗಿ ಸೆಕ್ಯುಲರ್‌ವಾದ ಹೇರಲ್ಪಟ್ಟಿದೆ ಎಂದು ನಂದಿ ತಿಳಿಯುತ್ತಾರೆ ಮತ್ತು ಸೆಕ್ಯುಲರ್‌ವಾದವನ್ನು ಪ್ರತಿಪಾದಿಸುವ ಹಾಗೂ ಬೆಂಬಲಿಸುವ ನಿರ್ದಿಷ್ಟ ವರ್ಗಗಳ ಹಿತಾಸಕ್ತಿಯನ್ನು ಅವರು ಪ್ರಶ್ನಿಸುತ್ತಾರೆ.




೩. ಅವರ ಪ್ರಕಾರ ಸೆಕ್ಯುಲರ್‌ವಾದ ಭಾರತದಲ್ಲಿ ನಗರವಾಸಿ ಸುಶಿಕ್ಷಿತ ಮಧ್ಯಮ ವರ್ಗದ ಒಂದು ಫ್ಯಾಶನ್ ಅಷ್ಟೇ. ಈ ನಗರವಾಸಿ ಸುಶಿಕ್ಷಿತ ಮಧ್ಯಮ ವರ್ಗ ತನ್ನ ಆಧುನಿಕ ಜ್ಞಾನ ವಿಜ್ಞಾನದ ಅಹಂಕಾರದಲ್ಲಿ ಸಾಮಾಜಿಕ ಸ್ವಾಸ್ಥ್ಯದ ಹಾಗೂ ಸಹಬಾಳ್ವೆಯ ಹೊಸ ವಿದ್ಯೆಯೊಂದನ್ನು ಕಲಿತಿದ್ದೇನೆ ಮತ್ತು ಈ ವಿದ್ಯೆಯನ್ನು ಭಾರತದ ಇತರ ಅಶಿಕ್ಷಿತ ಜನರಿಗೆ ಕಲಿಸುತ್ತೇನೆ ಎಂದು ತಿಳಿದುಕೊಂಡಿದೆ ಎನ್ನುತ್ತಾರೆ ನಂದಿ. ಅಂತೆಯೇ, ಸೆಕ್ಯುಲರ್ ವಾದವನ್ನು ಅಧಿಕಾರಶಾಹಿ ಅಥವಾ ಪ್ರಭುತ್ವದ ಸಂಕಂಥನವೆಂದೂ ನಂದಿ ಬಣ್ಣಿಸುತ್ತಾರೆ. ಭಾರತ ಅಥವಾ ಇನ್ನೂ ವಿಶಾಲವಾದ ಅರ್ಥದಲ್ಲಿ ದಕ್ಷಿಣಾ ಏಷ್ಯಾ ಸೆಕ್ಯುಲರ್‌ವಾದದ ಪರಿಚಯಕ್ಕೆ ಬಹಳ ಮೊದಲೇ ಸಾಮುದಾಯಿಕ ಸಹಜೀವನದ ಹಾಗೂ ಧಾರ್ಮಿಕ ಸಹನಶೀಲತೆಯ ನೆಲೆಯಲ್ಲಿ ತನ್ನನ್ನು ನಿರ್ವಹಿಸಿಕೊಂಡು ಬಂದಿದೆ ಮತ್ತು ಸೆಕ್ಯುಲರ್‌ವಾದದಿಂದ ದಕ್ಷಿಣ ಏಷ್ಯಾದ ಸಮಾಜಗಳು ಹೊಸದೇನನ್ನು ಕಲಿಯಬೇಕಾಗಿಲ್ಲ ಎಂದು ಅವರು ಅಭಿಪ್ರಾಯಪಡುತ್ತಾರೆ.

೪. ಮೇಲೆ ಸ್ಥೂಲವಾಗಿ ನಾನು ಗ್ರಹಿಸಿದ ಸೆಕ್ಯುಲರ್‌ವಾದದ ಬಗೆಗಿನ ನಂದಿಯವರ ಕೆಲವು ವಿಚಾರಗಳು ನನಗೆ ಸಂಪೂರ್ಣವಾಗಿ ಒಪ್ಪಿಗೆಯಾಗಿದೆ ಎಂದೇನೂ ಅಲ್ಲ. ಹಾಗಿದ್ದೂ, ಒಂದು ಕಾಲಘಟ್ಟದಲ್ಲಿ ಜಡ್ಡುಗಟ್ಟಿದ ಸೆಕ್ಯುಲರ್ ದೃಷ್ಟಿಕೋನಕ್ಕೆ ಹೊಸ ಮೊನಚನ್ನು ಒದಗಿಸುವ ನೆಲೆಯಲ್ಲಿ ನಂದಿಯವರ ವಿಚಾರಗಳು ಮುಖ್ಯವಾಗುತ್ತವೆ. ಬಹುಶ: ನಂದಿಯವರು *Anti Secular Manifesto* ಎನ್ನುವ ಬಹು ಪ್ರಮುಖವಾದ ಲೇಖನವನ್ನು ಬರೆದ ಮೇಲೆ ಸೆಕ್ಯುಲರ್ ಚಿಂತನೆಯ ಕುರಿತು ಒಂದು ಹೊಸ ಸಂಚಲನ ಭಾರತದಲ್ಲಿ ಆರಂಭಗೊಂಡಿತು. ಇದರಿಂದಾಗಿ, ಇತರ ಅನೇಕ ಪಾಶ್ಚಿಮಾತ್ಯ ಮತ್ತು ಭಾರತದ ಚಿಂತಕರು ಸೆಕ್ಯುಲರ್‌ವಾದದ ಕುರಿತು ಮರು ಚಿಂತನೆಯನ್ನು ಆರಂಭಿಸಿದರು. ಟಿ. ಎನ್ ಮದನ್ , ಪಾರ್ಥೋ ಚಟರ್ಜಿ, ಅಕಿಲ್ ಬಿಲ್‌ಗ್ರಾಮಿ, ರಾಜೀವ್ ಭಾರ್ಗವ್ ಮೊದಲಾದ ಅನೇಕ ವಿದ್ವಾಂಸರು ನಂದಿಯವರ ವಿಮರ್ಶೆಗೆ ಸೃಜನಶೀಲ ಪ್ರತಿಸ್ಪಂದನಗಳನ್ನು ಒದಗಿಸಿದ್ದಾರೆ. ಕಳೆದ ಇಪ್ಪತ್ತು ಇಪ್ಪತ್ತೈದು ವರುಷಗಳಲ್ಲಿ ಸೆಕ್ಯುಲರ್‌ವಾದಕ್ಕೆ ಸಂಬಂಧಿಸಿ ಭಾರತದಲ್ಲಿ ನಡೆದ ಚರ್ಚೆ ಸಾಕಷ್ಟು ಅಗಾಧವಾಗಿದೆ. ಈ ಅರ್ಥದಲ್ಲಿ ನಂದಿಯವರ ಸೆಕ್ಯುಲರ್‌ವಾದದ ವಿಮರ್ಶೆ ಒಂದು ಮಹತ್ವದ ಮೈಲಿಗಲ್ಲಾಗಿ ಕಾಣಿಸುತ್ತದೆ. ಬಹುಶ:, 'ಅನೇಕರು ಧರಿಸಿ ಆಕಾರ ಕಳೆದುಕೊಂಡ ಟೊಪ್ಪಿ' ಎನ್ನುವ ಪ್ರಜಾತಂತ್ರದ ಮೇಲಿನ ಅಪವಾದ ಸೆಕ್ಯುಲರ್‌ವಾದಕ್ಕೂ ಅನ್ವಯವಾಗುತ್ತದೆ. ಈ ದೃಷ್ಟಿಯಿಂದ ಸೆಕ್ಯುಲರ್‌ವಾದವನ್ನು ಹೆಚ್ಚು ನಿಖರವಾದ ತಾತ್ವಿಕ ಸ್ಪಷ್ಟತೆಯಿಂದ ಇದಿರಾಗುವ ಅಗತ್ಯ ಇದೆ.

೫. ಭಾರತದಂತಹ ಪಶ್ಚಿಮ ಏಷ್ಯಾದ ಸಮಾಜಗಳು ಸೆಕ್ಯುಲರ್‌ವಾದ ಪರಿಚಯವಾಗುವ ಮೊದಲೆ ಅದು ಪ್ರತಿನಿಧಿಸುವ ಮೌಲ್ಯಗಳಿಗಿಂತ ಹೆಚ್ಚು ಘನವಾದ ಮೌಲ್ಯಗಳ ನೆಲೆಯಲ್ಲಿ ತಮ್ಮನ್ನು ತಾವು ನಿರ್ವಹಿಸಿಕೊಳ್ಳುತ್ತಿದ್ದವು ಎಂದು ವಾದಿಸುವ ಭರದಲ್ಲಿ ನಂದಿ ಈ ಸಮಾಜಗಳ ಇತರ ಅನೇಕ ವೈರುಧ್ಯಗಳನ್ನು ಹಾಗೂ ತಿಕ್ಕಾಟಗಳನ್ನು ಬದಿಗೆ ಸರಿಸಿ ಅವುಗಳ ಒಂದು ರಮ್ಯ ಕತೆಯನ್ನು ನಮಗೆ ಕಟ್ಟಿಕೊಡುತ್ತಿದ್ದಾರೇನೋ ಎನ್ನುವ ಅನುಮಾನ ಬರುವುದು ಸಹಜ. ಅವರು ಹೇಳುವಂತೆ ಪಾಶ್ಚಿಮಾತ್ಯ ಸಮಾಜಗಳಲ್ಲಿ ಕಂಡುಬಂದ ಧಾರ್ಮಿಕ ಮತ್ತು ಜನಾಂಗೀಯ ತಿಕ್ಕಾಟಗಳು ದಕ್ಷಿಣ ಏಷ್ಯಾದ ಸಮಾಜಗಳಾಲ್ಲಿ ಅಷ್ಟಾಗಿ ಕಾಣಿಸದೆ ಇರಬಹುದು. ಆದರೆ ಈ ಸಮಾಜಗಳಲ್ಲಿ ಅಷ್ಟೇ ವಿಘಟನಕಾರಿಯಾದ ಇತರ ಸಾಮಾಜಿಕ ಮತ್ತು ಮತೀಯ ತಿಕ್ಕಾಟಗಳು ಇರಲಿಲ್ಲವೇ?

೬. ನಂದಿಯವರ ಆಧುನಿಕತೆಯ ವಿಮರ್ಶೆಯೂ ಪ್ರಶ್ನಾತೀತವೇನೂ ಅಲ್ಲ. ಎರಡು ಶತಮಾನಗಳ ವಸಾಹತುಶಾಹಿ ಆಧುನಿಕತೆಯ ವಿಪ್ಲವದಿಂದಾಗಿ ಆಧುನಿಕತೆ ನಮ್ಮ ಹೊರಗೆ ಇರುವ ಸಂಗತಿಯಾಗಿರದೆ ನಮ್ಮೊಳಗಿನ ವಿದ್ಯಮಾನವೇ ಆಗಿಬಿಟ್ಟಿಲ್ಲವೇ? ಆಧುನಿಕ ಯುಗದಲ್ಲಿ ನಮ್ಮನ್ನು ನಾವು ಸಂಘಟಿಸಿಕೊಳ್ಳುವ ಸಾಮಾಜಿಕ ಹಾಗೂ ರಾಜಕೀಯ ಸಂರಚನೆಗಳು, ಸಂಘ ಸಂಸ್ಥೆಗಳು, ಸಂಕಥನಗಳು ಮತ್ತು ಅವುಗಳು ನೀಡಿರುವ ಮೌಲ್ಯಗಳು ಆಧುನಿಕವಾದವುಗಳೇ ಅಲ್ಲವೇ? ಸ್ವಾತಂತ್ರ್ಯ, ಸಮಾನತೆ, ಸಾಮಾಜಿಕ ನ್ಯಾಯ ಹಾಗೂ ಪ್ರಜಾತಂತ್ರಗಳು ಆಧುನಿಕ ಮೌಲ್ಯಗಳಾಗಿದ್ದರೂ ಅವುಗಳ ನೆಲೆಯಲ್ಲಿ ನಮ್ಮನ್ನು ನಾವು ಪುನರ್‌ಸಂಘಟಿಸಿಕೊಳ್ಳುವ ಪ್ರಯತ್ನಗಳನ್ನು ನಡೆಸುತ್ತಿಲ್ಲವೇ? ಈ ಅರ್ಥದಲ್ಲಿ ಯಾವುದೇ ದೃಷ್ಟಿಕೋನ, ಸಿದ್ಧಾಂತ ಯಾ ಮೌಲ್ಯ ಎಲ್ಲಿಂದ ಬಂತು ಅಥವಾ ಯಾವುದರಿಂದ ರೂಪುಗೊಂಡಿತು ಎನ್ನುವುದಕ್ಕಿಂತಲೂ ಅದನ್ನು ನಾವು ನಮ್ಮ ನೆಲೆಯಲ್ಲಿ ಹೇಗೆ ಮರು ನಿರ್ವಚಿಸುತ್ತೇವೆ ಅಥವಾ ಪುನರ್‌ಸಂಘಟಿಸುತ್ತೇವೆ ಎನ್ನುವುದು ಮುಖ್ಯವಾಗುತ್ತದೆ. ಈ ಅರ್ಥದಲ್ಲಿ ಸೆಕ್ಯುಲರ್‌ವಾದ ಐರೋಪ್ಯ ಮೂಲದ್ದಾಗಿದ್ದರೂ ಅದನ್ನು ನಾವು ಹೇಗೆ ನಮ್ಮ ಸಂಧರ್ಭದಲ್ಲಿ ಮರು ನಿರೂಪಿಸುತ್ತೇವೆ ಹಾಗೂ ಅದಕ್ಕೆ ಯಾವ ಅರ್ಥವಂತಿಕೆಯನ್ನು ಒದಗಿಸುತ್ತೇವೆ ಎನ್ನುವುದರ ಬಗ್ಗೆ ನಾವು ಚಿಂತಿಸಬೇಕಾಗುತ್ತದೆ. ಕಳೆದ ಅರುವತ್ತು ವರುಷಗಳ ಸ್ವಾತಂತ್ರ್ಯೋತ್ತರ ಭಾರತದಲ್ಲಿ ನಾವು ಸೆಕ್ಯುಲರ್ ವಾದಕ್ಕೆ ಕೊಟ್ಟ ಬೇರೆ ಬೇರೆ ಮತ್ತು ಹೊಸ ಅರ್ಥಗಳು ಸೆಕ್ಯುಲರ್‌ವಾದದ ಮರು ನಿರೂಪಣೆಯ ದಾರಿಗಳೇ ಆಗಿವೆ.

೭. ಸೆಕ್ಯುಲರ್‌ವಾದ ಎಂದರೆ ವ್ಯಕ್ತಿಯೊಬ್ಬ ತನ್ನ ವೈಯಕ್ತಿಕ ಜೀವನದಲ್ಲಿ ಪರಿಪಾಲಿಸಬೇಕಾದ ನಡತೆಯಾಗಿರದೆ, ಅದು ರಾಜ್ಯ ನಿರ್ವಹಣೆಯ ನೀತಿ ಎನ್ನುವ ವ್ಯಾಖ್ಯಾನಗಳು ಅಥವಾ ಭಾರತದಂತಹ ಆಳವಾಗಿ ವೈವಿಧ್ಯಮಯವಾದ ಸಮಾಜಗಳಲ್ಲಿ ಸೆಕ್ಯುಲರ್ ನೀತಿ ನಿರಂತರವಾಗಿ ಮರುನಿರೂಪಿಸಲ್ಪಡಬೇಕಾಗುತ್ತದೆ ಎನ್ನುವ ವಾದ ಅಥವಾ ಸೆಕ್ಯುಲರ್‌ವಾದಕ್ಕೆ ಸಾಂಸ್ಕತಿಕ ಮತ್ತು ಧಾರ್ಮಿಕ ಅನೇಕತೆಯನ್ನು ನಿರ್ವಹಿಸುವ ಶಕ್ತಿ ಇಲ್ಲ ಎನ್ನುವ ಟೀಕೆ – ಇವೆಲ್ಲವುಗಳನ್ನು ಸೆಕ್ಯುಲರ್‌ವಾದದ ಮರುನಿರೂಪಣೆಯ ದಿಟ್ಟ ಹೆಜ್ಜೆಗಳು ಎಂದೇಕೆ ತಿಳಿದುಕೊಳ್ಳಬಾರದು?

೮. ಒಟ್ಟಿನಲ್ಲಿ ಸೆಕ್ಯುಲರ್‌ವಾದಕ್ಕೆ ಬಹುತ್ವ ಹಾಗೂ ವೈವಿಧ್ಯಗಳ ಸಮುಕ್ಷಮದಲ್ಲಿ ಹೊಸ ಹೊಸ ಅರ್ಥ ನರೂಪಣೆಗಳನ್ನು ಒದಗಿಸಬೇಕಾದ ಅವಶ್ಯಕತೆಯಿದೆ.

**–ಡಾ. ರಾಜಾರಾಂ ತೋಳ್ಪಾಡಿ, ಕೊಣಾಜೆ**

## ಸೆಕ್ಯುಲರಿಸಂ ಎಂಬುದು ಔಷಧಿಯೇ ಹೊರತು ಆಹಾರವಲ್ಲ

ಈಚೆಗೆ ನನಗೂ ಈ ರೀತಿಯ ಒಂದು ಭಾವನೆ ಬರತೊಡಗಿತ್ತು. ಪ್ರಜಾಪ್ರಭುತ್ವ–ಸಮಾನತೆ–ವ್ಯಕ್ತಿಸ್ವಾತಂತ್ರ್ಯ–ಸೆಕ್ಯುಲರಿಸಂ ನಾವು ಚಕಾರವೆತ್ತದೇ ಒಪ್ಪಿ ಬದ್ಧವಾಗಿರಬೇಕೆನ್ನುವ ಈ ಬಗೆಯ ಹಲವು ಪರಿಕಲ್ಪನೆಗಳು, ನಮಗೆ ನಮ್ಮ ಈ ನೆಲದ ಬದುಕಲ್ಲೇ ಬಿತ್ತಿ ಬೆಳೆದಿದ್ದಾಗಿರದೆ, ಯೂರೋಪಿನಿಂದ ನಾವು ಬಯಸಿ ತಂದು ನಮ್ಮ ಬದುಕಿಗೆ ಹೊಂದಿಸಿದ ಚೌಕಟ್ಟುಗಳಲ್ಲವೇ–ಎಂದು.

ಇಲ್ಲೇ ಬಿತ್ತಿ ಬೆಳೆದಿರುವುದಕ್ಕೆ ಒಂದು ಸಾವಯವತೆ, ಜೀವಂತಿಕೆ ಮತ್ತು ಅದರೊಟ್ಟಿಗೆ ನೈಸರ್ಗಿಕವಾದ ಒಂದು ನಿರೋಧಕ ಶಕ್ತಿ ಇರುತ್ತದೆ. ಅವುಗಳಿಲ್ಲದಿರುವುದು ಅನೇಕ ಪ್ರತಿಕ್ರಿಯೆಗಳನ್ನು ಹೊಮ್ಮಿಸುವಂತಿರುತ್ತದೆ. ಅಥವಾ ಇನ್ನೂ ಸೂಕ್ಷ್ಮವಾಗಿ ನೋಡಿದರೆ, ನಮ್ಮ ಇಲ್ಲಿನ ಬದುಕು, ನಾಗರೀಕತೆಗಳ ಮೇಲೆ ಪಶ್ಚಿಮದ ಜೀವನ ಕ್ರಮ. ನಾಗರೀಕತೆಗಳು ಎರಗಿ ಆವರಿಸಿದ ಚಾರಿತ್ರಿಕ ವಿದ್ಯಮಾನದಿಂದಾಗಿ ಅಲ್ಲಿನ ಸಿದ್ಧಾಂತ–



ಮೌಲ್ಯಗಳ superimposition ಕೂಡ ಅನಿವಾರ್ಯವಾಗೇ ಉಂಟಾಗಿದೆ ಎಂಬುದೂ ತಿಳಿಯುತ್ತದೆ. Imposition ಎಂಬುದು ಎಂದಿಗೂ ಸಹಜ Expression ಅಲ್ಲದ ಕಾರಣ, ಅದು ಉಂಟುಮಾಡುವ ವಿಪರ್ಯಾಸಗಳು ಆತಂಕಕಾರಿಯಾಗಿರಲು ಸಾಧ್ಯ.

ಇದೇ ಸೆಕ್ಯುಲರಿಸಂ, ಅಥವಾ ಇದನ್ನು ಹಾಗೆ ಕರೆಯಬೇಕೆಂಬ ನೆದರಿರದೆ ಜನ ಸಣ್ಣ ಸಂಘರ್ಷಗಳನ್ನೊಳಗೊಂಡ ಸಹಬಾಳ್ವೆಯನ್ನು ನಡೆಸುತ್ತ ಬಂದಿರುತ್ತಾರೆ. ಯಾವ ವಿಚಾರ, ತತ್ವಗಳಿಗಿಂತ ಬದುಕು ದೊಡ್ಡದೆಂದು ಭಾವಿಸುವ ಸಾಮಾನ್ಯ ಜನರು ಸಹಜವಾಗಿಯೆ ಇಂಥ ಸಹಿಷ್ಣುತೆಯನ್ನು ರೂಢಿಸಿಕೊಂಡಿರುತ್ತಾರೆ. ಈ ದೇಶದೊಳಗಿನ ವೈವಿಧ್ಯ, ಭಿನ್ನತೆಗಳೇ ತಮಗಿಂತ ಬೇರೆಯಾದ್ದನ್ನು ಸಹಿಸುವ ಪಾಠ ಕಲಿಸುತ್ತ ಅವರ ಮನುಷ್ಯತ್ವ ಹಿಗ್ಗಲು ಕಾರಣವಾಗಿರುತ್ತದೆ.

ಬೈಬಲ್ ಕುರಾನ್ ಉಪನಿಷತ್‌ಗಳಲ್ಲಿ ಏನಿದೆ ಎಂಬ ಗೊಡವೆ ಅವರಿಗಿರುವುದಿಲ್ಲ. ಅನೇಕ ಪುರಾಣಗಳ ಉದಾಹರಣೆಗಳಲ್ಲಿ ಅವರು ಬದುಕುತ್ತಾರೆ. ಒಟ್ಟಾರೆ ತಮ್ಮ ಧರ್ಮ 'ಒಳ್ಳೆಯದೇ ಒಳ್ಳೆಯದು ಮತ್ತು ಕೆಟ್ಟದ್ದು ಕೆಟ್ಟದು' ಎಂದು ಬೋಧಿಸುತ್ತದೆಂದು ನಂಬುತ್ತ, ತಮ್ಮ ಪ್ರವೃತ್ತಿಮಯ ಜೀವನದ ಒಳಿತು ಕೆಡುಕುಗಳಲ್ಲಿ ಹಾದು ಬದುಕುತ್ತಾರೆ. ತಮಗೆ ರೂಢಿಯಾಗಿ ಬಂದ ಯಾವುದೋ ಒಂದು ಧರ್ಮದ ಆಚರಣೆಯನ್ನು ಕ್ವಚಿತ್ತಾಗಿ ಅವಲಂಬಿಸಿ, ಉಳಿದಂತೆ, ಯಾವ ಧರ್ಮದ ಹಣೆಪಟ್ಟಿಯೂ ಇರದ ನಿಜವಾದ ಧಾರ್ಮಿಕತೆಯಲ್ಲಿ ಸುಮ್ಮನೆ ಇದ್ದುಬಿಡುತ್ತಾರೆ.

ಉದಾಹರಣೆಗೆ, ಇಲ್ಲಿನ ಅಸಂಖ್ಯ ಜಾತಿಗಳಲ್ಲಿ ಮುಸ್ಲಿಮರೂ ಒಂದು ಜಾತಿ ಎಂದು 'ಹಿಂದೂ' ಗಳು ತಿಳಿದರೆ, 'ಹಿಂದೂ'ಗಳ ಅಸಂಖ್ಯ ದೇವರುಗಳು ಕನಿಷ್ಠ ಅವರ ಪಾಲಿಗಾದರೂ ದೇವರುಗಳೇ ಎಂದು ಮುಸ್ಲಿಮರು ತಿಳಿಯುತ್ತಾರೆ.

ಆದರೆ ಈ ಚಿತ್ರ ಇಷ್ಟೇ ಸರಳ ಸುಂದರವಾಗಿ ಇದ್ದುಬಿಡಲು ಆಧುನಿಕ ನಾಗರೀಕತೆಯ ಶಕ್ತಿಗಳು ಬಿಡುವುದಿಲ್ಲ. ಆಶ್ಚರ್ಯಕರ ವಿಪರ್ಯಾಸವೆಂದರೆ ತಂತ್ರಜ್ಞಾನ ಬೆಳೆದಷ್ಟೂ ಔದಾರ್ಯ ರೂಪಿನ ಧಾರ್ಮಿಕ ಉಪೇಕ್ಷೆ ಬೆಳೆಯುವುದೆಂದು ನಿರೀಕ್ಷಿಸಬಹುದಾದ ಮನುಷ್ಯನಲ್ಲಿ ಮತಾಂಧತೆ ವಿಜೃಂಭಿಸುವ ಪರಿ. ತಂತ್ರಜ್ಞಾನವೆಂಬುದು ಮನುಷ್ಯನ ಅಂತಃಸಾಕ್ಷಿಯನ್ನು ಮಸುಕುಗೊಳಿಸುವುದರಿಂದ, ನಿಜವಾದ ಧಾರ್ಮಿಕತೆ ಅಥವಾ ಆಧ್ಯಾತ್ಮಿಕತೆಯ ಗೈರುಹಾಜರಿಯಲ್ಲಿ ಮತಾಂಧತೆಯೇ ಆ ಜಾಗ ಆಕ್ರಮಿಸಿಕೊಳ್ಳುತ್ತದೆಂದು ಕಾಣುತ್ತದೆ. ಹೀಗೆ ತಂತ್ರಜ್ಞಾನ ಪ್ರಣೀತ ನಾಗರೀಕತೆಯಲ್ಲಿ ಮನುಷ್ಯನ ಕೇಡಿನ ಶಕ್ತಿ ಅಗಾಧವಾಗಿ ಹೆಚ್ಚಳವಾಗುವುದರಿಂದ, ಅದನ್ನು ನಿರ್ವಹಿಸಲು ಅಷ್ಟೇ 'ತಾಂತ್ರಿಕ'ವಾದ ಪರಿಕಲ್ಪನೆಗಳನ್ನು ಆಧುನಿಕ/ಅತ್ಯಾಧುನಿಕ ಮನುಷ್ಯ ಅವಲಂಬಿಸಬೇಕಾಗುತ್ತದೆ.



ಆದರೆ ಭಾರತ ಹಾಗೆ ಏಕರೂಪಿನಲ್ಲಿ ಆಧುನಿಕಗೊಂಡಿರುವ ಸಮೂಹವೂ ಆಗಿರುವುದಿಲ್ಲ. ಆಧುನಿಕತೆಯೇನಿದ್ದರೂ ಇಲ್ಲಿ ಇನ್ನೂ ಮೇಲ್ಪದರದ ಮಟ್ಟದ್ದಷ್ಟೇ. ವೈಚಾರಿಕವಾದ ಸೆಕ್ಯುಲರಿಸಂ ನಿರೀಕ್ಷಿಸುವ ಒಂದು ಪ್ರಜ್ಞಾಪೂರ್ವಕವಾದ ಸಮಾಜ ಇಲ್ಲಿ ಇನ್ನೂ ಸೃಷ್ಟಿಯಾಗಿರದೆ; ಧರ್ಮ, ಸಮಾಜ ಜೀವನ, ರಾಜಕೀಯಗಳೆಲ್ಲ ಒಂದಕ್ಕೊಂದು ಕಲೆಸಿಕೊಂಡ ಸಂಕೀರ್ಣ ಸ್ಥಿತಿಯಿದೆ. ಇಂಥ ಸ್ಥಿತಿಗೆ 'ಸೆಕ್ಯುಲರಿಸಂ'ನ ನೀಟಾದ ಚೌಕಟ್ಟು ಹಾಕಬಯಸುವವರು ಅನೇಕ ಗೊಂದಲಗಳಿಗೂ ಕಾರಣರಾಗಬಹುದು.

ಒಟ್ಟಾರೆ ಸೆಕ್ಯುಲರಿಸಂನ ಪರಿಕಲ್ಪನೆ ಭಾರತದ ಸಂದರ್ಭದಲ್ಲಿ ಒಂದು ಔಷಧಿಯೋ ಹೊರತು ಆಹಾರವಲ್ಲ. ಆಧುನಿಕ ಶಿಕ್ಷಣ, ವೈಚಾರಿಕತೆ, ಬೌದ್ಧಿಕತೆಯ ಫಲವೇ ಆದ ಆಶೀಶ್ ನಂದಿಯವರಿಗೆ ಈ ಸತ್ಯ ಮನವರಿಕೆಯಾಗಿದೆ. ಆದರೆ ಅವರೇ ಗುರುತಿಸುವಂತೆ ಈಗ ಈ ಸತ್ಯದಿಂದ ಪ್ರಯೋಜನವಿದೆಯೇ ಎಂಬುದೂ ಅನುಮಾನಾಸ್ಪದ. ಯಾಕೆಂದರೆ ನಮ್ಮ ಜೀವನ ಕ್ರಮವೇ ಬದಲಾಗದೆ ರೋಗ ವಾಸಿಯಾಗದು ಮತ್ತು ಅ ಮದ್ದನ್ನು ಬಿಡಲಾಗದು ಎಂಬ ಸಂದಿಗ್ಧದಲ್ಲಿ ನಾವಿದ್ದೇವೆ.

ಹಾಗಾಗಿ ಈ ಮದ್ದಿನ 'ಸೈಡ್ ಎಫೆಕ್ಟ್'ಗಳನ್ನೂ ನಾವು ಅನುಭವಿಸುವುದು ಅನಿವಾರ್ಯವಿರಬಹುದು.

**–ಎಸ್ ಮಂಜುನಾಥ್, ಕೆ.ಆರ್.ನಗರ**

---

## ಇತ್ತಲೆ ಎಂಬುದು ಕತ್ತಲೆಯಯ್ಯಾ!



ಸೆಕ್ಯಲರಿಸಂನ ಪರಿಕಲ್ಪನೆಯನ್ನು ಮರುಚಿಂತಿಸುವುದು ಈ ಕಾಲದ ಅಗತ್ಯವೆಂಬುದು ನಿಜ. ಹಾಗೆಯೇ ನಂದಿಯವರು, ಹಳ್ಳಿಗಳ ಜನ ತಮ್ಮ ಬದುಕಿನ ಮೂಲಕವೇ ಸಹಬಾಳ್ವೆಯ ಪಾಠ ಹೇಳುತ್ತಿರುವಾಗ, ಅವರಿಂದಲೇ ನಾವು ಕಲಿಯಬೇಕಾಗಿದೆ ಎಂಬ ಮಾತನ್ನು ಹಳ್ಳಿಗರ 'ತಿಳಿವ'ನ್ನು ಒಪ್ಪಿಕೊಳ್ಳುವ ನೆಲೆಯಿಂದ ಹೇಳಿದ್ದರೆ ಅದನ್ನೂ ಸ್ವೀಕರಿಸಬಹುದು.. ಆದರೆ, ಈ ಲೇಖನದ ಗುರಿ ಯಾರು ಎಂಬುದನ್ನು ಯೋಚಿಸಿದಾಗ ಇವರ ಅಭಿಪ್ರಾಯಗಳನ್ನು ಒಪ್ಪಿಕೊಳ್ಳಲು ಕೆಲವು ಸಮಸ್ಯೆಗಳು ಎದುರಾಗುತ್ತವೆ. ಅಂದರೆ, ಕೋಮು ಗಲಭೆಗಳಿಂದ ಪೀಡಿತರಾದವರಿಂತ ಹೆಚ್ಚಾಗಿ ಈ ಲೇಖನವು ಸೆಕ್ಯಲರಿಸಂ ಎಂದರೇನು? ಎನ್ನುವುದನ್ನು ವಿವರಿಸ ಹೋಗಿ ಮತ್ತೆ ಅದೇ ಬುದ್ಧಿಜೀವಿಗಳೆಡೆಗೇ ಗಮನ ಹರಿಸಿದೆ. ಗಾಂಧಿಯವರ ದಾರಿ ಮತ್ತು ಗುರಿ ಎರಡೂ ಯಾವಾಗಲೂ ಸಂತ್ರಸ್ತರ ಕಡೆಗೆ ಮತ್ತು ಸಂತ್ರಸ್ತರ ಜೊತೆಗೆ ಇರುತ್ತದೆ. ಬುದ್ಧಿಜೀವಿಗಳ ಕಡೆಗಲ್ಲ. ಆದರೆ ಈ ಲೇಖನವು ಸೌಹಾರ್ದ ಸ್ಥಾಪಿಸುವುದರ ಕುರಿತು ಖಚಿತ ನಿಲುವನ್ನು ತೋರದೆ 'ಇತ್ತಲೆ'(ಎರಡು ತಲೆ)ಯ ನಿಲುವನ್ನು ಹೊಂದಿದಂತೆ ಕಾಣುತ್ತಿದೆ. ಅಥವಾ ಇವುಗಳ ಕುರಿತು ಬುದ್ಧಿಜೀವಿಗಳು ಮಾತನಾಡುವುದನ್ನು ಬಿಟ್ಟರೆ ಜನರೇ ಈ ಸಮಸ್ಯೆಯನ್ನು ಪರಿಹರಿಸಿಕೊಳ್ಳುತ್ತಾರೆ ಎಂಬ ಧ್ವನಿಯೊಂದು ಇಲ್ಲಿದೆ. ಈ ಕಾರಣದಿಂದಲೇ ಈ ಲೇಖನ ಕೆಲವು ಪ್ರಶ್ನೆಗಳನ್ನು ನಮ್ಮೊಳಗೆ ಹುಟ್ಟು ಹಾಕುತ್ತದೆ.

ಮೊದಲನೆಯದಾಗಿ, ಭಾರತದಲ್ಲಿ ನಡೆದ ಕೋಮು ಗಲಭೆಗಳಲ್ಲಿ ಶೇಕಡಾ ತೊಂಬತ್ತರಷ್ಟು ಜನ ಪಟ್ಟಣದವರು ಬಲಿಯಾಗಿದ್ದು, ಹಳ್ಳಿಗಳಲ್ಲಿ ಕೇವಲ ಶೇಕಡಾ ನಾಲ್ಕರಷ್ಟು ಜನ ಬಲಿಯಾಗಿದ್ದಾರೆ. ನಮ್ಮ ಹಳ್ಳಿಗಳ ಪಾರಂಪರಿಕ ಸಹಬಾಳ್ವೆಯನ್ನು ಸೂಚಿಸಲು ಹೊರಗಿನ ಪರಿಕಲ್ಪನೆಗಳನ್ನು ಕಡತರಬೇಕಾಗಿಲ್ಲ ಎಂಬ ಅವರ ಮಾತುಗಳನ್ನೇ ಗಮನಿಸೋಣ. ಹೀಗೆ ಹೇಳುವಾಗ ನಮ್ಮ ಹಳ್ಳಿಗಳ ಸ್ವರೂಪವನ್ನೂ ನಾವು ನೆನಪಿಸಿಕೊಳ್ಳಬೇಕಲ್ಲವೇ? ಹಳ್ಳಿಗಳ ಜನ ಎಲ್ಲವನ್ನೂ ಜಾತಿಯ ನೆಲೆಯಲ್ಲಿ ನೋಡುತ್ತಾರೆಯೇ ಹೊರತು ಧರ್ಮದ ನೆಲೆಯಲ್ಲಲ್ಲ. ಸಾಬರ ಜಾತಿ, ಕಿರಿಸ್ತಾನರ ಜಾತಿ ಎಂದೇ

## ಅಸಹಾಯಕತೆ ಕೋಮು ಸೌಹಾರ್ದವಲ್ಲ

ಅವರು ಹೇಳುವುದು. ಅಲ್ಲಿ ಹಿಂದೂ ಧರ್ಮ ಎಂಬ ಪದ ಬಳಕೆಯೂ ಇರಲಿಲ್ಲ. ಇವೆಲ್ಲ 'ಹೊರಗಿನಿಂದ'ಲೇ ಹಳ್ಳಿಗಳನ್ನು ಪ್ರವೇಶಿಸಿದ್ದು. ಇದಲ್ಲದೆ, ನಮ್ಮ ಹೆಚ್ಚಿನ ಹಳ್ಳಿಗಳಲ್ಲಿ ಎರಡೋ ಮೂರೋ ಜಾತಿಯ ಜನಗಳು ಪ್ರಧಾನವಾಗಿ ವಾಸಿಸುತ್ತಿರುತ್ತಾರೆ. ಇನ್ನುಳಿದ ಜಾತಿಯ ಜನಗಳ ಒಂದೋ ಎರಡೋ ಮನೆಗಳಿದ್ದು ಅವರು ಇವರೊಂದಿಗೆ 'ಹೊಂದಿಕೊಂಡು' ಹೋಗುವುದು ಅನಿವಾರ್ಯವಾಗಿರುತ್ತದೆ. ದಲಿತರ, ಕೆಳಜಾತಿಗಳ ಜನರ ಮೇಲಿನ ಅಮಾನುಷ ನಡೆಗಳನ್ನು ಕಂಡೂ ಇದನ್ನೆಲ್ಲ ಸಹಬಾಳ್ವೆ ಎಂಬ ಲೇಬಲ್ ಅಡಿ ಗುರುತಿಸಲು ಸಾಧ್ಯವೇ ಇಲ್ಲ. ಪ್ರತಿಭಟಿಸಲು ಸಾಧ್ಯವಿಲ್ಲದ ಪರಿಸ್ಥಿತಿಯಲ್ಲಿ ಸಹಿಸಿಕೊಂಡಿದ್ದನ್ನು ಕೋಮು ಸೌಹಾರ್ದ ಎನ್ನಲಾಗುವುದಿಲ್ಲ. ಈ ಕಾರಣಗಳಿಂದ ಇಂತಹ ಸಂರಚನೆಯೊಳಗಿರುವ ಹಳ್ಳಿಗಳಲ್ಲಿ ಕೋಮು ಗಲಭೆಯಾಗುವ ಸಂಭವ ಕಡಿಮೆ.

ಎರಡನೆಯದಾಗಿ, ಸೆಕ್ಯುಲರಿಸಂ ಬಗ್ಗೆ ಹಳ್ಳಿಗಳಿಗೆ ಎಡಪಂಥೀಯರು ಹೋಗಿ ಪಾಠ ಹೇಳುವುದು ಅಗತ್ಯವಿಲ್ಲ ಎಂಬುದು ಸರಿಯಾದರೂ, ಹಳ್ಳಿಗಳಿಗೆ ನಿಜವಾಗಿಯೂ ಹೋಗಿ ಪಾಠ ಹೇಳುತ್ತಿರುವವರು, ಹೇಳಿದವರು ಎಡಪಂಥೀಯರಲ್ಲ. ಬದಲಿಗೆ, ಬಲಪಂಥೀಯ ಆರ್.ಎಸ್.ಎಸ್. ನವರು. ಶಾಲೆಯ ಪಾಠಗಳೊಂದಿಗೆ ಬಾಲ್ಯದಲ್ಲಿಯೇ ಈ ಪಾಠಗಳನ್ನು ಕೇಳಿದವರಿಂದಾಗಿ ಹಳ್ಳಿ ಹಳ್ಳಿಗಳಲ್ಲೂ ಏನಾಗಿದೆ ಎಂಬ ಬಗ್ಗೆ ಇದುವರೆಗೂ ನಾವು ಸರಿಯಾಗಿ ಅಧ್ಯಯನ ಮಾಡಿದ್ದೇವೆಯೇ? ಅವಿಭಜಿತ ದಕ್ಷಿಣ ಕನ್ನಡದಲ್ಲಿ ಒಂದು ಕಾಲದಲ್ಲಿ ಇದ್ದ ಸಹಬಾಳ್ವೆ ಕಾಲಾಂತರದಲ್ಲಿ ಇಲ್ಲವಾಗಲು ಇಂತಹ 'ಪಾಠ'ಗಳೂ ಕಾರಣವಲ್ಲವೇ? ಈ ಪಾಠ ಕೇಳಿದವರು ನಗರಕ್ಕೆ ವಲಸೆ ಹೋಗಿ, ಶಾಲಾ–ಕಾಲೇಜು ಮೇಸ್ಟರುಗಳಾಗಿ ಮೆದುಳು ತೊಳೆಯುವ ಕೆಲಸ ಮಾಡುತ್ತಿಲ್ಲವೇ? ಸೆಕ್ಯಲರಿಸಂ ವಿಫಲವಾಗಲು ಈ ವಿದ್ಯಮಾನಗಳು ಎಷ್ಟು ಕಾರಣ ಎಂಬ ಬಗ್ಗೆ ಪೋಸ್ಟ್ ಸೆಕ್ಯಲರಿಸ್ಟರು ಯಾಕೆ ಯೋಚಿಸುತ್ತಿಲ್ಲ? ಹಾಗೆಯೇ, ಶಿಕ್ಷಿತರೇ ಹೆಚ್ಚಾಗಿ ಕೋಮುವಾದಿಗಳಾಗಲು ನಾವು ಓದಿದ ಇತಿಹಾಸ ಪಾಠಗಳು



ಎಷ್ಟು ಕಾರಣವಾಗಿವೆ? ಆ ಸಿಲೆಬಸ್‌ಗಳನ್ನು ಮರು ರೂಪಿಸಿಕೊಳ್ಳಬೇಕಾದ ವಿಧಾನ ಯಾವುದು ಎಂಬೆಡೆಗೂ ಗಂಭೀರವಾಗಿ ಚಿಂತಿಸಬೇಕಾಗಿದೆ.

ಮೂರನೆಯದಾಗಿ, ಇವತ್ತು ಹಳ್ಳಿಗಳು ಹಳ್ಳಿಗಳಾಗಿ ಉಳಿದಿವೆಯೇ? ಟಿ.ವಿ, ಇಂಟರ್‌ನೆಟ್, ಇಂಗ್ಲಿಷ್ ಮಾಧ್ಯಮ ಶಿಕ್ಷಣ, ಮಾರುಕಟ್ಟೆ ಪ್ರಣೀತ ಚಿಂತನೆ– ಆಮಿಷ ಯಾವ ಹಳ್ಳಿಯನ್ನು ಬಿಟ್ಟಿದೆ? ನಗರದ ಎಲ್ಲ ರೋಗಗಳೂ ಹಳ್ಳಿಗಳನ್ನು ವ್ಯಾಪಿಸುತ್ತಿರುವ ಈ ಹೊತ್ತಿನಲ್ಲಿ ಹಳ್ಳಿಗಳ ಜನರೂ ಇತರ ಧರ್ಮೀಯರನ್ನು, ಮುಖ್ಯವಾಗಿ ಮುಸ್ಲಿಮರನ್ನು ಅನುಮಾನದಿಂದಲೇ ನೋಡತೊಡಗಿದ್ದಾರೆ.

ನಿಜ, ಸೆಕ್ಯುಲರಿಸಂ ಬಗ್ಗೆ ಮರುಚಿಂತನೆ ಅಗತ್ಯ. ಆದರೆ, ಆ ಭರದಲ್ಲಿ ಸೆಕ್ಯಲರಿಸಂ ಬಗೆಗಿನ ಇದುವರೆಗಿನ ಚಿಂತನೆಗಳ ಪ್ರಾಮಾಣಿಕತೆಯ ಕುರಿತು ಅನುಮಾನ ಸರಿಯಲ್ಲ. ಎಡಪಂಥೀಯರನ್ನು ಹಣಿಯುವ ಭರದಲ್ಲಿ ಬಲಪಂಥೀಯರ ಕೇಡುಗಳನ್ನು ನಿರ್ಲಕ್ಷಿಸುವುದು ಕೂಡ ಸರಿಯಲ್ಲ.

**–ಸಬಿತಾ ಬನ್ನಾಡಿ,** ಶಂಕರಘಟ್ಟ

---

## ಸೆಕ್ಯುಲರಿಸಂ: ನಮ್ಮ ಅರ್ಥ ನಮಗೆ



ನಿಘಂಟುವಿನ ಪ್ರಕಾರ ಸೆಕ್ಯುಲರಿಸಂ ಎಂದರೆ ಲೌಕಿಕ, ಐಹಿಕ ದೃಷ್ಟಿ; ಧರ್ಮವು ಸಾಮಾಜಿಕ, ಶೈಕ್ಷಣಿಕ ಇಂತಹ ರಂಗಗಳಲ್ಲಿ ಪಾತ್ರ ವಹಿಸಬಾರದು ಎಂಬ ನಂಬಿಗೆ ಎಂದು ಅರ್ಥ. ಆದರೆ ಸಾಮಾನ್ಯವಾಗಿ ನಾವು ಸೆಕ್ಯುಲರಿಸಂ ಪದವನ್ನು ಜಾತ್ಯತೀತತೆ ಎಂದು ಅರ್ಥವಿಸಿಕೊಂಡು ಬಳಸುತ್ತಿದ್ದೇವೆ. ಭಾರತೀಯ ಸಮಾಜ ಅಸಂಖ್ಯ ಜಾತಿ, ಉಪಜಾತಿಗಳಿಂದ ತುಂಬಿಕೊಂಡಿರುವ ಶ್ರೇಣಿಕೃತ ಸಮಾಜ. ಇಲ್ಲಿ ಧರ್ಮ ನಿರಪೇಕ್ಷತೆಗಿಂತ ಜಾತಿ\ಮತ ನಿರಪೇಕ್ಷತೆ ಹೆಚ್ಚು ಸಮಂಜಸ. ಕೆಲವು ಕಡೆ ಕೆಲವು ಜಾತಿಗಳು ಪ್ರಬಲ ಇರುತ್ತವೆ; ದಬ್ಬಾಳಿಕೆ ನಡೆಯಿಸುತ್ತವೆ. ಪ್ರಜಾಪ್ರಭುತ್ವವುಳ್ಳ ರಾಷ್ಟ್ರದಲ್ಲಿ ನಾಗರಿಕರಾಗಿ ಎಲ್ಲರೂ ಸಮಾನರು –ಎಲ್ಲರಿಗೂ ಸಮಾನ ಹಕ್ಕುಗಳು, ಕರ್ತವ್ಯಗಳು ಇರುತ್ತವೆ ಎಂಬ ತತ್ವವನ್ನು ನಾವು ಸ್ವೀಕರಿಸಿದ್ದೇವೆ. ಜಾತೀಯ\ಮತೀಯ ಸಂಘರ್ಷಗಳಿಗೆ ಅವಕಾಶವಾಗದಂತೆ, ಸಹಬಾಳ್ವೆಗೆ ಧಕ್ಕೆಯಾಗದಂತೆ ಸರಕಾರ ನೋಡಿಕೊಳ್ಳಬೇಕಾಗುತ್ತದೆ; ಪ್ರಜೆಗಳೂ ಈ ಪ್ರಜ್ಞೆ ಹೊಂದಿರಬೇಕಾಗುತ್ತದೆ.

ಯುರೋಪಿನಲ್ಲಿ ನಡೆದಂತೆಯೇ ಧಾರ್ಮಿಕ ಕಲಹಗಳು, ಜನಾಂಗೀಯ ಹತ್ಯೆಗಳು ಭಾರತದಲ್ಲಿ ನಡೆದಿರಲಿಕ್ಕಿಲ್ಲ. ಆದರೆ ಹಿಂದು ಮುಸ್ಲಿಂ ಮತಾಂಧತೆಗಳಿಂದ ಉಂಟಾಗುವ ಭೀಕರ ಕೃತ್ಯಗಳಾಗಲಿ, ಪ್ರಬಲ ಜಾತಿಯವರು ಕೆಳಜಾತಿಯ ದುರ್ಬಲರ ಮೇಲೆ ನಡೆಯಿಸಿರುವ ದೌರ್ಜನ್ಯಗಳೇನೂ ಕಡಿಮೆ ಇಲ್ಲವಲ್ಲ! ನಮ್ಮ ಹಳ್ಳಿಗಳು ಇವತ್ತು ಮೊದಲಿನ ಹಳ್ಳಿಗಳಾಗಿ ಉಳಿದಿಲ್ಲ. ದೈನಂದಿನ ಬದುಕಿನಲ್ಲಿ ಸಹಬಾಳ್ವೆ ಇದ್ದರೂ ಮತಾಂಧತೆ ಭುಗಿಲೆದ್ದಾಗ, ಪ್ರಚೋದನೆ ಹಿತಾಸಕ್ತಿಗಳಿಂದ ಜಾತೀಯ ಸಂಘರ್ಷಗಳು ತಲೆದೋರಿ ರೊಚ್ಚು ರೋಷಗಳಲ್ಲಿ ಅದೇ ಸಾಮಾನ್ಯ ಜನ ಮಚ್ಚು ಹಿಡಿಯುತ್ತಾರೆ, ಜೀವಂತ ಸುಡುತ್ತಾರೆ, ಸ್ಫೋಟಗಳನ್ನು ನಡೆಯಿಸುತ್ತಾರೆ. ಸಾಮಾನ್ಯರ ತಲೆಗಳಲ್ಲಿ ವಿಷ ಬೀಜ ಬಿತ್ತಿ ತಲೆಕೆಡಿಸುವಂಥ ಸಂಘಟನೆಗಳ ಬಗೆಗೆ ಎಚ್ಚರ ವಹಿಸಬೇಕಾಗಿದೆ.



ಸೆಕ್ಯುಲರಿಸಂ ಪದಕ್ಕೆ ಪರ್ಯಾಯವಾಗಿ 'ದೇಶ ಕಾಲೀಯತೆಯ' ಪರಿಕಲ್ಪನೆಯನ್ನು ಯಾಕೆ ಬಳಸಬಾರದು ಎಂದು ಆಶೀಶ್ ನಂದಿ ಕೇಳುತ್ತಾರೆ. ಭಾರತೀಯ ಸಂದರ್ಭದಲ್ಲಿ ಈ ಪದ ಎಷ್ಟು ಸಮಂಜಸ ಎಂಬುದು ಪ್ರಶ್ನಾರ್ಹ. ಸೆಕ್ಯುಲರಿಸಂ ಪದ ವಸಾಹತು ಚಿಂತನೆಯಿಂದ ಬಂದ ಪದವಾಗಿರುವದರಿಂದ ಅದನ್ನು ಕೈ ಬಿಡಬೇಕು, ಅದು ಸಮಗ್ರತೆಯನ್ನು ಹಿಡಿಯಲಾರದು ಎಂಬುದು ಅವರ ವಿಚಾರ. ನಾವು ಇವತ್ತು ಅದೇ ಪದವನ್ನು ಜಾತ್ಯತೀತತೆ ಎಂಬ ಅರ್ಥದಲ್ಲಿ ಬಳಸುವಾಗ ಅಷ್ಟೇನೂ ಗೊಂದಲವಿಲ್ಲ. ವಿಶಾಲ ಅರ್ಥದಲ್ಲಿ ಧರ್ಮ–ನ್ಯಾಯ, ನೀತಿ–ಪ್ರವೇಶ ಇದ್ದೇ ಇದೆ. ಅದೇ ಧರ್ಮವನ್ನು ಜಾತಿ, ಮತಕ್ಕೆ ಸಂಕುಚಿತಗೊಳಿಸಿ, ಜಾತಿ ಉಪಜಾತಿಗಳ ಧರ್ಮಗುರುಗಳು ಸಾಮಾಜಿಕ ರಂಗದಲ್ಲಿ ಪ್ರವೇಶಿಸಿ ಮತೀಯ ಕಿಚ್ಚು ಹಚ್ಚುತ್ತಿದ್ದರೆ, ಅದನ್ನು ತಡೆಗಟ್ಟುವದು ಅನಿವಾರ್ಯ.

ಸೂಕ್ತ ಪರ್ಯಾಯ ಪದಕ್ಕೆ ಬುದ್ಧಿಜೀವಿಗಳು ತಡಕಾಡುತ್ತಿರಲಿ. ಆದರೆ ಸೆಕ್ಯುಲರಿಸಂ ಪದವನ್ನು ನಾವು ಯಾವ ಅರ್ಥದಲ್ಲಿ ಬಳಸುತ್ತಿದ್ದೇವೆ ಎಂಬುದು ಮಹತ್ವದ್ದು.

**–ಮಲ್ಲಿಕಾರ್ಜುನ ಹಿರೇಮಠ,** ಧಾರವಾಡ

# ಒಳಗಿನ 'ಸಹಬಾಳ್ವೆ'ಯನ್ನು ಹೊರಗಿನ 'ಸಮಾನತೆ'ಯಲ್ಲಿ ಜೋಡಿಸಬೇಕು



ಸೆಕ್ಯುಲರಿಸಂನ ಕುರಿತು ನಂದಿಯುವರ ಮುಖ್ಯ ಆಕ್ಷೇಪ ಅದು ಹೊರಗಿನದು ಎನ್ನುವುದು. ಭಾರತ ಬಹಳ ಹಿಂದಿನಿಂದಲೂ ಮತ್ತು ವಿಶೇಷವಾಗಿ ವಸಾಹತುಶಾಹಿ ಆಳ್ವಿಕೆಗೆ ಒಳಪಟ್ಟ ಮೇಲೆ ಪಾಶ್ಚಿಮಾತ್ಯ-ಭಾರತೀಯ ಎನ್ನುವ ವಿಂಗಡನೆಗಳು ಬಿದ್ದು ಹೋಗಿವೆ. ನಾವು ಹಲವಾರು ವಿಚಾರಗಳನ್ನು, ಮೌಲ್ಯಗಳನ್ನು, ಶಿಕ್ಷಣವನ್ನು, ಆಡಳಿತಾತ್ಮಕ ಕಲ್ಪನೆಗಳನ್ನು ಪಾಶ್ಚಾತ್ಯರಿಂದ ಪಡೆದಿದ್ದೇವೆ. ಸೆಕ್ಯುಲರಿಸಂ ಕೂಡ ನಾವು ಪಾಶ್ಚಿಮಾತ್ಯರಿಂದಲೇ ಪಡೆದ ಮೌಲ್ಯವಾಗಿದೆ. ಇಲ್ಲಿನ ಪಟ್ಟಭದ್ರರು ಹೊರಗಿದ್ದನ್ನು ನಾವು ಬಹಳ ಭಯದಿಂದ ನೋಡುವಂತೆ ನಕಾರಾತ್ಮಕ ಅಭಿಪ್ರಾಯಗಳನ್ನು ಸೃಷ್ಟಿಸುತ್ತಿದ್ದಾರೆ. ಒಳ್ಳೆಯ ವಿಚಾರಗಳನ್ನು ಜಗತ್ತಿನ ಯಾವ ಕಡೆಯಿಂದಲೂ ಸ್ವೀಕರಿಸಲು ಹಿಂಜರಿಯಬೇಕಿಲ್ಲ.

ಆಶೀಶ್ ನಂದಿಯವರು ಹೇಳುವಂತೆ, ಸೆಕ್ಯುಲರಿಸಂನ್ನು ನಾವು ಕಡ ತಂದೆವು ಎನ್ನುದಕ್ಕಿಂತ ಇಲ್ಲಿನ ಸಾಮಾಜಿಕ ಕಾರಣಗಳಿಗಾಗಿ ಜನ ಮತ್ತು ನಾಯಕರು ಅದನ್ನು ಬಯಸಿದವರು ಎನ್ನಬಹುದು. ಯಾಕೆಂದರೆ ಭಾರತದ ಸಂದರ್ಭದಲ್ಲಿ ಸೆಕ್ಯುಲರಿಸಂ ಒಂದು ಸಿದ್ಧಾಂತ ಮಾತ್ರ ಅಲ್ಲ. ಅದು ಭಾರತವನ್ನು ಮರುಕಟ್ಟುವ ಪ್ರಯತ್ನದ ಒಂದು ದಾರಿ. ನೆಹರೂ ಜಾತಿ ವ್ಯವಸ್ಥೆಯನ್ನು ನಿವಾರಿಸಲು ಆಧುನಿಕ, ವೈಜ್ಞಾನಿಕ ಮತ್ತು ಸೆಕ್ಯುಲರ್ ಸಿದ್ಧಾಂತಗಳು ಸಹಾಯಕವಾಗುತ್ತದೆ ಎಂದು ಭಾವಿಸಿದರು. ಭಾರತವನ್ನು ವಿವಿಧ ನೆಲೆಗಳಲ್ಲಿ ನಿರೂಪಿಸಿದ ಫುಲೆ, ಪೆರಿಯಾರ್, ಲೊಹಿಯಾ ಮುಂತಾದವರು ಸೆಕ್ಯುಲರ್ ದಾರಿಯಲ್ಲೇ ನಡೆದರು. ಸೆಕ್ಯುಲರ್ ಮೌಲ್ಯದಿಂದಾಗಿಯೇ ಅಂಬೇಡ್ಕರ್ ಅವರಿಗೆ ಭಾರತವನ್ನು ವಿಶಾಲಾರ್ಥದಲ್ಲಿ ಗ್ರಹಿಸಲು ಸಾಧ್ಯವಾಯಿತು. ಇವರೆಲ್ಲ ಸೆಕ್ಯುಲರಿಸಂಗೆ ಸಾಮಾಜಿಕ ಆಯಾಮವನ್ನು ನೀಡಿದ ಮಹನೀಯರು.

ಆಶೀಸ್ ನಂದಿಯವರು ಪಾರಂಪರಿಕ ಸಮಾಜವನ್ನು ಸಾಮರಸ್ಯದ ಸಮಾಜವೆಂದು ಕಾಣುತ್ತಾರೆ. ಹಿಂದಿನಿಂದಲೂ ಜಾತೀಯತೆ, ನಂಬಿಕೆ, ಆಚರಣೆಗಳಲ್ಲಿ ಇಲ್ಲಿನ ಸಮುದಾಯಗಳನ್ನು ಒಟ್ಟಿಗೆ ಬೆಸೆದುಕೊಂಡು ಬರಲಾಗಿದೆ. ಹೀಗೆ ಬೆಸೆಯಲಾದ ಸಮಾಜ ವ್ಯವಸ್ಥೆ ಎಷ್ಟೊಂದು ಅಸಮಾನತೆಗಳು, ತಾರತಮ್ಯ ಭಾವನೆಗಳು, ಸ್ಪೃಶ್ಯ-ಅಸ್ಪೃಶ್ಯ ಭೇದಗಳನ್ನು ಒಳಗಿರಿಸಿಕೊಂಡು ಬಂದಿದೆ! ಈ ಬಗೆಯ ಅಸಮಾನತೆಗಳನ್ನು ಚರ್ಚೆಗೆ ಒಡ್ಡುವ ಮತ್ತು ಸಮಾಜವನ್ನು ಪರಿವರ್ತಿಸುವ ಪ್ರಯತ್ನಗಳನ್ನು ಆಧುನಿಕ ಮೌಲ್ಯಗಳ ಒರೆಗಲ್ಲಿನಲ್ಲಿಯೇ ನಡೆಸಿಕೊಂಡು ಬರಲಾಗುತ್ತಿದೆ. ನಂದಿಯವರು ಈ ವಿಚಾರವನ್ನು ಯಾಕೆ ಮರೆಯುತ್ತಾರೆ?

ಸೆಕ್ಯುರಿಸಂ ಧರ್ಮ, ನಂಬಿಕೆಗಳನ್ನು ದೂರ ಇಡುವುದಿಲ್ಲ. ಸೆಕ್ಯುರಿಸಂಗೆ ಸರ್ವ ಧರ್ಮ, ನಂಬಿಕೆಗಳನ್ನು ಸಮಾಭಾವದಿಂದ ನೋಡುವ ದೃಷ್ಟಿಯು ಇದೆ. ಆಧುನಿಕ ಭಾರತದ ನಾಯಕರು ಇಲ್ಲಿನ ನಂಬಿಕೆ, ಸಾಂಸ್ಕೃತಿಕ ವಿಚಾರಗಳನ್ನು ತಮಗೆ ಬೇಕಾದಂತೆ ಸ್ವೀಕರಿಸಿ ತಮ್ಮ ಚಿಂತನೆಗಳನ್ನು ರೂಪಿಸಿದ್ದಾರೆ. ತಿಲಕ್ ಮುಂತಾದ ಹಿಂದು ರಾಷ್ಟ್ರೀಯವಾದಿ ನಾಯಕರು ಮಾತ್ರವಲ್ಲದೆ, ಹಿಂದು ರಾಷ್ಟ್ರೀಯತೆಗೆ ಪ್ರತಿರೋಧ ತೋರಿದ ಫುಲೆ, ಅಂಬೇಡ್ಕರ್ ಮುಂತಾದವರು ತಮ ತಮಗೆ ಬೇಕಾದ ಸಾಂಸ್ಕೃತಿಕ ಧಾರ್ಮಿಕ ಅಂಶಗಳನ್ನು ಬಳಸಿಕೊಂಡಿದ್ದಾರೆ. ಹಾಗಾಗಿ ಆಧುನಿಕ ರಾಜಕೀಯ ಚಿಂತನೆಗಳು ಧರ್ಮ-ನಂಬಿಕೆಗಳನ್ನು ಒಳಗೊಳ್ಳುವುದಿಲ್ಲ ಎನ್ನುವ ವಾದ ಸರಿಯಲ್ಲ.



ಇನ್ನೊಂದು ಮುಖ್ಯವಾದ ವಿಚಾರ, ಆಶೀಶ್ ನಂದಿಯವರು ತಮ್ಮ ವಾದಕ್ಕೆ ಗಾಂಧಿಯವರನ್ನು ಮುಂದುಮಾಡುವ ವಿಸಂಗತಿ. ಮೂಲತಃ ನಂದಿಯವರ ವಿಚಾರಧಾರೆಯನ್ನು ಗಮನಿಸಿದರೆ. ಅಲ್ಲಿ ಗಾಂಧಿಯನ್ನು ಕಾಣುವುದು ಕಷ್ಟವಾಗುತ್ತದೆ. ಮಾತ್ರವಲ್ಲ, ಗಾಂಧಿ ಆಧುನಿಕತೆ ಮತ್ತು ಆಧುನಿಕ ಅಧಿಕಾರ ಕೇಂದ್ರಗಳ ಬಗ್ಗೆ ಆಸಕ್ತಿ ತೋರಿಸಿದವರಲ್ಲ. ಗಾಂಧಿಯವರು ಸರ್ವ ಧರ್ಮ ಸಮಾಭಾವದ ತತ್ವವನ್ನು ಪ್ರತಿಪಾದಿಸಿದವರು. ಆದರೆ ಅವರು ಜಾತಿ, ಅಸ್ಪೃಶತೆಯ ನಿವಾರಣೆಗೆ ಮನಃಪರಿವರ್ತನೆಯ ದಾರಿಯನ್ನು ಸೂಚಿಸುವುದನ್ನು ಅಂಬೇಡ್ಕರ್ ಒಪ್ಪುವುದಿಲ್ಲ. ಹಾಗಾಗಿ ಸಾಮಾಜಿಕ ಅಸಮಾನತೆಗಳ ನಿವಾರಣೆಗಾಗಿ ಅಂಬೇಡ್ಕರ್ ಆಧುನಿಕತೆಯ ಬಗೆಗೆ ನಂಬಿಕೆ ಇಡುತ್ತಾರೆ. ಈ ನೆಲೆಯಲ್ಲಿ ನಂದಿಯವರು ಗಾಂಧಿಯವರನ್ನು ಪ್ರಸ್ತಾಪಿಸುವುದನ್ನು ಚರ್ಚಿಸಬೇಕಿದೆ.

ಕೋಮುವಾದವನ್ನು ಆಧುನಿಕ ಪ್ರಜ್ಞೆ ಸೃಷ್ಟಿ ಮಾಡುತ್ತದೆ ಎನ್ನುದಕ್ಕಿಂತ ಹೆಚ್ಚಾಗಿ, ಆಧುನಿಕ ಮೌಲ್ಯಗಳ ವೈರಿಗಳಾದ ಪಟ್ಟಭದ್ರರು ಅದನ್ನು ಹುಟ್ಟುಹಾಕಿದ್ದಾರೆ ಎನ್ನಬಹುದು.ಸೆಕ್ಯುಲರಿಸಂಗೆ ವಿರೋಧವಾಗಿರುವ ಹಿಂದುತ್ವದ ಗುಣ ಧರ್ಮಗಳನ್ನು ಮತ್ತು ಅದರ ಪರಿಣಾಮಗಳನ್ನು ಈಗಾಗಲೇ ನೋಡಿದ್ದೇವೆ. ಹಿಂದುತ್ವವಾದಿಗಳು ಕ್ರಿಶ್ಚಿಯನ್, ಮುಸ್ಲಿಂರನ್ನು ವಿರೋಧಿಸುವುದು ಮಾತ್ರವಲ್ಲ, ಇನ್ನೊಂದು ಕಡೆಯಲ್ಲಿ ಸಾಮಾನ್ಯ ಜನರನ್ನು ತಮ್ಮ ಪ್ರಭಾವ ವ್ಯಾಪ್ತಿಗೆ ಸೆಳೆಯುತ್ತಿದ್ದಾರೆ. ಭಿನ್ನಭಿನ್ನ ಅವೈದಿಕ ಸಾಂಸ್ಕೃತಿಕ ಅಸ್ತಿತ್ವಗಳನ್ನು ಒಳಗೊಳ್ಳುವ ಮೂಲಕ ಪಾರಂಪರಿಕ ಮೌಲ್ಯಗಳಿಂದ ಜಾತಿಯ ಗುರುತುಗಳನ್ನು ಗಟ್ಟಿಗೊಳಿಸುವ ಕೆಲಸ ಮಾಡುತ್ತಿದ್ದಾರೆ. ಆಶೀಶ್ ನಂದಿಯವರು ಈ ಅಂಶವನ್ನು ಯಾಕೆ ಗಮನಿಸುತ್ತಿಲ್ಲ?

ಆಶೀಶ್ ನಂದಿಯವರು ಪಾಶ್ಚಾತ್ಯ ಪ್ರಣೀತ ಸೆಕ್ಯುಲರಿಸಂಗೆ ಪರ್ಯಾಯವಾಗಿ ಮುಂದಿಡುವ ತಾತ್ವಿಕತೆಯಲ್ಲಿ ಭಾರತದ ವಾಸ್ತವ ಚಿತ್ರಣದ ಅರಿವು ಗೋಚರವಾಗದಿರುವುದು ಅವರ ಪರ್ಯಾಯ ತಾತ್ವಿಕತೆಯ ಬಗೆಗೆ ಅನುಮಾನಗಳನ್ನು ಮೂಡಿಸುತ್ತದೆ.

**-ಡಾ. ವಾಸುದೇವ ಬೆಳ್ಳೆ,** ಮಂಗಳೂರು

---

# ಸೆಕ್ಯುಲರಿಸಂ: ಹೊಸ ಖಾಯಿಲೆಗೆ ಬೇಕಾದ ಹೊಸ ಔಷಧಿ

ಸೆಕ್ಯುಲರಿಸಂ ಅಥವಾ ಜಾತ್ಯಾತೀತ (ಅಥವಾ ಧರ್ಮನಿರಪೇಕ್ಷತೆ ಎಂಬ ಶಬ್ದಗಳನ್ನು ನಾನು ಮೊದಲ ಬಾರಿಗೆ ಕೇಳಿದಾಗ ವೈಯಕ್ತಿಕ ಜೀವನದ ಒಂದು ಘಟನೆ ನನ್ನ ಸ್ಮೃತಿ ಪಟಲದ ಮೇಲೆ ಹಾದು ಹೋಯಿತು.

ವಿಜಾಪುರ ಜಿಲ್ಲೆಯ ಆಲಗೂರು ಎಂಬ ನನ್ನ ಹಳ್ಳಿಯಲ್ಲಿ ಶೇಕಡಾ ೨೦ರಷ್ಟು ಮುಸ್ಲಿಮರಿದ್ದು ಯಾರಿಗೂ ನಮಾಜು ಮಾಡುವುದೇ ಗೊತ್ತಿರಲಿಲ್ಲ. ನಮಾಜು ಮಾಡುವ ಮಸೀದಿ ಕೂಡ ಇರಲಿಲ್ಲ. ಮಸೀದಿ ಎಂದು ಕರೆಯಲಾಗುವ ಮೂರು ಚಿಕ್ಕ ಚಿಕ್ಕ ಕಟ್ಟಡಗಳಿದ್ದರೂ ಅವು ಮೊಹರಂನಲ್ಲಿ ಅಲೈ ದೇವರುಗಳನ್ನು ಕೂಡಿಸಲು ಇದ್ದದ್ದೇ ಹೊರತು ಸಾರ್ವತ್ರಿಕವಾಗಿ ನಮಾಜು ಮಾಡುವುದಕ್ಕಲ್ಲ.

ನಮ್ಮೂರಿನ ದ್ಯಾಮವ್ವನ ಗುಡಿಗೆ ಮೊದಲ ಬಾರಿಗೆ ರೆಕಾರ್ಡರ್ ಬಂದು ಪ್ರತಿದಿನವೂ ಲೌಡ್‌ಸ್ಪೀಕರ್‌ನಲ್ಲಿ ಭಕ್ತಿಗೀತೆಗಳನ್ನು ಹಾಕಲು ಶುರು ಮಾಡಿದಾಗ ನಮ್ಮ ಮನೆ ಎದುರಿನ ರಾಜಮಾ ಎಂಬ ಮುಸ್ಲಿಂ ಹೆಂಗಸು ನಮ್ಮ ತಾಯಿ ಹತ್ತಿರ, "ಯವ್ವಾ ಈ ಗದ್ದಲ ಕೇಳಿ ಎಲ್ಲಿ



ದ್ಯಾಮವ್ವನೇ ಗುಡಿಬಿಟ್ಟು ಓಡಿ ಹೋದಾಳಂತೀನಿ" ಎಂದು ತಮಾಷೆ ಮಾಡಿದ್ದಳು. ಹೀಗಿರುವಾಗ ೧೯೯೨ರ ಬಾಬ್ರಿ ಮಸೀದಿ ಗಲಭೆಯ ನಂತರ ಇದ್ದಕ್ಕಿದ್ದಂತೆ ಬೇರೆ ಊರಿನಿಂದ ಮುಲ್ಲಾ ಒಬ್ಬರು ಬಂದು ನಮಾಜು ಆರಂಭಿಸಿದರು. ಮತ್ತು ಊರಿನ ಮುಸ್ಲಿಮರು ನಮಾಜು ಕಲಿಯತೊಡಗಿದರು.

ಇಲ್ಲಿ ಗಮನಿಸಬೇಕಾದ್ದು ಏನೆಂದರೆ ಆಶೀಶ್ ನಂದಿಯವರ ವಾದವನ್ನು ಸಮರ್ಥಿಸುವಂತೆ ಬಾಬರಿ ಮಸೀದಿ ಗಲಭೆ ನೇರವಾಗಿ ಹಳ್ಳಿಯಲ್ಲಿ ಕಾಣಿಸಿಕೊಳ್ಳಲಿಲ್ಲ. ಆದರೆ ನಮಾಜು ಆರಂಭಗೊಂಡ ಪ್ರಕ್ರಿಯೆ ಮಾತ್ರ ನಗರಗಳಲ್ಲಾದ ಘಟನೆಗಳ ಪ್ರಭಾವವೇ. ಅಂದರೆ ಹಳ್ಳಿಗಳು ಹಿಂದಿನಂತೆಯೇ ಮುಂದೂ ಹಳ್ಳಿಗಳಾಗಿಯೇ ಉಳಿಯಲಾರವು. ಅದರಲ್ಲೂ ಇಂದಿನ ಎಲೆಕ್ಟ್ರಾನಿಕ್ ಮಾಧ್ಯಮಗಳು ಪ್ರತಿಹಳ್ಳಿಗಳನ್ನೂ ತಲುಪಿರುವಾಗ ನಗರಗಳ ಪ್ರಭಾವಗಳಿಂದ ಅವು ತಪ್ಪಿಸಿಕೊಳ್ಳಲಾರವು. ನಗರ ಸಮಾಜಗಳು ಸ್ವಾರ್ಥ ಕೇಂದ್ರಿತವಾಗಿದ್ದು ಪಶ್ಚಿಮದ ಅನುಕರಣೆಗೆ ಹಾತೊರೆಯುತ್ತಿರುವುದನ್ನು ಯಾರೂ ಅಲ್ಲಗಳೆಯಲಾರರು. ಸ್ವಾರ್ಥ ಸಾಧನೆಯಲ್ಲಿ ಮುಳುಗಿದ ಸಮಾಜಗಳು ತಮ್ಮ ಪಾಪಪ್ರಜ್ಞೆಯ ಬಿಡುಗಡೆಗೆ ಧರ್ಮಗಳ ಮೊರೆ ಹೋಗುತ್ತವೆ.



ಅಸಂಖ್ಯಾತ ಜಾತಿ ಪಂಗಡಗಳಲ್ಲಿ ವಿಭಜಿತವಾಗಿರುವ ಭಾರತದಂತಹ ಗ್ರಾಮೀಣ ಸಮಾಜಗಳಲ್ಲಿ ಸೆಕ್ಯುಲರಿಸಂ ತತ್ವ ತಾನೇ ತಾನಾಗಿ ಅಂತರ್ಗತವಾಗಿರುವುದು ನಿಜ. ಆದರೆ ಕೈಗಾರಿಕೀಕರಣದಿಂದಾಗಿ ನಗರಗಳು ಬೆಳೆಯುತ್ತಿರುವಂತೆಯೇ ಹಳ್ಳಿಗಳೂ ಪುಟ್ಟ ಪುಟ್ಟ ನಗರಗಳಾಗಿ ಮಾರ್ಪಡುತ್ತಿವೆ. ಹಣದ ಪ್ರಭಾವವಿರುವ ನಗರಪ್ರಜ್ಞೆಯ ಸಮಾಜಗಳಲ್ಲಿ, ಜಾತಿ-ಧರ್ಮಗಳು ಸಂಘಟಿತಗೊಳ್ಳುತ್ತ ಹೆಚ್ಚು ಹೆಚ್ಚು ಸಾಂಸ್ಥಿಕ ಸ್ವರೂಪ ಪಡೆಯುತ್ತಿದ್ದಂತೆ ಅನ್ಯರಲ್ಲಿ ಅಭದ್ರತೆಯ ಅಳಕು, ಆತಂಕ ಹೆಚ್ಚುವುದರಿಂದಾಗಿ ಸೆಕ್ಯುಲರಿಸಂ ತತ್ವ ಕಾನೂನು ರೂಪ ಪಡೆಯುವುದು ಅನಿವಾರ್ಯವಾಗುತ್ತದೆ. ಮುಖ್ಯ ಕಾರಣ, ಧರ್ಮಗಳು ಇಲ್ಲಿ ತಮ್ಮ ಅಂತಃಸತ್ವವನ್ನು ಕಳೆದುಕೊಂಡು ಬರಡು ಆಚರಣೆಯ ಮಟ್ಟದಲ್ಲಿರುವುದು. 'ಸೆಕ್ಯುಲರಿಸಂ' ಎಂಬ ಪದವನ್ನು ನಾವು ಯಾವ ನಾಗರಿಕ ಸಮಾಜದಿಂದ ಪಡೆದಿದ್ದೇವೆಯೋ ಅದೇ ಸಮಾಜದ ನಾಗರೀಕತೆ ನಮಗೀಗ ಮಾದರಿಯಾಗಿದೆ. ಅಲ್ಲಿಯ ಸಮಾಜ ಎದುರಿಸುತ್ತಿರುವ ಕಾಯಿಲೆಗಳನ್ನೇ ನಮ್ಮ ಸಮಾಜವೂ ಎದುರಿಸಬೇಕಾಗುತ್ತದೆ. ಹೀಗಾಗಿ ಸೆಕ್ಯುಲರಿಸಂ ಎಂಬುದು ಹಳತಲ್ಲದಿದ್ದರೂ ಹೊಸ ಖಾಯಿಲೆಗೆ ಬೇಕಾದ ಹೊಸ ಔಷಧಿ.

**–ಎನ್.ಎಂ. ಕುಲಕರ್ಣಿ, ಹೆಗ್ಗೋಡು**

## ಸೆಕ್ಯುಲರಿಸಂ ಎಂದರೆ ಸರ್ವಧರ್ಮ ಸಹಿಷ್ಣುತೆ



ಭಾರತ ಪುರಾತನ ಕಾಲದಿಂದಲೂ ಸರ್ವಧರ್ಮಗಳ ಶಾಂತಿಯ ತೋಟ.ಹಲವಾರು ಜಾತಿ, ಪಂಗೆ, ವರ್ಣ, ವರ್ಗಗಳು ತಲತಲಾಂತರಗಳಿಂದ ಇಲ್ಲಿ ಸಮನ್ವಯದಿಂದ ಇಲ್ಲಿ ಬಾಳಿ ಬದುಕಿವೆ. ಸ್ವಾತಂತ್ರ್ಯಪೂರ್ವದಲ್ಲಿಯೂ ಕೂಡ ಜಾತಿ-ಧರ್ಮಗಳ ಮೇಲೆ ಯುದ್ಧ ಆದುದೇ ಇಲ್ಲ. ಮೊಘಲರ ಸೈನ್ಯದಲ್ಲೂ ಹಿಂದೂ ಸೈನ್ಯಾಧಿಪತಿಗಳದ್ದೇ ಕಾರುಭಾರು. ಶಿವಾಜಿ ಮತ್ತು ಕೃಷ್ಣದೇವರಾಯರ ಸೈನ್ಯಗಳಲ್ಲೂ ಮುಸ್ಲಿಂ ಸೈನಕರು ಇದ್ದೇ ಇದ್ದರು. ಭರತದ ಮಟ್ಟಿಗೆ ಸೆಕ್ಯುಲರಿಸಂ ಎಂದರೆ ಧರ್ಮನಿರಪೇಕ್ಷತೆ, ಜಾತ್ಯತೀತತೆ ಮತ್ತು ಕೋಮು ಸೌಹರ್ದತೆ. ಇಂದು ಇಡೀ ಜಗತ್ತೇ ಒಂದು ಗ್ರಾಮವಾಗಿದೆ. ಯಾವುದೇ ದೇಶಕ್ಕೆ ಒಂದೇ ಒಂದು ಧರ್ಮ ಎಂದು ಹೇಳಲಾಗದು. ರಷ್ಯಾದಲ್ಲಿ ವರ್ಷಗಟ್ಟಲೆ ಕಮ್ಯೂನಿಜಂ ಮೆರೆದಾಡಿದರೂ ಅಲ್ಲಿ ಕ್ರಿಶ್ಚಿಯನ್ ಧರ್ಮವೂ ಇದೆ, ಮುಸ್ಲಿಂ ಜನಾಂಗವೂ ಇದೆ. ಪಾಕಿಸ್ತಾನ ಮತ್ತು ಬಂಗ್ಲಾದೇಶಗಳಲ್ಲಿ ಎಷ್ಟೇ ಮತಾಂತರಗಳ ಒತ್ತಡವಿದ್ದರೂ ಹಿಂದೂ ಸಮುದಾಯ ಇದ್ದೇ ಇದೆ. ತಾಲಿಬಾನಗಳು ಎಷ್ಟೇ ಅಟ್ಟಹಾಸ ಮೆರೆದರೂ ಪಾಕ್ ಆಕ್ರಮಿತ ಕಾಶ್ಮೀರದಲ್ಲಿ ಹಿಂದೂಗಳ ಸಂಖ್ಯೆ ಗಣನೀಯವಾಗಿಯೇ ಇದೆ.



ಇಂದಿನ ಕಾಲಕ್ಕೆ ತಕ್ಕಂತೆ ಸೆಕ್ಯುಲರಿಸಂ ಎಂದರೆ ಧರ್ಮ ಸಹಿಷ್ಣುತೆ. ಅಂದರೆ ಎಲ್ಲ ಧರ್ಮಗಳನ್ನೂ ಎಲ್ಲರೂ ಗೌರವಿಸಬೇಕು. ಅವರ ಧರ್ಮಾಚರಣೆ ಅವರ ಮನೆಗೆ, ಅವರ ಕುಟುಂಬಕ್ಕೆ, ಅವರ ಸಮಾಜಕ್ಕೆ ಸೀಮಿತವಾಗಿರಲಿ. ಅವರ ಧರ್ಮ, ಅವರ ನಂಬುಗೆ ಅವರವರಿಗೆ ಸೀಮಿತವಾಗಿರಲಿ. ಮನೆಯಿಂದ ಹೊರಬಂದಾಗ, ಅವರು ಯಾವುದೇ ದೇಶ, ಭಾಷೆ, ಜಾತಿ, ಜನಾಂಗವಾಗಿರಲಿ, ಅವರು ಜೀವಿಸುತ್ತಿರುವ ದೇಶದ ನಾಗರೀಕರಾಗಿ ಬಾಳು-ಬದುಕಲು ಕಲಿತರೆ ಚೆನ್ನ

ಕಾಲಕ್ಕೆ ತಕ್ಕಂತೆ ಕಾಲಧರ್ಮಕ್ಕೆ ತಕ್ಕಂತೆ ಸೆಕ್ಯುಳರಿಸಂನ ವ್ಯಾಖ್ಯೆಯನ್ನು ಬದಲಾಯಿಸಿ ಜನಸ್ನೇಹಿ-ಲೋಕಸ್ನೇಹಿಯನ್ನಾಗಿ ಮಾಡಬೇಕಿದೆ.

**–ಎಂ. ಸುದರ್ಶನರಾಜ, ಧಾರವಾಡ**

**ನಮ್ಮ ಪತ್ರಿಕೆಗೆ ಚಂದಾ ತುಂಬಲು ಬ್ಯಾಂಕ್ ಅಕೌಂಟ್ ವಿವರ**
ಶಿವಮೊಗ್ಗದ ಸ್ಟೇಟ್ ಬ್ಯಾಂಕ್ ಆಫ್ ಮೈಸೂರ್‌ನ(SBMY 0040444) ವಿನೋಬನಗರ ಶಾಖೆಯ ಚಾಲ್ತಿ ಖಾತೆ ಸಂಖ್ಯೆ: 64110358330. ಚಂದಾ ಮೊತ್ತ ಕಳಿಸಿದ ಕೂಡಲೇ ವಿವರ ದೂರವಾಣಿ ಕರೆ ಅಥವಾ ಸಂದೇಶದ ಮೂಲಕ ನಮಗೆ ತಿಳಿಸಬೇಕಾಗಿ ಕೋರಿಕೆ-ಸಂ

**ದ. ಆಫ್ರಿಕಾದ ಸ್ವಾತಂತ್ರ್ಯ ಹೋರಾಟಗಾರ ಹಾಗೂ ಗಾಂಧಿವಾದಿ ನೆಲ್ಸನ್ ಮಂಡೆಲಾ ಹಾಗೂ ನಮ್ಮವರೇ ಆದ ಕೂಳೆ ಬೇಸಾಯ ಪದ್ಧತಿಯ ಮೂಲಕ ಪರ್ಯಾಯ ಕೃಷಿ ಪದ್ಧತಿಯನ್ನು ಪರಿಚಯಿಸಿದ್ದ ಶಿವಮೊಗ್ಗದ ಹಿರಿಯ ರೈತರಾದ ಡಿ.ಆರ್. ಪ್ರಫುಲ್ಲಚಂದ್ರ ಅವರ ನಿಧನಕ್ಕೆ ಪತ್ರಿಕೆ ತೀವ್ರ ಸಂತಾಪ ಸೂಚಿಸುತ್ತದೆ.**–ಸಂಪಾದಕ

## ಜಿಎಸ್ಸೆಸ್‌ಗೆ ನಮ್ಮ ಶ್ರದ್ಧಾಂಜಲಿ



ಕನ್ನಡ ಸಾರಸ್ವತ ಲೋಕಕ್ಕೆ ಜಿಎಸ್ಸೆಸ್ ಎಂದೇ ಪರಿಚಿತರಾಗಿದ್ದ ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪನವರು ತಮ್ಮ ೮೭ನೇ ವಯಸ್ಸಿನಲ್ಲಿ ನಿಧನರಾಗಿದ್ದಾರೆ. ಶ್ರೇಷ್ಠ ಕವಿಯಷ್ಟೇ ಅಲ್ಲದೆ, ಶ್ರೇಷ್ಠ ಅಧ್ಯಾಪಕ, ವಿಮರ್ಶಕ, ಸಾಹಿತ್ಯ ಮೀಮಾಂಸಕ, ಸಾಹಿತ್ಯ ಆಡಳಿತಗಾರರಾಗಿ ಸಾಮಾಜಿಕ ಬದ್ಧತೆಯುಳ್ಳ ಸಾಂಸ್ಕೃತಿಕ ನಾಯಕರಾಗಿದ್ದ ಜಿಎಸ್ಸೆಸ್ ಕುವೆಂಪು ನಂತರ ಕನ್ನಡ ಸಾಹಿತ್ಯ-ಸಂಸ್ಕೃತಿ ಲೋಕದ ಸಾಕ್ಷಿ ಪ್ರಜ್ಞೆಯಾಗಿ ಅದರ ರೂಹುಗಳನ್ನು ರೂಪಿಸಿದವರು. ಅವರ ನಿಧನದಿಂದ ಕನ್ನಡ ಸಾರಸ್ವತ ಲೋಕ ತನ್ನ ಗೌರವಾನ್ವಿತ ಯಜಮಾನರನ್ನು ಕಳೆದುಕೊಂಡು ನಿಜವಾಗಿ ಬಡವಾಗಿದೆ. ಅವರ ನೆನಪಿನಲ್ಲಿ ಅವರ ಗೌರವ ಗ್ರಂಥ 'ಹಣತೆ'ಯಿಂದಾಯ್ದ(೨೦೦!) ಲೇಕನವೊಂದನ್ನು ಇಲ್ಲಿ ಪ್ರಕಟಿಸುತ್ತಿದ್ದೇವೆ-ಸಂಪಾದಕ

## ತಲೆಮಾರು-ವಿಚಾರಗಳನ್ನು ಬೆಸೆದ ಅಪೂರ್ವ ಚೇತನ: ಜಿ.ಎಸ್.ಎಸ್

**ನಾ** ಕಂಡ ಜಿಎಸ್‌ಎಸ್ ಯಾವಾಗಲೂ ಶ್ವೇತ ಶುಭ್ರ ಉಡುಪು ಮತ್ತು ನಿರ್ಮಲ ವ್ಯಕ್ತಿತ್ವದವರು. ಅಂತರಂಗ ಮತ್ತು ಬಹಿರಂಗ-ಎರಡೂ ಒಂದಾಗಿರುವ ಅವರ ನಡೆ ನುಡಿಯ ಪ್ರಭಾವದ ಪರಿಧಿ ಎಷ್ಟೊಂದು ಮೋಹಕ, ಚುಂಬಕ ಎಂದರೆ-ಸಾಹಿತ್ಯವಲಯದ ಸಹೃದಯಿಯೊಬ್ಬ ಅದರಿಂದ ವಂಚಿತನಾದರೆ ಕಿಂಚಿತ್ತಾದರೂ ಏನನ್ನೋ ಕಳೆದುಕೊಂಡಂತೆ ಎಂದು ಹೇಳುವಷ್ಟು. ಕಾರಣ ಇಷ್ಟೆ: ಯಾವುದೇ ಸಮಕಾಲೀನ ಸಾಹಿತ್ಯದ ಪ್ರಭಾವ, ಚಳುವಳಿ, ಪಂಥ, ಪ್ರಭಾವಗಳನ್ನು ಪ್ರೀತಿಯಿಂದ ಸ್ವೀಕರಿಸಿ ಹುಡುಗರನ್ನು ದೊಡ್ಡವರನ್ನಾಗಿ ಬೆಳೆಸುವ ಅವರ ಹಿರಿಯ ಗುಣ.

ನಾನು ಅವರನ್ನು ಮೊದಲ ಬಾರಿ ಕಂಡದ್ದು ೧೯೭೪ ರಲ್ಲಿ ಲಂಕೇಶರೊಟ್ಟಿಗೆ, ಅವರ ಮನೆಯಲ್ಲಿ. ೩-೪ ಕಥೆಗಳಷ್ಟನ್ನೇ ಬರೆದಿದ್ದ ನನ್ನನ್ನು ಪ್ರೀತಿಯಿಂದ ಮಾತನಾಡಿಸಿ, ಬೆನ್ನು ತಟ್ಟಿದ್ದರು. ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ವಿಭಾಗದಲ್ಲಿ ಸಾಹಿತ್ಯ-ಸಂಸ್ಕೃತಿಗಳನ್ನು ಹೊಸ ಹೊಸ ನೆಲೆಗಳಲ್ಲಿ ನೋಡುವ ಅನೇಕ ವಿಚಾರ ಸಂಕಿರಣಗಳನ್ನು ಏರ್ಪಡಿಸಿ 'ತಲೆಮಾರು' ಕಟ್ಟಿದ ಆ ದಿನಗಳಲ್ಲಿ ಅವರನ್ನು ಅಲ್ಲಿ ಇಲ್ಲಿ ಗಮನಿಸುತ್ತಾ ಅವರ ಕವಿತೆಗಳ ಸರಳ ಸಹಜ ಮುಗ್ಧ ಗುಣವನ್ನು ನಾನು ನಿಬ್ಬೆರಗಾಗಿ ಗಮನಿಸುತ್ತಾ ಓದಿದೆ. ಪ್ರಭಾವಿತನಾಗಿಲ್ಲವೆಂದು ಹೇಳುವ ಧೈರ್ಯವಾದರೂ ನನಗೆ ಎಲ್ಲಿದೆ?

ಶಿವರುದ್ರಪ್ಪನವರನ್ನು ನಾನು ಮುಂದೆ ಅನೇಕ ಬಾರಿ ಕಾಣುವಾಗಲೆಲ್ಲ ಗೆಳೆಯ ಡಿ.ಎಸ್. ನಾಗಭೂಷಣ್ ಜೊತೆಗಿದ್ದರು. ೧೯೮೫ರಲ್ಲಿ ಭದ್ರಾವತಿ ಆಕಾಶವಾಣಿಯಲ್ಲಿದ್ದ ನಾಗಭೂಷಣ್‌ರನ್ನು ಕಾಣಲು ಅವರು ಬಂದಿದ್ದರು. ಅಂದು ಡಿ.ಎಸ್.ಎನ್. ಮನೆಯಲ್ಲಿ ಪಂಚಾಕ್ಷರಿ ಗವಾಯಿಗಳಿಂದ ಭಾವಗೀತೆಗಳ ಗಾಯನ. ಜಿಎಸ್‌ಎಸ್ ಗಾಯನ ಆನಂದಿಸಿದ ದೃಶ್ಯ-ಧ್ಯಾನಿಸಿ, ತಲೆದೂಗಿ, ತಲ್ಲೀನರಾಗಿ – ನನಗೆ ಮರೆಯಲು ಸಾಧ್ಯವಾಗಿಲ್ಲ. ತಮ್ಮ ಭಾವಗೀತೆಗಳನ್ನೇ ಹಾಡುತ್ತಿದ್ದಾಗ ಕುವೆಂಪು, ಬೇಂದ್ರೆ ಗೀತೆಗಳನ್ನು ಹಾಡಲು ಸೂಚಿಸುತ್ತಿದ್ದರು. ೧೯೯೯ ರಲ್ಲಿ ಮತ್ತೊಮ್ಮೆ ಜಿಎಸ್‌ಎಸ್ ಅಕಾಡೆಮಿ ಅಧ್ಯಕ್ಷರಾಗಿದ್ದಾಗ ಅವರ ಕಛೇರಿಗೆ ಹೋಗಿದ್ದೆ. ಶೂದ್ರದಲ್ಲಿ ಜಿಎಸ್‌ಎಸ್ ಕುರಿತು ಒಂದು ಲೇಖನ ಬರೆದಿದ್ದೆ. ನಾಗಭೂಷಣ್ ಅದನ್ನು ಅವರ ಗಮನಕ್ಕೆ ತಂದರು. ನಾನು ಸುಮ್ಮನಿದ್ದೆ. ಹೇಳಿದರು, 'ಅದು ಹಾಗಲ್ಲ; ನನ್ನ ಕವಿತೆಗಳನ್ನು ಹೀಗೆ ನೋಡಬೇಕೆಂದು ನಾನು ಹೇಳಲಾರೆ. ಆದರೆ ನೀವು ಇನ್ನೊಂದು ದೃಷ್ಟಿಯಿಂದ ನೋಡಬೇಕಿತ್ತು'. ಪೆಚ್ಚಾದರೂ ನಾನು ಒಪ್ಪಿಕೊಂಡೆ. ಅವರ ಪಾರದರ್ಶಕ ಗುಣವೂ ತೀಕ್ಷ್ಣವಾದುದ್ದು. ಆದರೆ ಕಹಿಯಿಲ್ಲದ್ದು. ಹಾಗಾಗಿಯೇ ಬಹುಶಃ ಅವರು ಬೆಂಗಳೂರು ವಿ.ವಿ.ದ ಕನ್ನಡ ಅಧ್ಯಯನ ಕೇಂದ್ರವನ್ನು ಸಾಹಿತ್ಯದ ಒಂದು ದೊಡ್ಡ ಸೃಜನಶೀಲ ಕೇಂದ್ರವನ್ನಾಗಿ ಕಟ್ಟಲು ಸಾಧ್ಯವಾದದ್ದು.

ಶಿವಮೊಗ್ಗದ ಅಕ್ಕಮಹಾದೇವಿ ಮಂದಿರದಲ್ಲಿ ಚಿಕ್ಕ ಸಾಹಿತ್ಯ ಸಭೆ ನಡೆದಿತ್ತು. ಅವರನ್ನು ಅಲ್ಲಿ ನಾಲ್ಕಾರು ಬಾರಿ ಸಮನ್ವಯ ಕವಿ ಎಂದು ಗುರ್ತಿಸಿದಾಗ ಸ್ವಲ್ಪ ಸಿಡಿಮಿಡಿಗೊಂಡರು. "ನಾನು ಸಮನ್ವಯ ಕವಿಯಲ್ಲ, ಕವಿ. ಸಾಹಿತ್ಯದಲ್ಲಿ ಸಮನ್ವಯ ಇಲ್ಲವೇ ಇಲ್ಲ. ಸುಮ್ಮನೆ ನನಗೆ ಹಚ್ಚಿರುವ ಈ ಲೇಬಲ್ ಇಷ್ಟವಿಲ್ಲ" ಎಂದು ಗುಡುಗಿದರು. ಸಮನ್ವಯದ ಮಾತು ಮುದುರಿ ಬೇರೆ ದಿಕ್ಕು ಹಿಡಿಯಿತು. ಅವರ ಮುಖ ನೋಡಿದೆ. ಮೋಡ ಚದುರಿದ ಆಗಸದಂತೆ ಮತ್ತೆ ಶಾಂತವಾಗಿತ್ತು.

ಭದ್ರಾವತಿಗೆ ಒಮ್ಮೆ ಜಿಎಸ್‌ಎಸ್ ಪ್ರೊ॥ ಬಿ.ಕೃಷ್ಣಪ್ಪ ನವರನ್ನು ನೋಡಲು ಬಂದಿದ್ದರು. ಕೃಷ್ಣಪ್ಪ ನವರು ಇರಲಿಲ್ಲ. ನಾನು ಸರ್.ಎಂ.ವಿ. ಕಲಾ ಕಾಲೇಜಿನಲ್ಲಿ ಸಾಹಿತ್ಯ ಗೋಷ್ಠಿ ಸಂಚಾಲಕ. ರಣರಣ ಬಿಸಿಲು. ದಣಿದಿದ್ದರು, 'ನಮ್ಮ ಹುಡುಗರಿಗೆ ಒಂದಿಷ್ಟು ಮಾತಾಡಿ' ಅಂತ ಕೇಳಿಕೊಂಡೆ. 'ಆಗಲಪ್ಪ' ಅಂದರು. ಕಲಾಮಂದಿರ ಕಿಕ್ಕಿರಿದು ತುಂಬಿತು, ಮೈಕ್ ಇರಲಿಲ್ಲ. ಭಾರತೀಯ ಕಾವ್ಯ ಮೀಮಾಂಸೆ-ಪಾಶ್ಚತ್ಯ ಕಾವ್ಯ ಮೀಮಾಂಸೆ ಇವೆರಡರ ಸಾರದ ನೆರಳಿನಲ್ಲಿ ಬೆಳೆದು ಅರಳಿರುವ ಕನ್ನಡ ಕಾವ್ಯ ಪರಂಪರೆ ಕುರಿತು ಒಂದೂವರೆ ತಾಸು ನಿರರ್ಗಳ ಭಾಷಣ. ಹುಡುಗರು ಅಲುಗಾಡಲಿಲ್ಲ, ಯಾತಕ್ಕೋ ಬಂದ ಅವರ ಬಳಿ ಒಂದು ಚಿಕ್ಕ ಚೀಟಿ ತುಂಡಿನ ಟಿಪ್ಪಣಿ ಕೂಡಾ ಇರಲಿಲ್ಲ! ಅಧ್ಯಾಪಕನಾದ ನಾನು ಎಷ್ಟೋ ಬಾರಿ ಆ ವಿದ್ವತ್ತನ್ನು ನಾಚಿಕೆಯಿಂದ ನೆನಪಿಸಿಕೊಂಡಿದ್ದೇನೆ. ಕಾವ್ಯ ಮೀಮಾಂಸೆ ಕುರಿತಂತೆ ನಾನು ಇನ್ನೆಲ್ಲೂ ಅಂತಹ ನಿರರ್ಗಳ ಮಾತುಗಳನ್ನು ಕೇಳುವುದಕ್ಕೆ ಸಾಧ್ಯವಾಗಿಲ್ಲ. ಐಚ್ಚಿಕ ಕನ್ನಡದ ಹುಡುಗರಿಗೆ ತೀನಂಶ್ರೀಯವರ 'ಭಾರತೀಯ ಕಾವ್ಯ ಮೀಮಾಂಸೆ' ಬಿಟ್ಟರೆ ಬೇರೆ ಯಾವ ಕೃತಿ ಇದೆ ಎಂದು ಹೇಳುತ್ತಿದ್ದ ಅಧ್ಯಾಪಕರು ಈಗ ಮಾತು ಬದಲಿಸಬೇಕಾಗಿದೆ. ಜಿಎಸ್‌ಎಸ್ ಅವರ ಕಾವ್ಯಾರ್ಥ ಚಿಂತನ ಓದಲು ಮರೆತೀರಿ- ಎಂದು ಹೇಳಲೇ ಬೇಕಾಗಿದೆ. ಪರಂಪರೆಗೆ ಜಿಎಸ್‌ಎಸ್ ಕೊಡುಗೆ ಈ ತೆರನಾದದ್ದು.

ಶಿವಮೊಗ್ಗದ 'ಆಸಕ್ತಿ' ಬಳಗ ಎರಡು ವರ್ಷದ ಹಿಂದೆ ಜಿಎಸ್‌ಎಸ್‌ಗೆ ಸನ್ಮಾನ ಮತ್ತು ವಿಚಾರ ಸಂಕಿರಣವನ್ನು ಆಯೋಜಿಸಿ ಆಹ್ವಾನಿಸಿದ್ದರು. ಆಗ ಭದ್ರಾವತಿಯಲ್ಲಿದ್ದ ಮಿತ್ರ ನಾಗಭೂಷಣ್‌ರ ಮನೆಗೆ ಅವರನ್ನು ನೋಡಲು ಬಂದಿದ್ದರು. ಪುನಃ ನಾನು ಅವರನ್ನು ಆಹ್ವಾನಿಸಿ ನಮ್ಮ ಹುಡುಗರಿಗೆ ಮಾತನಾಡಿ ಎಂದು ಕಾಲೇಜಿಗೆ ಕರೆದುಕೊಂಡು ಬಂದೆ. ನೆನಪಿಗೆ ಒಂದು ಹಿತ್ತಾಳೆ ಕರಂಡವನ್ನು ಕೊಟ್ಟಿದ್ದೆವು. ಅದನ್ನು ಬೆಂಗಳೂರಿಗೆ ಒಯ್ಯಲಾರದೆ 'ಇದನ್ನು ನಾಗಭೂಷಣ್‌ಗೆ ಬಿಟ್ಟು ಹೋಗುತ್ತೇನೆ. ನಿಮ್ಮ ಆಕ್ಷೇಪಣೆ ಇಲ್ಲ ತಾನೇ' ಎಂದು ನಕ್ಕರು. ನಾನೂ ನಕ್ಕುಬಿಟ್ಟೆ. ಹೀಗೆ ತಮ್ಮ ನೆನಪುಗಳನ್ನು ಆತ್ಮೀಯರಿಗೇ ಬಿಟ್ಟು ಹೋಗುವುದು ಅವರ ಜಾಯಮಾನ:.

ಅವರ ಸಾರ್ಥಕ ಬದುಕಿನುದ್ದಕ್ಕೂ ಹೀಗೆ ಬಿಟ್ಟು ಹೋಗಿರುವುದನ್ನು; ಕೊಟ್ಟು ಹೋಗಿರುವುದನ್ನು; ಪ್ರೀತಿ ತುಂಬಿ ಹರಸಿ ಹೋಗಿರುವುದನ್ನು ನಾವು ಎಷ್ಟು ಉಳಿಸಿಕೊಂಡು ನಮ್ಮ ಮುಂದಿನವರಿಗೆ ಎಷ್ಟು ಬಿಟ್ಟು ಹೋಗುತ್ತೇವೆ? ನೆನಪಾದಾಗ ಗಾಬರಿಯಾಗುತ್ತದೆ. ಯಾಕೆಂದರೆ ಅಂತಹ ಹರಸುವ ಚೈತನ್ಯಗಳು ಮುಂದಿನ ತಲೆಮಾರಿಗೆ ಇವೆಯೇ? ಪರಂಪರೆ ಉಳಿಯುತ್ತದೆ, ನಿಜ. ಅದು ಯಾವ ಪರಂಪರೆ? ಜಿಎಸ್‌ಎಸ್ ಪರಂಪರೆಯೇ ತಮ್ಮ ನಡುವಿನ ತಲೆಮಾರು-ವಿಚಾರಗಳನ್ನು ಬೆಸುಗೆ ಹಾಕುವ ಕೊಂಡಿ.

**-ಪ್ರೊ. ಎಂ. ಚಂದ್ರಶೇಖರಯ್ಯ**

## ಸಾಹಿತ್ಯ–ಸಂಸ್ಕೃತಿ–ನಾಟಕ ಇತ್ಯಾದಿ

# ರಂಗಾಯಣದ ಎರಡು ವಿಶಿಷ್ಟ ಪ್ರಯೋಗಳು





**ಬೆಳ್ಳಿ** ಹಬ್ಬವನ್ನು ಆಚರಿಸಿಕೊಳ್ಳುತ್ತಿರುವ ರಂಗಾಯಣ, ಅದರ ಅಂಗವಾಗಿ ಇತ್ತೀಚೆಗೆ ಶಿವಮೊಗ್ಗದಲ್ಲಿ ತನ್ನ ನಾಲ್ಕು ಪ್ರಯೋಗಳನ್ನು ಪ್ರದರ್ಶಿಸಿತು. ಅವುಗಳಲ್ಲಿ ಎರಡು ತಮ್ಮದೇ ವಿಶಿಷ್ಟ ಮತ್ತು ಅನನ್ಯ ಕಾರಣಗಳಿಂದಾಗಿ ಪ್ರೇಕ್ಷಕರ ವಿಶೇಷ ಗಮನ ಸೆಳೆದವು.

ಮೊದಲನೆಯದು ಬೆಳ್ಳಾವೆ ನರಹರಿ ಶಾಸ್ತ್ರಿ ವಿರಚಿತ 'ಸದಾರಮೆ' ಎಂಬ ಕಂಪನ ನಾಟಕ. ಅಂದೇ ನಮ್ಮ ರಾಮಾಯಣ–ಮಹಾಭಾರತಗಳನ್ನು ವಿರಚಿಸಿ ಅವನ್ನು ತಮ್ಮದೇ ರೀತಿಯಲ್ಲಿ ಸಮಕಾಲೀಣಗೊಳಿಸುವ ಸಾಹಸ ಮಾಡಿ ನಮ್ಮ ಇವೊತ್ತಿನ ಪೋಸ್ಟ್ ಮಾಡ್ರನಿಸ್ಟರುಗಳಿಗಿಂತ ಹೆಚ್ಚು ಪೋಸ್ಟ್ ಮಾಡ್ರನಿಸ್ಟರಾಗಿದ್ದ ವೀರಣ್ಣನವರು ಬೆಳ್ಳಾವೆಯವರಿಂದ ಈ ಜಾನಪದ–ಸಾಮಾಜಿಕ ನಾಟಕವನ್ನು ಬರೆಸಿ ಕನ್ನಡ ರಂಗಭೂಮಿಯಲ್ಲಿ ಮಿತಿಯಿಲ್ಲದ ಮನರಂಜನೆಯ ಒಂದು ದೊಡ್ಡ ಕ್ರಾಂತಿಯನ್ನೇ ಮಾಡಿದ್ದರೆಂದು ಹೇಳಬಹುದು: ಶೀಟಿ ಹೊಡೆದೊಡನೆ ತೆರೆ ಮೇಲೆದ್ದು ಝುಗಮಗಿಸುವ ಬೆಳಕಿನಲ್ಲಿ ಬದಲಾಗುತ್ತಾ ಹೋಗುವ ವರ್ಣಮಯ ಸೀನರಿಗಳ ನಡುವೆ ಕಾಲಿಲ್ಲದೆ ಅರಮನೆ–ಶೆಟ್ಟರ ಮನೆ, ಕಾಡು–ಕಳ್ಳ  ಎನ್ನದೆ ಓಡುವ ಈ ಕಥೆ ಸಮೃದ್ಧ ಸಂಗೀತ, ನೃತ್ಯ, ಹಾಸ್ಯ, ಶೃಂಗಾರಗಳೊಂದಿಗೆ ಒಂದು ನೆಲೆಯಲ್ಲಿ ಸ್ತ್ರೀ ಸಬಲೀಕರಣದ ಹೊಸ ಕಥೆಯನ್ನೂ ಹೇಳುವ ಸಾಹಸ ಮಾಡುತ್ತದೆ! ಇಲ್ಲಿ ಸೃಷ್ಟಿಸಲಾಗಿರುವ ಪ್ರಳಯಾಂತಕ ಕಳ್ಳನ ಪಾತ್ರ ಬಹುಶಃ ಭಾರತೀಯ ರಂಗಭೂಮಿಯಲ್ಲೇ ಸಾಟಿಯಿಲ್ಲದ್ದು!

ಕನ್ನಡ ರಂಗಭೂಮಿಯ  ಪರಂಪರೆಯ ನೆನಪಿನಲ್ಲಿ ತಯಾರಾಗಿರುವ ಈ ತುಂಬು ಮನರಂಜನೆಯ ಪ್ರಯೋಗಕ್ಕಾಗಿ ರಂಗಾಯಣಕ್ಕೆ ಕೃತಜ್ಞತೆ ಸಲ್ಲಿಸಬೇಕಿದೆ. ಹಾಗೇ ಅದ್ಭುತ ಅಭಿನಯ ಪ್ರತಿಭೆಗೆ ಹೆಸರಾದ ಅದರ ನಟ–ನಟಿ ವರ್ಗದ ಗಾಯನ ಸಾಮರ್ಥ್ಯಕ್ಕೆ ಕೂಡ. ವಿಶೇವಾಗಿ ರಸಿಕ ಕಲಹಂಸನ ಪಾತ್ರದಲ್ಲಿನ ಪ್ರಶಾಂತ್ ಹಿರೇಮಠರಿಗೆ. ಆದರೆ ಮೂಲಕ್ಕೆ ಭಂಗ ತರುವ ರೀತಿಯಲ್ಲಿ ಅಗ್ಗದ ನೃತ್ಯದ ಸೇರ್ಪಡೆ, ಒಂದು ಸಮತೋಲನದಲ್ಲಿರುವ ಹಾಸ್ಯವನ್ನು ವಿಪರೀತಕ್ಕೊಯ್ಯುವ ಹೊಸ ಹಾಸ್ಯ(ಹಾಸ್ಯಾಸ್ಪದ?) ಪಾತ್ರವೊಂದರ ಸೃಷ್ಟಿ ಹಾಗೂ ನಾಟಕಕ್ಕೆ ಸಮಾಕಾಲೀನ ರಾಜಕಾರಣದ 'ಟಚ್' ಕೊಡುವ ಖಯಾಲಿಯಲ್ಲಿ ಸೇರಿಸಲಾಗಿರುವ 'ಜೋಕು'ಗಳು ರಂಗಾಯಣದ ಘನತೆಗೆ ಸಲ್ಲದವು.

ಇಷ್ಟಾದರೂ ಈ ನಾಟಕವನ್ನು ನಿರ್ದೇಶಿಸಿ ಸಂಗೀತವನ್ನೂ ಒದಗಿಸಿರುವ ಗುಬ್ಬಿ ಕಂಪನಿಯವರೇ ಆದ ವೈ.ಎಂ. ಪುಟ್ಟಣ್ಣಯ್ಯನವರ ಪ್ರಯತ್ನ ಬಹುವಾಗಿ ಸಾರ್ಥಕವಾಗಿದೆ ಎಂದೇ ಹೇಳಬಹುದು. ಆದರೆ ಒಂದು ಸಲಹೆ: ಈ ಪ್ರಯೋಗ ಹೊಸ ತಲೆಮಾರಿನ ಪ್ರೇಕ್ಷಕರ ನಡುವೆಯೂ ಯಶಸ್ವಿಯಾಗಬೇಕಾದರೆ ಇಂದಿಗೆ ವಿಪರೀತವೆನ್ನಿಸುವ ಹಾಡುಗಳ ಸಂಖ್ಯೆಗೆ ಕತ್ತರಿ ಹಾಕಬೇಕು.

ಇನ್ನು ಎರಡನೆಯ ಪ್ರಯೋಗ ಇದಕ್ಕೆ ಸಂಪೂರ್ಣ ಸಂವಾದಿಯಾದದ್ದು: ಒಳಗಿನ ಸತ್ವ ಮತ್ತು ಹೊರಗಿನ ಅಭಿವ್ಯಕ್ತಿ ರೂಪ ಎರಡರಲ್ಲೂ. ಇದು ಮಹೇಶ ಎಲ್‌ಕುಂಚವಾರ್ ಎಂಬುವವರು ಮರಾಠಿಯಲ್ಲಿ ಬರೆದಿರುವ ನಾಟಕವಂತೆ; ಮಾರುತಿ ಶಾನುಭಾಗ್ ಎಂಬುವವರು ಇದನ್ನು ಕನ್ನಡಕ್ಕೆ ತಂದಿದ್ದಾರಂತೆ. ಆದರೆ ಈ ನಾಟಕ ಈ ಎಲ್ಲ ತಾಂತ್ರಿಕ ವಿವರಗಳನ್ನೂ ಹೊಡೆದು ಹಾಕಿಕೊಂಡು ನಿಮ್ಮ ಹೃದಯಕ್ಕೇ ನೇರ ಲಗ್ಗೆ ಹಾಕುತ್ತದೆ. ಅದು ಅಂತಿಂಥ ಲಗ್ಗೆಯಲ್ಲ. ನಾಟಕ ಮುಗಿಯುವುದರೊಳಗೆ ನಿಮ್ಮ ಕಣ್ಣೀರು ನಿಮ್ಮೊಳಗೇ ಬತ್ತಿ ಹೋಗಿರುತ್ತದೆ; ಇಂದಿನ ಹೊಸ ಸುಖಗಳ ಬದುಕು ಬೇಡುತ್ತಿರುವ ಬಲಿಗಳ ಅಸಹಾಯಕತೆಯನ್ನು ಒಳಹೊಕ್ಕು ನೋಡಿದ ಅನುಭವದಲ್ಲಿ ನಿಮ್ಮನ್ನು ತೀವ್ರ ವಿಷಣ್ಣತೆ ಆವರಿಸಿರುತ್ತದೆ. ಅದೂ ಯಾವ ವಿಚಾರ–ಉಪದೇಶಗಳ ಅಥವಾ  ಯಾವುದೇ ವಿಶೇಷ ರಂಗ ತಂತ್ರಗಳ ಭಾರವಿಲ್ಲದೆ.

ಗೇಣಿ ರೈತರ  ದುಡಿಮೆಯ ಮೇಲೆ ಸುಖವಾಗಿ ಬದುಕುತ್ತಿದ್ದ ಬ್ರಾಹ್ಮಣ ಜಮೀನ್ದಾರಿ ಕುಟುಂಬವೊಂದು ಹೊರಗಿನಿಂದ ಮತ್ತು ತನಗೇ ಗೊತ್ತಿಲ್ಲದಂತೆ ಒಳಗನಿಂದಲೂ ನುಗ್ಗಿದ ಆಧುನಿಕ ಬದುಕಿನ ಒತ್ತಡ ಮತ್ತು ಸೆಳೆತಗಳಿಗೆ ಸಿಕ್ಕಿ ಬಂಧನ ಮತ್ತು ಬಿಡುಗಡೆಗಳ ದ್ವಂದ್ವದಲ್ಲಿ ತೊಳಲಾಡುವ ಇಲ್ಲಿನ ಬದುಕಿನ ಚಿತ್ರ ಎಷ್ಟು ಸಾಮಾಜಿಕ ವಾಸ್ತವತೆಯಿಂದ ಕೂಡಿದೆಯೆಂದರೆ, ನಾಟಕ ಎಲ್ಲಿಯೋ ನಮಗೇ ಗೊತ್ತಿಲ್ಲದಂತೆ ಬ್ರಾಹ್ಮಣ ಕುಟುಂಬದ ಚೌಕಟ್ಟನ್ನು ಮೀರಿ ಅಲ್ಲಿ ನಾವು ನೋಡುತ್ತಿರುವುದು ನಮ್ಮ ಇಂದಿನ ಬದುಕನ್ನೇ ಎನ್ನಿಸಿಬಿಡುತ್ತದೆ. ನಾಲ್ಕು ತಲೆಮಾರುಗಳನ್ನೂ ಅವುಗಳು ನಂಬಿದ ಮೌಲ್ಯಗಳನ್ನೂ, ಕಟ್ಟಿಕೊಂಡ ಭವಿಷ್ಯದ ಆಶಯಗಳನ್ನೂ ಆ ತಲೆಮಾರುಗಳ ಜೀವಂತ ಪ್ರತಿನಿಧಿ ಪಾತ್ರಗಳ ಮೂಲಕ ಮುಖಾಮುಖಿಗೊಳಿಸುವ ಈ ನಾಟಕ ನಾವು ಇಂದು ಆಧುನಿಕವೆಂದು ಹೇಳಲಾಗುವ 'ಮೌಲ್ಯ'ಗಳ ಮರೆಯಲ್ಲಿ ರೂಪಿಸಿಕೊಳ್ಳುತ್ತಿರುವ ಬದುಕಿನ ಹೊಸ ಲಂಗರುಗಳ ತಾಳಿಕೆ–ಬಾಳಿಕೆಗಳ ಬಗ್ಗೆ ಪುನರಾಲೋಚಿಸುವಂತೆ ನಮಗೇ ಗೊತ್ತಾಗದಂತೆ ನಮ್ಮನ್ನು ಒತ್ತಾಯಿಸುತ್ತದೆ. ನಾಟಕವೊಂದು ಸಾರ್ಥಕವೆನ್ನಿಸಿಕೊಳ್ಳಲು ಇನ್ನೇನು ಬೇಕು?

ಆದರೆ ಇದೆಲ್ಲ ಸಾಧ್ಯವಾಗಿರುವುದು ಅಪವಾದವಿಲ್ಲದಂತೆ ಮತ್ತು ಹಿರಿ ಕಿರಿಯ ಪಾತ್ರ ಎನ್ನದೆ ಎಲ್ಲ ನಟರ ಅಪ್ರತಿಮ ಅಭಿನಯದಿಂದಾಗಿ. ವಿಶೇಷವಾಗಿ ಉಲ್ಲೇಖಿಸಬೇಕಾದದ್ದು ಕುಟುಂಬದ ಹಿರಿಯ ಸೊಸೆ ಪಾತ್ರ ವಹಿಸಿದ್ದ ಸರೋಜಾ ಹೆಗಡೆಯವರ ತುಂಬಿಯೂ ತುಳಕದಂತಿರುವ 'ಸೂಕ್ಷ್ಮ ಸಮತೋಲನದ ಭಾವಾಭಿನಯವನ್ನು. ಇನ್ನು ಇಂತಹ ನಾಟಕವನ್ನು ನಿರ್ದೇಶಿಸಲು ಎಂಟೆದೆಯೇ ಬೇಕು. ಪ್ರಮೀಳಾ ಬೇಂಗ್ರೆಯವರ ಆಳದ ಪ್ರತಿಭೆಯೇ ಅವರಿಗೆ ಆ ಎಂಟೆದೆಯನ್ನು ಒದಗಿಸಿದಂತಿದೆ. ಒಂದೇ ಅಂಕದಲ್ಲಿ ನಡೆಯುವ ಈ ನಾಟಕಕ್ಕೆ ಎಚ್,ಕೆ. ದ್ವಾರಕಾನಾಥ್ ವಿನ್ಯಾಸ ಮಾಡಿರುವ ಮುರುಕು ವಾಡೆಯ ರಂಗ ಸಜ್ಜಿಕೆ ನಾಟಕದ ಜೀವಂತ ಭಾಗವೇ ಆಗುವಷ್ಟು ಸಾವಯವಾಗಿದೆ. ಬರೀ ಒಂದೆರಡು ಲಾಟೀನು ದೀಪಗಳನ್ನು ಬಳಸಿ  ಹಗಲು–ರಾತ್ರಿಗಳ ಅನುಭವ ನಿರ್ಮಿಸಿರುವ ಬೆಳಕು ಸಂಯೋಜಕರ ಕುಶಲತೆಯಂತೂ ಅದ್ಭುತ.

ರಂಗಾಯಣಕ್ಕೆ ಅಭಿನಂದನೆಗಳು ಜೆನ್ನಿಗೆ ಶುಭಾಶಯಗಳು!!

**–ಡಿ.ಎಸ್. ನಾಗಭೂಷಣ**

## ಪುಸ್ತಕಾವಲೋಕನ

ಪು: **ಇಸ್ಲಾಂ: ಕೆಲವು ತಪ್ಪು ಗ್ರಹಿಕೆಗಳು** ಲೇ: **ಡಾ. ಅಸ್ಗರ್ ಅಲಿ ಎಂಜಿನಿಯರ್** ಕನ್ನಡಕ್ಕೆ: **ಹಸನ್ ನಯೀಂ ಸುರಕೋಡ್** ಪ್ರ: **ನವ ಕರ್ನಾಟಕ ಪಬ್ಲಿಕೇಷನ್ಸ್**, ಬೆಂಗಳೂರು ಪು: **೯೬** ಬೆಲೆ: **ರೂ.೬೦/–**

## ಇಸ್ಲಾಂ ಧರ್ಮ ಚರಿತ್ರೆಯ ಒಂದು ಪುನರ್ವಿಮರ್ಶೆ




ಇಸ್ಲಾಂ ಧರ್ಮಶಾಸ್ತ್ರದ ವಿದ್ವಾಂಸರೂ ಮತ್ತು ಪ್ರಗತಿಪರ ಚಿಂತಕರೂ ಆದ ದಿ. ಅಸ್ಗರ್ ಅಲಿ ಎಂಜಿನಿಯರ್ ಅವರ ಈ ಕೃತಿ ಮೇಲ್ನೋಟಕ್ಕೆ ಇಸ್ಲಾಂ ಬಗೆಗಿರುವ ಅನ್ಯ ಧರ್ಮೀಯರ ತಪ್ಪು ಕಲ್ಪನೆಗಳನ್ನು ನಿವಾರಿಸುವ ಪ್ರಯತ್ನವೆಂಬಂತೆ ತೋರುತ್ತದೆ. ಆದರೆ ಪವಿತ್ರ ಕುರ್‌ಆನ್ ಪ್ರತಿಪಾದಿಸುವ ಪ್ರಜಾಸತ್ತಾತ್ಮಕ, ವರ್ಗ ಹಾಗೂ ಲಿಂಗ ಸಮಾನತೆ, ಯುದ್ಧದ ನಿರಾಕರಣೆಯ ಆಶಯಗಳ ಕುರಿತಂತೆ ಮೌಲ್ವಿಗಳು ಪ್ರತಿಪಾದಿಸುವ ತಪ್ಪು ಗ್ರಹಿಕೆಯ ವಿರುದ್ಧ ಮಾತನಾಡುತ್ತದೆ.

ಈ ಕೃತಿಯಲ್ಲಿ ಒಟ್ಟು ೧೦ ಅಧ್ಯಾಯಗಳಿವೆ. ಮೊದಲನೇ ಅಧ್ಯಾಯದಲ್ಲಿ ಅಮೆರಿಕಾದ ಯುದ್ಧಕೋರ ನೀತಿ, ಇಸ್ಲಾಮೇತರ ದೇಶಗಳಲ್ಲಿ ನಡೆಯುತ್ತಿರುವ ಪ್ರಭುತ್ವದ ವಿರೋಧಿ ಹೋರಾಟಗಳ ಪ್ರಸ್ತಾಪವಿದೆ. 'ಕುರ್‌ಆನ್ ಎಲ್ಲ ಧರ್ಮಗಳು ಹಾಗೂ ಪ್ರವಾದಿಗಳನ್ನು ಅಲ್ಲಾಹನೇ ಕಳುಹಿಸಿರುವುದರಿಂದ ಮುಸ್ಲಿಮರು ಎಲ್ಲ ಧರ್ಮಗಳನ್ನು ಹಾಗೂ ಪ್ರವಾದಿಗಳನ್ನು ಗೌರವಿಸುವುದನ್ನು ಕಡ್ಡಾಯಗೊಳಿಸುತ್ತದೆ. ಇಂತಹ ಧರ್ಮ ಹೇಗೆ ಪ್ರಜಾಪ್ರಭುತ್ವ ವಿರೋಧಿ ಹಾಗೂ ಸ್ವಾತಂತ್ರ್ಯವಿರೋಧಿಯಾಗಬಲ್ಲದು? ಎಂದು ಕೇಳುವ ಲೇಖಕರು – ಇದು ಪಟ್ಟಭದ್ರ ಹಿತಾಸಕ್ತಿಗಳು ಸೃಷ್ಟಿಸಿದ ರಾಜಕೀಯ ಮಿಥ್' (ಪುಟ ೧೧) ಎಂದು ವಿವರಿಸುತ್ತಾರೆ.

ಪುರುಷರೊಂದಿಗೆ ಸ್ತ್ರೀಯರಿಗೆ ಕುರ್‌ಆನ್ ಕೊಡಮಾಡಿರುವ ಸರ್ವಸಮಾನ ಸ್ಥಾನಮಾನವನ್ನು ನೀಡಿಲ್ಲದಿರುವ ಕುರಿತು, ಈ ಸಂಬಂಧ ಮುಸ್ಲಿಂ ಮೌಲ್ವಿಗಳು ಅನುಸರಿಸುತ್ತಿರುವ ತಾರತಮ್ಯ ನೀತಿಯನ್ನು ಎರಡನೇ ಅಧ್ಯಾಯದಲ್ಲಿ ಪ್ರಸ್ತಾಪಿಸುವ ಲೇಖಕರು 'ತತ್ವಜ್ಞಾನ ಬೇರೆ., ವ್ಯವಹಾರ ಬೇರೆಯೇ?' ಎಂದು ಪ್ರಶ್ನಿಸುತ್ತಾರೆ. ಅಮೆರಿಕಾ ಒಂದೆಡೆ ಪ್ರಜಾಪ್ರಭುತ್ವದ ಮೌಲ್ಯಗಳ ಪರ ಮಾತನಾಡುತ್ತಾ, ಅದು ಹೇಗೆ ತನ್ನನ್ನು ಓಲೈಸುವ ಇಸ್ಲಾಮೀ ಪ್ರಭುತ್ವಗಳ ಪರ ಹಾಗೂ ಪ್ರಜಾಪ್ರಭುತ್ವದ ಆಶಯಗಳಿಗೆ ವಿರುದ್ಧವಾಗಿ ನಡೆದುಕೊಳ್ಳುತ್ತಿದೆ ಹಾಗೂ ಅಧಿಕಾರಸ್ಥ ವರ್ಗಗಳು ಏಕೆ ತತ್ವಜ್ಞಾನದ ಬೋಧನೆಗಳಿಗಿಂತ ಹೆಚ್ಚಾಗಿ ತಮ್ಮ ವಿಶೇಷಾಧಿಕಾರವನ್ನು ಮುಂದುವರಿಸಿಕೊಂಡು ಹೋಗುವುದಕ್ಕೆ ಒತ್ತುಕೊಡುತ್ತವೆ ಎಂಬುದನ್ನು ವಿವರಿಸುತ್ತಾರೆ.

'ಏಕೈಕ ಸಮುದಾಯ; ಒಂದು ಭಾವನಾತ್ಮಕ ಘೋಷಣೆ'– ಎಂಬ ಅಧ್ಯಾಯದಲ್ಲಿ ಕಳೆದ ಹದಿನಾಲ್ಕುನೂರು ವರ್ಷಗಳಿಂದ ನಾವು ಒಬ್ಬನೇ ಅಲ್ಲಾಹ್, ಒಬ್ಬನೇ ಪ್ರವಾದಿ ಹಾಗೂ ಒಂದೇ ಕುರ್‌ಆನ್, ಎಲ್ಲ ಮುಸ್ಲಿಮರೂ ಒಂದಾಗಿ ಒಂದೇ ಉಮ್ಮ (ಸಮುದಾಯ) ಬೇಕೆನ್ನುವ ಘೋಷಣೆಗೆ ವಿರುದ್ಧವಾಗಿ–ಸ್ವಭಾವತಃ ದಮನಕಾರಿ ಹಾಗೂ ನಿರಂಕುಶಪರವಾಗಿದ್ದ ಉಮ್ಮೆಯ ಸಾಮ್ರಾಜ್ಯ ಅಸ್ತಿತ್ವಕ್ಕೆ ಬಂದು ರೋಮ್ ಮಾದರಿಯ ಸಾಮ್ರಾಜ್ಯವೊಂದರ ಸ್ಥಾಪನೆಯಾದುದರ ಹಿಂದಿನ ರಾಜಕಾರಣವನ್ನು ಲೇಖಕರು ವಿವರಿಸುತ್ತಾರೆ.

ಇಸ್ಲಾಂ–ಏಕ ಸಂಸ್ಕೃತಿಯನ್ನು ಹೇರಲು ಹೊರಟಿರುವ ಕುರಿತು ನಾಲ್ಕನೇ ಅಧ್ಯಾಯದಲ್ಲಿ ಚರ್ಚಿಸುತ್ತಾ, ಅದು ವಾಸ್ತವವಾಗಿ ಭಾಷೆ, ಜನಾಂಗ ಹಾಗೂ ಧಾರ್ಮಿಕ ಬಹುತ್ವದ ಪರವಾದ ನಿಲುವುಗಳನ್ನು ಒಳಗೊಂಡಿರುವುದನ್ನು ಹಲವಾರು ಉಲ್ಲೇಖಗಳನ್ನು ನೀಡಿ ಆರೋಪವನ್ನು ನಿರಾಕರಿಸುತ್ತಾರೆ. ಇಸ್ಲಾಂ ಜಗತ್ತಿನಲ್ಲಿಯೇ ಇರುವ ಶಿಯಾ ಇಸ್ಲಾಂ, ಸುನ್ನಿ ಇಸ್ಲಾಂ, ಆಫ್ರಿಕಾದ ಹೌಸಾ ಇಸ್ಲಾಂ, ಲೆಬನಾನಿನ ಡ್ರೂಜ್ ಮುಸ್ಲಿಂ, ಅಹಮ್ಮದೀಯ ಮುಸ್ಲಿಂ, ಸೂಫಿ ಇಸ್ಲಾಮಿನ ವೈವಿಧ್ಯತೆಗಳನ್ನು ತೆರೆದಿಡುತ್ತಾರೆ. ಇಸ್ಲಾಂನ ಕ್ಷಿಪ್ರಗತಿಯ ಪ್ರಸಾರಕ್ಕೆ ಅದು ಅನುಸರಿಸಿದ ಯುದ್ಧ ನೀತಿಗಳೇ ಕಾರಣ ಎಂಬುದನ್ನು ಅಲ್ಲಗಳೆಯುತ್ತಾ ಅದು ಹುಟ್ಟಿದ ಕಾಲಘಟ್ಟದ ಸಾಮಾಜಿಕ, ರಾಜಕೀಯ ಅರಾಜಕತೆಯ ಹಿನ್ನೆಲೆಯಿಂದಾಗಿ ಹಾಗೂ ಇಸ್ಲಾಮಿನ ಸಮಾನತೆಯ ಭ್ರಾತೃತ್ವದ ಹಾಗೂ ನ್ಯಾಯಪರ ಮೌಲ್ಯಗಳಿಂದಾಗಿ ಅದು ಸಹಜವಾಗಿಯೇ ಹಬ್ಬಿತು ಎನ್ನುವ ಅಸ್ಗರಲಿಯವರು ಈ ಸಂಬಂಧದ ರಾಜಕೀಯ, ಐತಿಹಾಸಿಕ, ಆರ್ಥಿಕ ಹಾಗೂ ಸಮಾಜಶಾಸ್ತ್ರೀಯ ಹಿನ್ನೆಲೆಗಳನ್ನು ತೆರೆದಿಡುತ್ತಾರೆ.

ಮಧ್ಯಯುಗದಲ್ಲಿ ನಡೆದ ಧರ್ಮಯುದ್ಧಗಳ ಕಾರಣದಿಂದಾಗಿ ಶಾಂತಿ ಹಾಗೂ ಕರುಣೆಯ ಧರ್ಮವಾದ ಇಸ್ಲಾಂ ಇಂದು ಯುದ್ಧದ–ಜೆಹಾದಿಯ ಧರ್ಮವೆಂದು ಕಳಂಕಿತವಾಯಿತು ಎಂಬುದನ್ನು– 'ಇಸ್ಲಾಂನಲ್ಲಿ ಯುದ್ಧ ಹಾಗೂ ಶಾಂತಿಯ ಸಿದ್ಧಾಂತ' ಎಂಬ ಅಧ್ಯಾದಲ್ಲಿ ವಿವರಿಸಲಾಗಿದೆ.. ಮನಸ್ಸಿನ ಇತ್ಯಾತ್ಮಕ ವಿಚಾರಗಳ ವಿರುದ್ಧ, ವ್ಯಕ್ತಿಯ ಸ್ವಂತ ಬಯಕೆಗಳು ಹಾಗೂ ಅಧಿಕಾರದ ಲಾಲಸೆಯ ವಿರುದ್ಧ ಹೋರಾಡಬೇಕಾದ ಜೆಹಾದ್ ಪರಿಕಲ್ಪನೆಯನ್ನು ಹೇಗೆ ಕಾಲಾಂತರದಲ್ಲಿ ಪರಮತ ದ್ವೇಷವಾಗಿ, ಅನ್ಯಧರ್ಮೀಯರ ವಿರುದ್ಧದ ಹೋರಾಟವನ್ನಾಗಿ ಬೆಳೆಸಲಾಯಿತು ಎಂಬುದನ್ನು ಏಳನೇ ಅಧ್ಯಾಯದಲ್ಲಿ ಲೇಖಕರು ಚರ್ಚಿಸಿದ್ದಾರೆ. ಕರುಣೆ, ಶಾಂತಿ, ನ್ಯಾಯವೇ ಪ್ರಧಾನವಾಗಿರುವ ಪರಿಕಲ್ಪನೆಗಳನ್ನು ಮತ್ತೆ ಮತ್ತೆ ಸಾರುವ, ಪುರುಷನಷ್ಟೇ ಪ್ರಧಾನವಾಗಿ ಮಹಿಳೆಯರ ಹಕ್ಕು, ಸ್ವಾತಂತ್ರ್ಯಗಳ ಪರವಾದ ಕುರ್‌ಆನ್‌ನ ನಿಲುವುಗಳನ್ನು ಮುಸ್ಲಿಂ ದೈವಶಾಸ್ತ್ರಜ್ಞರು ಹೇಗೆ ಮತ್ತು ಏಕೆ ನಿರಾಕರಿಸುತ್ತಾ ಬಂದರು ಎಂಬುದನ್ನು ಅಸ್ಗರ್ ಅಲಿ ಕೊನೆಯ ಅಧ್ಯಾಯಗಳಲ್ಲಿ ಚರ್ಚಿಸಿದ್ದಾರೆ.

ಧಾರ್ಮಿಕ ನಾಯಕತ್ವವೊಂದನ್ನೇ ನೆಚ್ಚಿಕೊಂಡಿರುವ ಮುಸ್ಲಿಮರನ್ನು ಹೇಗೆ ದಿಕ್ಕು ತಪ್ಪಿಸಲಾಗುತ್ತಿದೆ, ಮುಸ್ಲಿಮರನ್ನು–ಮುಸ್ಲಿಂ–ಪುರೋಹಿತಶಾಹಿಗಳಿಂದ ಪಾರು ಮಾಡದೆ ಅವರ ಉದ್ಧಾರ ಸಾಧ್ಯವಿಲ್ಲ ಎಂಬುದನ್ನು ಈ ಕೃತಿ ನಿರ್ಭಿಡೆಯಿಂದ ಹೇಳುತ್ತದೆ. ಹೊರಗಿನವರ ಕಣ್ಣಿನಲ್ಲಿ ಇಸ್ಲಾಂ ತಪ್ಪು ಗ್ರಹಿಕೆಗೆ ಹೇಗೆ ಒಳಗಾಗಿದೆ ಎಂದು ಹೇಳುವುದಕ್ಕಿಂತ ಹೆಚ್ಚಾಗಿ ಮುಸ್ಲಿಂ ಧರ್ಮಶಾಸ್ತ್ರಜ್ಞರು ಕುರ್‌ಆನ್‌ನ ಉನ್ನತ ವಿಚಾರಗಳನ್ನು ತಪ್ಪಾಗಿ ವ್ಯಾಖ್ಯಾನಿಸಿಕೊಂಡಿದ್ದರ ಪರಿಣಾಮವಾಗಿ ಸಮಕಾಲೀನ ಸಮಸ್ಯೆಗಳು ಸೃಷ್ಟಿಯಾದವು ಎಂಬುದರ ಕಡೆ ಲೇಖಕರು ಬೆಳಕು ಚೆಲ್ಲುತ್ತಾರೆ.

ಊಳಿಗಮಾನ್ಯ ಮತ್ತು ಪಿತೃಪ್ರಭುತ್ವ ಮನಃಸ್ಥಿತಿಯ ಉಲೇಮಾಗಳಿಂದಾಗಿ ಕುರ್‌ಆನ್‌ನ ಮಾನವೀಯ ಮತ್ತು ಉದಾತ್ತ ತತ್ವಗಳು ಜನಸಮುದಾಯದಿಂದ ಮರೆಮಾಚಲ್ಪಟ್ಟಿವೆ ಎಂಬ ವಿಷಾದವನ್ನು ವ್ಯಕ್ತಪಡಿಸುವ ಅಸ್ಗರ್ ಅಲಿಯವರು 'ಕರುಣೆ ಮತ್ತೆ ಇಸ್ಲಾಂನ ಜೀವಾಳವಾಗಬೇಕು. ಇಸ್ಲಾಮೀ ಮೌಲ್ಯಗಳ ಕುರಿತು ಸೂಕ್ತ ಶಿಕ್ಷಣ ಪಡೆದ ಯುವಕರೇ ಕರುಣೆ ಹಾಗೂ ಮನುಷ್ಯಜೀವದ ಘನತೆಯನ್ನು ಎತ್ತಿಹಿಡಿಯುವುದು ಮತ್ತು ಇಸ್ಲಾಂನ ಹೆಸರಲ್ಲಿ ರಾಕ್ಷಸೀ ಕೃತ್ಯಗಳನ್ನು ತಡೆಯುವುದನ್ನು ತಮ್ಮ ಕರ್ತವ್ಯವೆಂದು ಭಾವಿಸಬೇಕು. ಅದುವೇ ನಿಜವಾದ ಜೆಹಾದಿಯಾದೀತು.' ಎಂಬ ಆಶಾವಾದವನ್ನು ವ್ಯಕ್ತಪಡಿಸುತ್ತಾರೆ.

ಇಂತಹದ್ದೊಂದು ಉತ್ತಮ ಕೃತಿಯನ್ನು ಅನುವಾದದಲ್ಲಿನ ಕ್ಲೀಶೆಗಳಿಲ್ಲದೆ ಕನ್ನಡೀಕರಿಸಿದ ಹಸನ್ ನಯೀಂ ಸುರಕೋಡರವರಿಗೆ ಕೃತಜ್ಞತೆಗಳು.

**–ಡಾ. ಸರ್ಫ್ರಾಜ್ ಚಂದ್ರಗುತ್ತಿ**

**‘ಹೊಸ ಮನುಷ್ಯ’ದ ಓದುಗರೆಲ್ಲರಿಗೂ**
**ಹೊಸ ವರ್ಷದ ಶುಭಾಶಯಗಳು**

**ಕರ್ಣಾಟಕ ಬ್ಯಾಂಕ್**
**ಶಿವಾನಂದನಗರ ಶಾಖೆ**
**ಧಾರವಾಡ**

ನಮ್ಮ ಕುಟುಂಬದ ಬ್ಯಾಂಕ್
ಭಾರತದಾದ್ಯಂತ

**‘ಹೊಸ ಮನುಷ್ಯ’ದ ಓದುಗರೆಲ್ಲರಿಗೂ**
**ಹೊಸ ವರ್ಷದ ಶುಭಾಶಯಗಳು**

ಮೆ॥ ಬ್ರೈಟ್ ಏಜೆನ್ಸೀಸ್
ಎಲ್.ಎಲ್.ಆರ್. ರಸ್ತೆ
ಶಿವಮೊಗ್ಗ-೫೭೭ ೨೦೧
(ಕರ್ನಾಟಕ)
ದೂರವಾಣಿ: ೦೮೧೮೨-೨೯೦೦೫೭
ಟೆಲಿಫ್ಯಾಕ್ಸ್: ೦೮೧೮೨-೨೭೯೮೫೦
ಈ ಮೇಲ್ :
ಛಿಡಿಣಚಿಡಿಚಿಟಿಛಿಥಿ@ಜಚಿಣಚಿಡಿಟಿಜಿಟಿ
ಛಿಡಿಣಚಿಡಿಚಿಟಿಛಿಥಿಜಿ@ರಿಟಿಟ.ಛಿಡಿ

'ಹೊಸ ಮನುಷ್ಯ'ದ ಓದುಗರೆಲ್ಲರಿಗೂ
ಹೊಸ ವರ್ಷದ ಶುಭಾಶಯಗಳು

ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿರುವ

**ವಿವೇಕ ಬ್ಯೂರೋ**

ಎಸ್.ಜೆ.ಪಿ. ಪಾರ್ಕ್ ರಸ್ತೆ
ಕೆ.ಆರ್ ಪುರಂ
**ಹಾಸನ–573 201**
**ದೂರವಾಣಿ: 08172–268253/9448867087**

HOSA MANUSHYA, a kannada monthly solely owned, edited, published and printed by D. S. Nagabhushana, at HIG-5, Kallahally Extn.,Vinoba Nagara, SHIVAMOGGA-577204. Printed at Ila Mudrana, Bengaluru-560 026 Ph.: 080-26757159

**ತಿಂಗಳ ಸಾಲುಗಳು...**



ಮನದಲ್ಲಿ ಕಫ ತುಂಬಿಕೊಂಡು ಬಾಯಿ ಮುಕ್ಕಳಿಸುವರು! ಸತ್ಯದ ಮೇಲೆ ಮನ ಇಡಿ. ಸತ್ಯದ ಸಾಕ್ಷಾತ್ಕಾರವಾದರೆ ಎಲ್ಲ ಅಂಗಗಳೂ ಸ್ವಚ್ಛವಾಗುವುವು

–ಗುರು ನಾನಕ್

**ಪತ್ರಿಕೆಗೆ ಶುಭವನ್ನು ಕೋರುವ...**

– ಬಿ.ಸುರೇಶ
ಹಾ. ವಿಜಯಾ

Regd. News Paper RNI No. KARKAN/2012/47568
Rgd No. KA/SK/SMG-1209/2013-15

ಇವರಿಗೆ \ To

If undelivered, please return to D.S. Nagabhushana, Editor,
'Hosa Manushya', 'HIG-5, 'Nudi', Kallahalli Extension,
Vinoba Nagara, Shivamogga -577204 (Karnataka)